
ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 25 ಸಂಚಿಕೆ 42-43
ಅಕ್ಟೋಬರ್ 26, 2003 ಬೆಲೆ ರೂ. 4.00


ಮೈಸೂರಿನಲ್ಲಿ
9ನೇ CITU ಕರ್ನಾಟಕ ರಾಜ್ಯ ಸಮ್ಮೇಳನ



ಕುಸಿದ ಕೈಗಾರಿಕೆ ಕಂಗಾಲಾದ ದುಡಿವ ಜನ




ಎತ್ತ ಸಾಗಿದೆ ಈ ನಾಗರಿಕ ಸಮಾಜ ?


ಕಾಂಗ್ರೆಸ್ ಪದವಿ-ಪದಚ್ಯುತಿ


ಕನ್ನಡ ಚಿತ್ರರಂಗ ಕಲಹವೇಕೆ ?


ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ

48



ಕಳೆದ ಸಂಚಿಕೆಯಲ್ಲಿ ನೀರಿದ್ದ ಸ್ಥಳದಲ್ಲಿ ಹೋರಾಟಗಾರರಿಗೆ ಹೊಂಚು ಹಾಕಿ ಕಾಯುತ್ತಿದ್ದ ಪೋಲೀಸರು, ಪೋಲೀಸರ ಮೇಲೆ ಆಕ್ರಮಣ ಮಾಡೋಣವೆಂದ ಸಹನೆ ಕಳೆದುಕೊಂಡ ಗೆರಿಲ್ಲಾ ಸಂಗಾತಿ, ಸಾಗಬೇಕಾದ ಹಾದಿಯ ಬಗ್ಗೆ ಚಿಂತಾಮಗ್ನವಾದ ತಂಡ ಮತ್ತು ಜೇನು ಮನುಷ್ಯನ ಮಾರ್ಗದರ್ಶನದಲ್ಲಿ ಪಯಣ... ಈ ಬಗ್ಗೆ ಓದಿರುವಿರಿ. ಮುಂದೆ...

ಕನ್ನಡಕ್ಕೆ: ವಿಶ್ವ ಕುಂದಾಪುರ

ಕಾರ್ಮಿಕ ವರ್ಗದ ಶಿಕ್ಷಣ

"ನಾವೀಗ ಯಾವ ಮಾರ್ಗದಲ್ಲಿ ಹೋಗಬೇಕೆಂಬುದನ್ನು ನೀವೇ ನಿರ್ಧರಿಸಿ, ಸಂಗಾತಿಗಳೇ" ಪ್ರಾದೇಶಿಕ ಕಾರ್ಯದರ್ಶಿ ಸಮಸ್ಯೆಯನ್ನು ಮುಂದಿಟ್ಟರು.

ಕಾರ್ಮಿಕ ವರ್ಗದ ಶಿಕ್ಷಣ

ಕಾರ್ಮಿಕ ವರ್ಗ ಚಳುವಳಿಯ ಶಿಕ್ಷಣದ ಕುರುಹುಗಳು ಈ 'ಸಮಾವೇಶ'ದಲ್ಲಿ ಕಂಡುಬಂದವು. ಪೂರ್ಣಪ್ರಮಾಣದ, ಮುಕ್ತ ಚರ್ಚೆ ಆರಂಭವಾಯಿತು. ಹೆಗಲ ಮೇಲೆ ಬಂದೂಕು ಇಳಿಬಿಟ್ಟಿದ್ದ ಸ್ಕ್ವಾಡ್ ಸದಸ್ಯನೊಬ್ಬ ಎದ್ದು ನಿಂತು ಪ್ರಶ್ನೆಯೊಂದನ್ನು ಮುಂದಿಟ್ಟ.

'ಮಾರ್ಗ'ವನ್ನು ಸಲಹೆ ಮಾಡಿದ ಪ್ರತಿಯೊಬ್ಬ ಸಂಗಾತಿಯು ಆ ಮಾರ್ಗದ ಆಯ್ಕೆಗೆ ಕಾರಣ ವೇನೆಂಬುದನ್ನು ವಿವರಿಸುತ್ತೀರಾ? ಎನ್ನುವುದು ಪ್ರಶ್ನೆ.

ಆಗ ಸ್ಕ್ವಾಡ್ ಕಮಾಂಡರ್ ಎದ್ದು ನಿಂತು - 'ಸಂಗಾತಿಗಳೇ, ನಾನು ಮಾರ್ಗವನ್ನು ಆಯ್ಕೆ ಮಾಡಿಲ್ಲ. ಈ ಸಂಗಾತಿಗಳನ್ನು ಈ ಮಾರ್ಗವಾಗಿ ಕರೆದೊಯ್ಯಲು ಏರಿಯಾ ಹೆಡ್‌ಕ್ವಾರ್ಟರ್ಸ್ ನನಗೆ ಸೂಚಿಸಿದೆ. ಆ ಆದೇಶವನ್ನು ನಾನು ಪಾಲಿಸುತ್ತೇನೆ" ಎಂದು ಹೇಳಿದರು.

"ಸಮಾವೇಶ' ವೊಂದರಲ್ಲಿ ನೀವು ಹಾಗೆ ಹೇಳಲಾಗದು. ಮಾರ್ಗವನ್ನು ನಾವು ನಿರ್ಧರಿಸುತ್ತೇವೆ. ಸಮಾವೇಶದಲ್ಲಿ ಇದ್ದೀರೆಂಬುದು ನಿಮಗೆ ಗೊತ್ತಿಲ್ಲವೆ?" ಹಲವು ಧ್ವನಿಗಳು ಕೇಳಿಬಂದವು.

"ಈ ರೀತಿ ಮಾತನಾಡಿ ನಾನು ತಪ್ಪು ಮಾಡಿದ್ದೇನೆ. ಆದರೆ ನಾನು ಸತ್ಯವನ್ನೇ ಹೇಳಿದ್ದೇನೆ". - ಎನ್ನುತ್ತಾ ಸ್ಕ್ವಾಡ್ ಕಮಾಂಡರ್ ಕುಳಿತುಕೊಂಡರು.

ಕುಂದನ್ ಎದ್ದು ನಿಂತ. ನಾನು ಈಗಾಗಲೇ ಹೇಳಿರುವ ಅಂಶಗಳನ್ನು ತಿಳಿಸುತ್ತಾ ಗ್ರೌಂಡ್‌ಲೀಡರ್ ಸೂಚಿಸಿದ ಮಾರ್ಗವನ್ನು ತಳ್ಳಿಹಾಕಿದ.

"ಸ್ಕ್ವಾಡ್ ನಾಯಕ ತತ್ವಾಂಧತೆಯಿಂದ ವರ್ತಿಸುತ್ತಿದ್ದಾರೆ ಎಂದು ನನಗನಿಸುತ್ತದೆ. ಆದೇಶಗಳನ್ನು ಅವರು ಯಾಂತ್ರಿಕವಾಗಿ ಪಾಲಿಸುತ್ತಿದ್ದಾರೆ. ಇದು ಅಪಾಯಕಾರಿಯಾದುದು, ಕಾಮ್ರೇಡ್ಸ್ ಯಾವ ಪರಿಸ್ಥಿತಿಯನ್ನು ಅನುಲಕ್ಷಿಸಿ ಏರಿಯಾ ಹೆಡ್‌ಕ್ವಾರ್ಟರ್ಸ್ ಅವರಿಗೆ ಆದೇಶ ನೀಡಿತ್ತೋ ಆ ಪರಿಸ್ಥಿತಿ ಈಗ ಸಂಪೂರ್ಣವಾಗಿ ಬದಲಾಗಿದೆ. ಹೊಸ ಸನ್ನಿವೇಶ ಉದ್ಭವಿಸಿದೆ. ಹೊಸ ಉತ್ತರ ಅಗತ್ಯವಾಗಿದೆ" ಕುಂದನ ಹೇಳಿದ.

ತಾನು ಸೂಚಿಸಿದ ಮಾರ್ಗದ ಅನುಕೂಲಗಳೇನೆಂಬುದನ್ನು ಆತ ವಿವರಿಸತೊಡಗಿದ. ಆ ಮಾರ್ಗ ತುಂಬಾ ಸುಲಭವಾದುದು, ಅಲ್ಲಿ ಒಂದೇ ಒಂದು ಪೋಲೀಸ್ ಶಿಬಿರವಿದೆ. ಶತ್ರುಗಳ ಕಾವಲನ್ನು ಎದುರಿಸಬಹುದು. ಆದರೆ ಸ್ಕ್ವಾಡ್ ಲೀಡರ್ ಮಾರ್ಗಕ್ಕಿಂತ ಈ ಮಾರ್ಗದಲ್ಲಿ ಅಂಥ ಪರಿಸ್ಥಿತಿ ಉದ್ಭವವಾಗುವುದು ಕಡಿಮೆ ಎಂದು ಹೇಳಿದ.

'ಜೇನು ಬೇಟೆಗಾರನ ವಿವರಣೆ

ಜೇನು ಬೇಟೆಗಾರ ಕೊನೆಗೂ ಎದ್ದು ನಿಂತು, ನಿರರ್ಗಳವಾಗಿ, ಗಟ್ಟಿದನಿಯಲ್ಲಿ ಮಾತನಾಡಿದ, ಕೈಗಳಿಂದ, ಹಾವಭಾವ ಮಾಡುತ್ತಾ ಮಾತನಾಡಿದ.

'ಈ ಎರಡೂ ಮಾರ್ಗಗಳು ಅಪಾಯಕಾರಿಯಾದವುಗಳು ಯಾಕೆಂದರೆ ಇವೆರಡೂ ಜನರು ಓಡಾಡುವ ದಾರಿಗಳು, ವೈರಿಗಳಿಗೂ ಚೆನ್ನಾಗಿ ಗೊತ್ತಿರುವಂಥವುಗಳು. ಬೆಟ್ಟಗುಡ್ಡ ಹತ್ತಲು ಆಲಸ್ಯವಾಗಿ ಸುಲಭ ಮಾರ್ಗದಲ್ಲಿ ಹೋದ ನಮ್ಮ ಅನೇಕ ಸಂಗಾತಿಗಳು ವೈರಿಗಳಿಂದ ಹತರಾದ ಅನೇಕ ಉದಾಹರಣೆಗಳನ್ನು ನಾನು ಕೊಡಬಲ್ಲೆ. ಹೆಚ್ಚು ಪರಿಚಿತವಲ್ಲದ ಮಾರ್ಗದಲ್ಲಿ ನಾವು ಹೋಗಬೇಕು. ನಮ್ಮಂಥ, ಜೇನು ತೆಗೆಯುವವರ ರೀತಿಯಲ್ಲಿ ನಾವು ಅಪರಿಚಿತ ದಾರಿಯಲ್ಲಿ ಸಾಗಬೇಕು, ನಾವೀಗ ತೆಗೆದುಕೊಳ್ಳುವ ನಿರ್ಧಾರದ ಮಹತ್ವವನ್ನು ಅರಿತುಕೊಳ್ಳಬೇಕು. ಇದು ನಮ್ಮ ಪ್ರಾದೇಶಿಕ ಸಮಿತಿ ಕಾರ್ಯದರ್ಶಿ ಹಾಗೂ ಅವರ ಗೆಳೆಯರ ಸುರಕ್ಷತೆಯ ಪ್ರಶ್ನೆಯಾಗಿದೆ- ಎಂದು ರಂಗಣ್ಣ ಪ್ರತಿಪಾದಿಸಿದರು.

ಸಮಾವೇಶದಲ್ಲಿ ಪಾಲ್ಗೊಂಡ ಪ್ರತಿಯೊಬ್ಬರು ದೃಢವಿಶ್ವಾಸದಿಂದ ಸ್ಪಷ್ಟವಾಗಿ ಮಾತನಾಡಿದರು. 'ಜೇನು ಬೇಟೆಗಾರ'ನ ಅಭಿಮತಕ್ಕೆ ಹೆಚ್ಚು ಮತ ಸಿಕ್ಕಿತು. ಅವರ ಮಾರ್ಗವೇ ಸರಿಯೆಂದಾಯಿತು. ಮಾರ್ಗದರ್ಶಕನಾಗಿ ಅವರು ನಮ್ಮ ಜತೆ ಬರುವುದೆಂದು ನಿರ್ಧಾರವಾಯಿತು. 'ತತ್ವಾಂಧತೆ' ಹಾಗೂ 'ಯಾತ್ರಿಕತತೆ'ಗಾಗಿ ಸ್ಕ್ವಾಡ್ ನಾಯಕ ತೀವ್ರ ಟೀಕೆಗೆ ಒಳಗಾದರು. ಹಿಂದಿನ ತಪ್ಪುಗಳಿಂದಾಗಿ ಪಾಠ ಕಲಿಯದಿರುವುದಕ್ಕಾಗಿ ಮತ್ತು ಶತ್ರುಗಳಿಗೆ ತಿಳಿದಿರುವ ಮಾರ್ಗಗಳನ್ನು ನಿವಾರಿಸದಿರುವುದಕ್ಕಾಗಿ - ಅವು ಎಷ್ಟು 'ಸುರಕ್ಷಿತ' ಅಥವಾ 'ಅಪಾಯಕಾರಿ' ಎಂಬುದನ್ನು ಪರಿಗಣಿಸದೆ ಕುಂದನ್‌ರನ್ನು ಕೂಡ ಟೀಕಿಸಲಾಯಿತು.

ನಾನು ಈ ಸಮಾವೇಶದ ಬಗ್ಗೆ ತುಂಬಾ ವಿವರವಾಗಿ ಹೇಳಿದ್ದೇನೆ. ಆದರದು ಅಪ್ರಜ್ಞಾಪೂರ್ವಕ ವಾಗಿ ಅಲ್ಲ. ಸಾಮೂಹಿಕ ಹಾಗೂ ಪ್ರಜಾಸತ್ತಾತ್ಮಕ ಚರ್ಚೆ ಮತ್ತು ನಿರ್ಧಾರಗಳ ಈ ಸಾಧನದ ಒತ್ತಡದಿಂದಾಗಿ ರೈತರ ವೈಯಕ್ತಿಕವಾದ, ತತ್ವಾಂಧತೆ ಮತ್ತು ಸಂಕುಚಿತವಾದವನ್ನು ತುಂಡರಿಸಲು ಸಾಧ್ಯವಾಯಿತು. ಈ ಸಾಧನದ ಒತ್ತಡ ಹಾಗೂ ಅದರ ಜೀವಂತಿಕೆ ಯಿಂದಾಗಿಯೇ ದುಡಿಯುವ ವರ್ಗದ ಪ್ರಜಾಪ್ರಭುತ್ವದ ಸ್ವರೂಪ ಹಾಗೂ ತಿರುಳುಗಳು ಸೃಷ್ಟಿಯಾದವು. ನಮ್ಮದೇ ದೇಶದ ಕಾರ್ಷಿಕ ವಾತಾವರಣದಲ್ಲಿ ನೈಜ ಪ್ರಜಾಪ್ರಭುತ್ವದ ಪ್ರಥಮ ಸುಳಿವುಗಳು ಕಂಡದ್ದು ಇಲ್ಲಿಯೆ. ಈ ಎಲ್ಲಾ ಮಹತ್ವದ ಕಾರಣಗಳಿಗಾಗಿ ನಾನಿಲ್ಲಿ ಸಮಾವೇಶದ ಬಗ್ಗೆ ವಿವರವಾಗಿ ಬರೆದೆ.

> **ಗುಡಾರಗಳು, ಮಣ್ಣಿನ ಗುಡಿಸಲುಗಳು ಅಥವಾ ಜಲ-ನಿರೋಧಕಗಳು ಇವ್ಯಾವುವೂ ಇಲ್ಲದೆ; ತಮ್ಮ ಭೇಟಿಯಿಂದಾಗಿ ಜನರಿಗೆ ತೊಂದರೆ ಆಗಬಾರದೆಂಬ ಮಹದುದ್ದೇಶ ಹೊಂದಿದ ಈ ಧೀರ ಯುವಜನರು ಎಲ್ಲ ರೀತಿಯ ಬಿರುಗಾಳಿಯನ್ನು ದಿಟ್ಟತನದಿಂದ ಎದುರಿಸಿದರು.**

'ಜೇನುಗಾರ'ನನ್ನು ಹಿಂಬಾಲಿಸುವುದು ತಮಾಷೆಯ ಸಂಗತಿಯಾಗಿರಲಿಲ್ಲ. ಆತ ಭೀಕರ ವೇಗದಲ್ಲಿ ಸಾಗುತ್ತಿದ್ದ. ಆ ಮಾರ್ಗ ತುಂಬಾ ಕಠಿಣವಾಗಿತ್ತು, ಹಿಂಸಾದಾಯಕವಾಗಿತ್ತು. ಏದುಸಿರುಬಿಡುತ್ತಾ, ಮುಳ್ಳು ಕಂಟಿಗಳಿಂದ ತಪ್ಪಿಸಿಕೊಳ್ಳಲು ಪೊದೆಗಳಿಂದ ಬಗ್ಗುತ್ತಾ ನಮ್ಮ ಗೈಡ್ ಜತೆ ಹೆಜ್ಜೆ ಹಾಕುತ್ತಾ ಸಾಗಿದೆವು.

ಮುಂಜಾನೆ ಎರಡು ಗಂಟೆ. ತಂಪು ಗಾಳಿ ಬೀಸುತ್ತಿತ್ತು. ಹಸಿ ಹುಲ್ಲನ್ನು ಕತ್ತರಿಸಿದ ಪರಿಮಳ ಗಾಳಿಯಲ್ಲಿ ತೇಲಿಬರುತ್ತಿತ್ತು. ದೂರದಲ್ಲೆಲ್ಲೋ ಹುಲಿಯೊಂದು ಘರ್ಜಿಸಿತು. ಸರ್ಪವೊಂದು ನಮ್ಮ ಎಡಗಡೆಯಿಂದ ಸರಿದು ಹೋಯಿತು. ಸೊಳ್ಳೆಗಳು ನಿರಂತರವಾಗಿ ಕಚ್ಚುತ್ತಲೇ ಇದ್ದವು. ಈ ನಡುವೆ ಆಕಾಶದಲ್ಲಿ ಮಿಂಚು-ಗುಡುಗಿನ ಆರ್ಭಟ. ಕಪ್ಪು ಮೋಡಗಳು ತೇಲಿ ಬಂದವು. ಎಲ್ಲರಿಗೂ ನಿಲ್ಲುವಂತೆ ರಂಗಣ್ಣ ಸೂಚಿಸಿದ.

ದೊಡ್ಡ ಬಂಡೆ ಕಲ್ಲೊಂದರ ಕೆಳಗಿನ ಸಂದಿ ನಮ್ಮನ್ನೇ ದಿಟ್ಟಿಸಿ ನೋಡುವಂತಿತ್ತು. ಹೇಗೋ ಹೇಗೋ ತೂರಿ ಹೋಗಿ ಅದರಲ್ಲಿ ಆಶ್ರಯ ಪಡೆದೆವು. ಧೋ ಎಂದು ಮಳೆ ಸುರಿಯತೊಡಗಿತು, ಮರಗಳು ಜೀಕುವ ಸದ್ದು ಕೇಳಿ ಬರುತ್ತಿತ್ತು. ಅದರ ಬೆನ್ನಲ್ಲೇ ಬೆಟ್ಟದ ತೊರೆಗಳು ಮಳೆ ನೀರಿನಿಂದ ತುಂಬಿ ಕೊಂಡು ಧುಮ್ಮಿಕ್ಕುವ ಶಬ್ದ ಕಿವಿಗೆ ಬಡಿಯಿತು.

'ಮಳೆ ಬೇಗನೆ ನಿಲ್ಲಲಿದೆ' ಎಂದು ಜೇನು ಬೇಟೆಗಾರ ಸಹಜವಾಗಿ ಹೇಳಿದ. ಇದೊಂದು ವರದಾನದಂತಿತ್ತು. ಇಂಥ ಬಿರುಗಾಳಿಯಲ್ಲಿ ಯಾವ ವೈರಿಯೂ ಕಾವಲಿಗಾಗಿ ಹೊರಗೆ ಕಾಲಿಡಲಾರ.

ನಾನು ಈ ಬಿರುಗಾಳಿಗೆ ಹಿಡಿಶಾಪ ಹಾಕಿದ್ದೆ ಎಂಬುದನ್ನು ನಾನಿಲ್ಲಿ ಒಪ್ಪಿಕೊಳ್ಳಲೇಬೇಕು. ನನಗೆ ಭಾರಿ ಆಯಾಸವಾಗಿತ್ತು. ನಯವಾದ ಬಂಡೆಯೊಂದರ ಮೇಲೆ ಕೆಲವು ತಾಸು ಹಾಯಾಗಿ ನಿದ್ದೆ ಮಾಡಬೇಕು ಎನಿಸಿತ್ತು. ಅದರೆ ಆ ಸ್ಥಿತಿ ಈಗ ಇಲ್ಲ.

ವೈರಿ ವಿರುದ್ಧ ಹವಾಮಾನದ ಅಸ್ತ್ರ!

ಈ ಬಿರುಗಾಳಿ ಹಾಗೂ ರೈತರ ಪ್ರದೇಶಗಳಲ್ಲಿ ಕಳೆದ ಮುಂದಿನ ಹಲವು ತಿಂಗಳಲ್ಲಿ ಎದುರಾದ ಇನ್ನೂ ಇಂಥ ಬಿರುಗಾಳಿಯನ್ನು ರೈತರು ವರವೆಂದೇ ಸ್ವಾಗತಿಸಿದರು. ಈ ಬಿರುಗಾಳಿಗಳಿಂದಾಗಿ ಶತ್ರುಗಳ ಚಲನವಲನಕ್ಕೆ ಅಡ್ಡಿಯುಂಟಾಯಿತು, ರೈತರಿಗೆ ನೆರವಾಯಿತು. 'ಹವಾಮಾನ'ವನ್ನು ಅವರು ಶತ್ರುಗಳ ವಿರುದ್ಧ ಅವರು 'ಶಸ್ತ್ರ' ವನ್ನಾಗಿ ಬಳಸಿಕೊಂಡರು. ಈ ಪ್ರಕ್ರಿಯೆಯಲ್ಲಿ ಅವರು ವಿಜ್ಞಾನಿಗಳ ನಿಷ್ಪ್ರಹತೆಯನ್ನು ಪಾಲಿಸಿದರು.

(ಮುಂದುವರಿಯುವುದು)



ಶ್ರಮಜೀವಿಗಳ ಸಮರದಲ್ಲಿ ದುಡಿವ ಜನರ ಪ್ರಾಣಮಿತ್ರನೂ..

ಇದು ವಿಶೇಷ ಲೇಖನಗಳುಳ್ಳ ಸಂಚಿಕೆ. ದುಡಿವ ವರ್ಗದ ಮಹಾನ್ ಸಮರಶೀಲ ಸಂಘಟನೆಯಾಗಿರುವ 'ಸಿಐಟಿಯು' ಮೈಸೂರಿನಲ್ಲಿ ರಾಜ್ಯ ಸಮ್ಮೇಳನ ಸಂಘಟಿಸುತ್ತಿದೆ. ನಾಡಿನ ಎಲ್ಲಾ ಮೂಲೆಮೂಲೆಗಳಿಂದ ಬೆಂದು-ನೊಂದ ಜನತೆಗಾಗಿ, ಸಂಘರ್ಷದ ಕುಲುಮೆಯಲ್ಲಿ ಅರಳಿದ ಕೆಂಪು ತಾರೆಗಳು ಅಲ್ಲಿ ಸೇರಿ ನಾಡಿನ ಉಳಿವಿಗೆ ಚಿಂತಿಸುತ್ತಿದ್ದಾರೆ. ಪರ್ಯಾಯ ಮಾರ್ಗಗಳನ್ನು ರೂಪಿಸುತ್ತಿದ್ದಾರೆ. ಚಳುವಳಿಯ ಅನುಭವ ಮಥಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಆ ಪ್ರಕ್ರಿಯೆಯಿಂದ ದುಡಿವ ಜನರ ಪ್ರಾಣಮಿತ್ರ ದೂರ ಉಳಿಯಲು ಹೇಗೆ ಸಾಧ್ಯ? ಅದಕ್ಕಾಗಿ ಆ ಹೊಸಬೆಳಕು, ಕಣ್ನೋಟ ನೀಡುವ ಚಳುವಳಿ-ಚಿಂತನೆ ಬೆಸೆಯುವ ಲೇಖನಗಳ ಈ ಸಂಚಿಕೆ ನಿಮ್ಮ ಕೈಗೆ. ನೀವು ಇದನ್ನು ಸ್ವಾಗತಿಸುತ್ತೀರಿ ತಾನೆ? ಓದಿ - ಮನನ, ಮಂಥನ ಮಾಡಿ, ನಮಗೂ ನಿಮ್ಮ ಅನಿಸಿಕೆ ತಿಳಿಸಿ. ಖಂಡಿತಾ ತಿಳಿಸಿ

- ಸಂ

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಅಕ್ಟೋಬರ್ 16 ರಿಂದ 19**
  ಸಿಐಟಿಯು ರಾಜ್ಯ ಸಮ್ಮೇಳನ
  ಉದ್ಘಾಟನೆ : ಡಾ. ಎಂ.ಕೆ.ಪಂಧೆ, ಅ.ಭಾ. ಪ್ರ.ಕಾರ್ಯದರ್ಶಿ, ಸಿಐಟಿಯು
  ಅಧ್ಯಕ್ಷತೆ : ಬಿ.ಮಾಧವ; ಕ. ರಾಜ್ಯಾಧ್ಯಕ್ಷರು, ಸಿಐಟಿಯು
  ಸ್ಥಳ : (ಕಾಂ. ಸೂರಿ ನಗರ), ನಂಜರಾಜ ಬಹದ್ದೂರ್ ಛತ್ರ, ವಿನೋಬಾ ರಸ್ತೆ, ಮೈಸೂರು
- **ಅಕ್ಟೋಬರ್ 19**
  'ಏಕರೂಪ ನಾಗರಿಕ ಸಂಹಿತೆ' ಸಂವಾದ
  ಸ್ಥಳ: ಎ.ಟಿ.ಪೈ. ಸ್ಮಾರಕ ಹಿಂದಿ ಭವನ, ಬೆಳಿಗ್ಗೆ 9.45 ಕ್ಕೆ. ವಿಷಯ ಮಂಡನೆ : ಖ್ಯಾತ ನ್ಯಾಯವಾದಿ ಯಶವಂತ ಮರೋಳಿ
  ಸಂಘಟಕರು : ಉಡುಪಿ ಜಿಲ್ಲಾ ವಿಚಾರ ವೇದಿಕೆ
- **ಅಕ್ಟೋಬರ್ 19**
  ನವ ಕರ್ನಾಟಕ ಪ್ರಕಾಶನ ಮತ್ತು ಡಾ.ಜಿ.ರಾಮಕೃಷ್ಣ ಅಭಿನಂದನಾ ಸಮಿತಿಯಿಂದ 'ಯೋಗಪ್ರವೇಶ' ಪುಸ್ತಕ ಬಿಡುಗಡೆ - ನಯನಾ ಸಭಾಂಗಣ, ಕನ್ನಡ ಭವನ, ಬೆಂಗಳೂರು
  ಕೃತಿ ಬಿಡುಗಡೆ - ವೀರಭದ್ರ ಚನ್ನಮಲ್ಲ ಸ್ವಾಮೀಜಿ
- **ಅಕ್ಟೋಬರ್ 23**
  ರೈತರ ಆತ್ಮಹತ್ಯೆಗೆ ರಾಜ್ಯ-ಕೇಂದ್ರ ಸರ್ಕಾರಗಳ ನಿರ್ಲಕ್ಷ್ಯಗಳ ವಿರುದ್ಧ ಸಿಪಿಐ(ಎಂ) ಧರಣಿ
- **ನವೆಂಬರ್ 17**
  ರೈತರ ಆತ್ಮಹತ್ಯೆಗೆ ರಾಜ್ಯ-ಕೇಂದ್ರ ಸರ್ಕಾರಗಳ ನಿರ್ಲಕ್ಷ್ಯಗಳ ವಿರುದ್ಧ ತಾಲ್ಲೂಕು, ಜಿಲ್ಲಾ ಕೇಂದ್ರಗಳಲ್ಲಿ ಪಿಕೆಟಿಂಗ್ ಮತ್ತು ಮುತ್ತಿಗೆ.

ಕರ್ನಾಟಕ ಕಾಂಗ್ರೆಸ್ : ಪದವಿ ಮತ್ತು ಪದಚ್ಯುತಿ

ಮುಖ್ಯಮಂತ್ರಿ ಎಸ್.ಎಂ.ಕೃಷ್ಣರವರು ...ನಸ್ಪಂದನ ಯಾತ್ರೆ' ಮುಗಿಸಿ ದಣಿವಾರಿಸಿ ...ಳ್ಳುತ್ತಿದ್ದಾರೆ. ಅಧಿಕಾರಕ್ಕೇರಿ ನಾಲ್ಕು ವರುಷಗಳು ...ಂಬುತ್ತಿರುವ ಮುಖ್ಯಮಂತ್ರಿಗಳೇ ...ೀಗಬೇಕಿತ್ತೆ? ಅನುದಾನದ ಜನಪ್ರತಿಕ್ರಿಯೆಯ ...ಯಲಾರದಷ್ಟು ಸರ್ಕಾರದ ಯಂತ್ರ, ಆಡಳಿತ ... ಜನರಿಂದ ದೂರವಾಗಿತ್ತೇ? ಅಂತೂ ಕೃಷ್ಣರ ...ಾತ್ರೆಯುದ್ದಕ್ಕೂ ಜನರ ತೀವ್ರ ಹತಾಶ, ಆಕ್ರೋಶ ...ದುರಿಸಬೇಕಾಗಿ ಬಂದಿದೆ. ...ಮಕೂರು, ಚಿತ್ರದುರ್ಗ, ಸಂಡೂರು ...ಂತಾದೆಡೆ ಮುಖ್ಯಮಂತ್ರಿಗಳೆದುರು ಜನ ತಮ್ಮ ...ಷ್ಟ ಕುಡಿವ ನೀರಿನಂತಹ ಸಮಸ್ಯೆ ಕಿಂಚಿತ್ತೂ ...ಿಹಾರವಾಗದ ಬಗ್ಗೆ, ರಂಗನಾಥ್, ...ೇರ್ಪಡೆಯಂತಹ ಸಚಿವರ ಬಗ್ಗೆ ಉಗ್ರವಾದ ...ಕ್ರೋಶ ತೋಡಿಕೊಂಡಿರುವುದು ವಾಸ್ತವಾಂಶ. ...ಲ್ಲಿ ತಮಗಾಗದವರ ಪಿತೂರಿ ಎಂದು ಆ ಹಿರಿಯ ...ಿವರು ಹೇಳಿಕೊಂಡಿದ್ದು ನಾಚಿಕೆಗೇಡು. ಅಂಗೈ ...ಣ್ಣಿಗೆ ಕನ್ನಡಿ ಬೇಕೆ? ಎಂಬ ಪ್ರಶ್ನೆ ಎಳುತ್ತದೆ ...ಲ್ಲಿ. ಅದೇನೇ ಇದ್ದರೂ ಕೃಷ್ಣ ...ರ್ಕಾರದ ವೈಫಲ್ಯಗಳ ...ರವಾಲೆಯಲ್ಲಿರುವ ...ಕರಣಗಳಿವು ಎಂಬುದು ...ಸ್ತವಿಕ.

ಈ ವಾರ ಕರ್ನಾಟಕ
ಒಂದು ನೋಟ
— ಎಸ್.ವೈ.ಗುರುಶಾಂತ್

ಈ ಯಾತ್ರೆ ಜನರ ...ವು-ನೋವು ಅರಿಯಲೆಂದು ಹೇಳಿಕೊಂಡರೂ ...ಂದರ್ಭದಲ್ಲಿ ಇದು ಚುನಾವಣಾ ಪ್ರಚಾರದ ...ರಂಭವೆಂದೇ ಹೇಳಬೇಕು. ರಾಜ್ಯದಲ್ಲಿ ತೀವ್ರ ...ರಗಾಲ, ರೈತರ ಆತ್ಮಹತ್ಯೆಗಳು, ಕೂಲಿಕಾರರ ಹಸಿವಿನ ಸಾವು ಹೀಗೆ ಗಂಭೀರವಾದ ಪರಿಸ್ಥಿತಿಯನ್ನು ಮುಸುಕುಗೊಳಿಸಿ ಮಾಧ್ಯಮಗಳಲ್ಲಿ ಸತತವಾಗಿ ನಾಲ್ಕು ದಿನಗಳೂ ಪ್ರಚಾರದ ಕೇಂದ್ರವಾಗುವುದು ಒಂದೆಡೆಯಾದರೆ, ಇಡೀ ಸರ್ಕಾರದ, ಪಕ್ಷದ ಕೇಂದ್ರ ಬಿಂದುವೇ ಕೃಷ್ಣ ಎಂದು ಬಿಂಬಿಸುವುದೂ ಇನ್ನೊಂದೆಡೆ. ನಾಲ್ಕು ವರುಷ ಪೂರೈಸಿದ ದಿನ ವಿಜಾಪುರದಲ್ಲಿ ಅಕ್ಟೋಬರ್ 11 ರಂದು ಕೃಷ್ಣರ ಪಡೆ ಭಾರೀ ಬಹಿರಂಗಸಭೆ ನಡೆಸಿದೆ. ತಮ್ಮ ಎಲ್ಲಾ ವೈಫಲ್ಯಗಳಿಗೂ ಕೇಂದ್ರ ಸರ್ಕಾರದ ಮೇಲೆ ಹೊಣೆಹಾಕಿ, ಜಾರಿಕೊಳ್ಳುವ ಇರಾದೆ ಪ್ರಕಟವಾಗಿದೆ. ಇಂತಹ ಮಾತಿನ ಸಂಘರ್ಷ ಕಣ್ಮರೆಸುವ ತಂತ್ರ ಅಷ್ಟೇ- ಆದರೆ ಅಲ್ಲಾದರೂ ಜನರ ನಡುವೆ ನಡೆದಾಡಿದ ಕೃಷ್ಣ ನೆಲದ ಮಕ್ಕಳ ಘೋರ ಪರಿಸ್ಥಿತಿಗೆ ಸ್ಪಂದಿಸಿ ಜನರನ್ನು ಉಳಿಸಲು ಯೋಜನೆಗಳನ್ನು ಪ್ರಕಟಿಸಿದ್ದರೆ ಈ ಜನಸ್ಪಂದನ ಯಾತ್ರೆಗೆ ಅರ್ಥ ಬರುತ್ತಿತ್ತು. ಆದರೆ ಅಂತಹದ್ದೇನನ್ನು ಪ್ರಕಟಿಸದೇ ಕೃಷ್ಣ ಜನದ್ರೋಹಿಯಾಗಿಯೇ ಮುಂದುವರಿಯುವ ನಿರ್ಧಾರ ಅಪರೋಕ್ಷವಾಗಿ ಹೇಳಿದ್ದಾರೆ.

ಸ್ಫೋಟಗೊಂಡ ಭಿನ್ನಮತಿ : ಈ ಯಾತ್ರೆಯ ಬಳಿ ಸಚಿವ ಧರಂಸಿಂಗ್‌ರವರು ಮುಂದಿನ ಚುನಾವಣೆಯು ಕೃಷ್ಣರ ಸಾರಥ್ಯದಲ್ಲೇ ಎಂದು ಸಾರಿರುವುದು ಭಿನ್ನಮತ ಬೀದಿಗೆ ಬರುವಂತಾಗಿ, 'ಇನ್ನೂ ಪ್ರಯತ್ನಿಸಲಾಗುತ್ತಿದೆ' ಎಂದು ಕಾಂಗ್ರೆಸ್ ಅಧ್ಯಕ್ಷ ಜನಾರ್ಧನ ಪೂಜಾರಿ ಬಹಿರಂಗವಾಗಿ ಟೀಕಿಸಿರುವುದು, ಹಿರಿಯ ನಾಯಕ, ಹಾಲಿ ಎಂ.ಪಿ.ಜಾಫರ್ ಶರೀಫ್ ಕೃಷ್ಣರ ಸರ್ಕಾರದ ವಿರುದ್ಧ ಹಣಾಹಣಿಗೆ ನಿಂತಿರುವುದು, ಸಚಿವ ವಿಶ್ವನಾಥ್ ಕೃಷ್ಣರ ಬಲಗೈ ಬಂಟನಾದ ಡಿ.ಕೆ.ಶಿವಕುಮಾರ್ ವಿರುದ್ಧ ಕಿಡಿಕಾರಿರುವುದು ಗಮನಾರ್ಹ ಸಂಗತಿಗಳು. ಕಾಂಗ್ರೆಸ್‌ನ ಹೈಕಮಾಂಡ್‌ನ್ನು, ಸೋನಿಯಾಗಾಂಧಿಯನ್ನು 'ಸಂಪ್ರೀತ'ಗೊಳಿಸಿ ತಾನು, ತನ್ನ ಸ್ಥಾನ ಭದ್ರ ಎಂದು ಬೀಗುತ್ತಿರುವಾಗಲೇ ಕೃಷ್ಣರ ರಥದ ಚಕ್ರಕ್ಕೆ ಪಂಕ್ಚರ್ ಆಗಿದ್ದು ಭಿನ್ನಮತ ಈ ಚುನಾವಣಾ ವರುಷದಲ್ಲಿ ಹೆಚ್ಚು ಹೆಚ್ಚು ಆಸ್ಫೋಟಗೊಳ್ಳುವ ಸೂಚನೆ ಒದಗಿಸಿದೆ. ತಮ್ಮ ಪದಚ್ಯುತಿಗೆ ಯತ್ನಿಸಲಾಗುತ್ತಿದೆ ಎಂಬ ಪೂಜಾರಿ ಹೇಳಿಕೆ ಗಂಭೀರ ಸಂಘರ್ಷ ಹುಟ್ಟು ಹಾಕಬಹುದು. ಯಾವುದಕ್ಕೂ ಕಾದು ನೋಡಬೇಕು.

ಒಂದಂತೂ ನಿಜ ಕೃಷ್ಣ ಬಿಜೆಪಿಗೆ ವಿರೋಧವಾದ, ಸೆಕ್ಯುಲರ್ ಪರ್ಯಾಯ ಕರ್ನಾಟಕದಲ್ಲಿ ಬಲಗೊಳ್ಳದಂತೆ ತಂತ್ರಹೂಡಿ, ಬಿಜೆಪಿ- ಹೆಗಡೆ ಜೊತೆಗೆ ಕೈ ಜೋಡಿಸಿದ್ದ ಕೃಷ್ಣರವರು ತಾನೇ ಅನಭಿಷಕ್ತ ಸಾರ್ವಭೌಮ ಎಂದು ಭಾವಿಸಿದ್ದರು. ಅದೀಗ ಪಕ್ಷದೊಳಗಿನಿಂದಲೇ ಪ್ರಶ್ನಿಸಲ್ಪಟ್ಟಿದೆ. ಈಗ ಕಾಂಗ್ರೆಸ್‌ನಲ್ಲಿ ಪದವಿ ಉಳಿಸಿಕೊಳ್ಳುವ ಪದಚ್ಯುತಿಯ ಸಂಘರ್ಷ ಮತ್ತೆ ಏರ್ಪಟ್ಟಿದೆ. ಯಾವ ಆಕಾರ ಪಡೆಯುತ್ತದೆ ಕಾದು ನೋಡಬೇಕು. ಈ ಇಬ್ಬರೂ ಜನರನ್ನು ಮರೆತಿದ್ದಾರೆ ಎಂಬುದಂತೂ ಸತ್ಯ.



ರೈತರ ಆತ್ಮಹತ್ಯೆ : ಅಕ್ಟೋಬರ್ 23 ರಂದು ಧರಣಿ

ಅಕ್ಟೋಬರ್ 10 ರಿಂದ 12 ರವರೆಗೆ ಬೆಂಗಳೂರಿನಲ್ಲಿ ಸಭೆ ಸೇರಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯಸಮಿತಿಯು ಬಡಜನರಿಗೆ ಕಡಿಮೆ ದರದಲ್ಲಿ ರೇಶನ್ ನೀಡುವುದಕ್ಕಾಗಿ ಹಸಿರು/ ಹಳದಿಕಾರ್ಡ್ ನೀಡಬೇಕೆಂದು ಒತ್ತಾಯಿಸಿ ನವೆಂಬರ್ 10 ರಿಂದ 17 ರ ವರೆಗೆ ರಾಜ್ಯದಾದ್ಯಂತ ಆಂದೋಲನ ನಡೆಸಬೇಕೆಂದು ಕರೆ ನೀಡಿದೆ. ಈ ಅವಧಿಯಲ್ಲಿ ಮನೆ ಮನೆಗೆ ಪ್ರಚಾರ ನಡೆಸುವುದಲ್ಲದೆ ನವೆಂಬರ್ 10 ರಂದು ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಧರಣಿ ಮೂಲಕ ಉದ್ಘಾಟನೆಗೊಂಡು 17 ರಂದು ವಿವಿದೆಡೆ ಪಿಕೆಟಿಂಗ್ ಮೂಲಕ ಸಮರಶೀಲ ಪ್ರತಿಭಟನೆ ನಡೆಸಬೇಕೆಂದು ಕರೆ ನೀಡಿದೆ.

ರೈತರ ಆತ್ಮಹತ್ಯೆ ಕುರಿತಂತೆ ರಾಜ್ಯ ಮತ್ತು ಕೇಂದ್ರ ಸರಕಾರವು ತೋರುತ್ತಿರುವ ನಿಷ್ಕಾಳಜಿಯನ್ನು ವಿರೋಧಿಸಿ ಅಕ್ಟೋಬರ್ 23 ರಂದು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಧರಣಿ ಸತ್ಯಾಗ್ರಹ ನಡೆಯಲಿದೆ.

2003 ರ ವಿದ್ಯುಚ್ಛಕ್ತಿ ಮಸೂದೆಯು ...ನಸಾಮಾನ್ಯರ ಮೇಲೆ ಹೊಸ ...ೊರೆಯನ್ನು ಹೇರಲಿದೆ. ಉನ್ನತ ಶಿಕ್ಷಣದ ...ಲ್ಕದ ತೀವ್ರ ಹೆಚ್ಚಳ, ಖಾಸಗೀಕರಣದ ...ರುದ್ಧ ಹಾಗೂ ಮುಷ್ಕರದ ಹಕ್ಕುಗಳನ್ನು ...ಕ್ಷಿಸುವುದಕ್ಕಾಗಿ ...ದೆ ...ಜ್ಯಾದ್ಯಂತ ಜನತೆಯನ್ನು ಒಗ್ಗೂಡಿಸಿ ...ಹತ್ ಚಳುವಳಿ ನಡೆಸಲು ಸಿಪಿಐ(ಎಂ) ...ರೆ ನೀಡಿದೆ.

ಬಿಜೆಪಿ ಜನಸಂಘರ್ಷ - ಯಾರ ಮೇಲೆ?

ಕಾಂಗ್ರೆಸ್ ಜನಸ್ಪಂದನ ಯಾತ್ರೆ ಮುಗಿಯುತ್ತಿರುವಂತೆ, ಜನತಾದಳ(ಎಸ್) ರೈತ ಜಾಗೃತಿ ಜಾಥಾ ಹಮ್ಮಿಕೊಂಡ ಬೆನ್ನಲ್ಲೇ ದಿಗಿಲು ಬಿದ್ದಿರುವ ಬಿಜೆಪಿ ಅನಂತಕುಮಾರ್ 'ತಮ್ಮದೂ ಬಂದ್' ಯಾತ್ರೆ ಆದರಿಸಲಾಗಿದೆ. ಅದಕ್ಕೆ ಜನಸಂಘರ್ಷ ಯಾತ್ರೆ ಎಂದು ಕರೆದುಕೊಂಡಿದ್ದಾರೆ. ಹಾಸ್ಯಾಸ್ಪದ ಮತ್ತು ಕುತಂತ್ರ ಬುದ್ದಿಯೆಂದರೆ ಅದಕ್ಕೆ ರಾಜ್‌ಕುಮಾರ್ ಆಶೀರ್ವಾದ ಕೇಳಿರುವುದು. ರಾಜ್‌ರವರೂ ಸಹ ಈ ಬೇಡಿಕೆಗೆ ಏನೂ ಪ್ರತಿಕ್ರಿಯಿಸದೇ ತಮ್ಮೂರಿಗೆ ಹೋಗಿಬರಲು ಅವಕಾಶ ಕೊಡಿಸಿ ಎಂದಿದ್ದಾರೆ. ಕೇಂದ್ರದ ಮೇಲೆ ಕೃಷ್ಣ ಹರಿಹಾಯ್ದಂತೆ, ಅನಂತಕುಮಾರ್, ಬಿಜೆಪಿ ಗಣ ಕೃಷ್ಣರ ಮೇಲೆ ಮಾತಿನ ಧಾಳಿ ನಡೆಸಲಿದೆ. ರಾಜ್ಯದಲ್ಲಿನ ಪರಿಸ್ಥಿತಿಗೆ ಈ ಇಬ್ಬರೂ ಪಾತಕಿಗಳೂ ಎಂಬುದನ್ನು ಮರೆಸಲು ಅಪರಾಧದಿಂದ ತಲೆ ಮರೆಸಿಕೊಳ್ಳಲು ಹೊರಟಿರುವುದು ಖಂಡನೀಯ. ಕಾಂಗ್ರೆಸ್- ಬಿಜೆಪಿಗಳೆರಡೂ ನಿಜವಾದ ಶತ್ರುಗಳನ್ನು ಮರೆಸಲು, ಉದಾರೀಕರಣ, ಜಾಗತೀಕರಣ, ಖಾಸಗೀಕರಣದ ನೀತಿಗಳನ್ನು ಜಾರಿಯನ್ನು ರಕ್ಷಿಸಿಕೊಳ್ಳಲು ಮುಂದಾಗದಿದ್ದರೆ, ಈ ಜನಸಂಘರ್ಷದ ಯಾತ್ರೆಯೂ ಹಳ್ಳಿಗೆ ನಡೆಯಿರಿ ಎಂದು ನಗರದಲ್ಲಿ ಪತ್ರಿಕಾಗೋಷ್ಠಿಗೆ ಸೀಮಿತವಾದಂತೆ ಮಾಡುವುದು ಜನರ ಕೆಲಸ.

ಬಾಬುಡನ್‌ಗಿರಿ- ಸೌಹಾರ್ದತೆ ಕಾಯಬೇಕು

ಕರ್ನಾಟಕದಲ್ಲಿ ಹಬ್ಬದ ಸಂದರ್ಭಗಳನ್ನು ಬಳಸಿ ಹಾಗೂ ಕ್ಷುಲ್ಲಕ ಘಟನೆ ಬಳಸಿ ಗಲಭೆಗಳನ್ನು ಹುಟ್ಟುಹಾಕಿದ ಸಂಘ ಪರಿಹಾರ- ಬಿಜೆಪಿಗಳೀಗ ಬಾಬಾಬುಡನ್‌ಗಿರಿಯತ್ತ ತಮ್ಮ ಗಮನ ಕೇಂದ್ರೀಕರಿಸುತ್ತಿವೆ. ಹಿಂದೆಂದೂ ಅಲ್ಲಿ ಆಚರಣೆಯಲ್ಲಿ ಕಂಡುಬಂದಿದ್ದ, ದತ್ತಮಾಲೆಯ ನಾಟಕ ಈ ವಾರ ಆಡಿ ಮುಗಿಸಿದ್ದಾರೆ. ಡಿಸೆಂಬರ್ 9 ರಂದು ದತ್ತಜಯಂತಿ ಹೆಸರಿನಲ್ಲಿ ಮತ್ತೆ ದ್ವೇಷ ಹುಟ್ಟಿ ಹಾಕಲು ಸಿದ್ಧರಾಗುತ್ತಿದ್ದಾರೆ.

ಇಂತಹ ಅಪಾಯಕಾರಿ ಆಟಗಳನ್ನು ತಡೆಯಲೇಬೇಕಿದೆ. ಎಲ್ಲಾ ಧರ್ಮನಿರಪೇಕ್ಷ ಶಕ್ತಿಗಳೂ ಒಂದಾಗಿ ಎದುರಿಸಬೇಕಿದೆ. ಬಾಬಾಬುಡನ್‌ಗಿರಿಯ ಸೌಹಾರ್ದ ಪರಂಪರೆ ರಕ್ಷಿಸಬೇಕಿದೆ.

9ನೇ CITU ಕರ್ನಾಟಕ ರಾಜ್ಯ ಸಮ್ಮೇಳನ

ಬನ್ನಿ ದುಡಿವ ವರ್ಗದ ಸಮರದಲ್ಲಿ ಹೆಜ್ಜೆ ಹಾಕ ಬನ್ನಿ, ಒಂದಾಗಿ ನಿಲ್ಲಿ

ಕಾರ್ಮಿಕ ವರ್ಗದ ಸಮರಶೀಲ ಸಂಘಟನೆಯಾಗಿರುವ 'ಸಿಟು' ಎಂದೇ ಖ್ಯಾತವಾಗಿರು 'ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್' (ಸಿಐಟಿಯು) ನ 9ನೇ ಕರ್ನಾಟಕ ರಾಜ್ಯ ಸಮ್ಮೇಳನ ಐತಿಹಾಸಿಕ ಮೈಸೂರು ನಗರದ ನಂಜರಾಜ್ ಬಹದ್ದೂರ್ ಛತ್ರದಲ್ಲಿ ಇದೇ ಅಕ್ಟೋಬರ್ 16 ರಿಂದ 19 ರವರೆಗೆ ಜರುಗುತ್ತಲಿದೆ. ಈ ಸಮ್ಮೇಳನದ ಯಶಸ್ವಿಗೆ ನಗರದ ದುಡಿಯುವ ವರ್ಗ, ವಿವಿಧ ಕೈಗಾರಿಕೆಗಳು, ಕಾರ್ಮಿಕರು- ನೌಕರರು, ಸಂಘಟನೆಗಳು, ಪ್ರಗತಿಪರರು, ದೇಶಪ್ರೇಮಿ ಶಕ್ತಿಗಳು ಅಹೋರತವಾಗಿ ಶ್ರಮಿಸುತ್ತಿದ್ದಾರೆ. ನಗರವೇ ಈ ಸಮ್ಮೇಳನದ ಯಶಸ್ವಿಗೆ ಸಂಭ್ರಮದಿಂದ ಸಿದ್ಧಗೊಳ್ಳುತ್ತಿದೆ. ದಿನದಿಂದ ದಿನಕ್ಕೆ 'ಕೆಂಪಾಗುತ್ತಿದೆ'. ಬರಲಿರುವ ಅತಿಥಿ, ಪ್ರತಿನಿಧಿಗಳನ್ನು ಸ್ವಾಗತಿಸಲು ಸಿದ್ಧಗೊಂಡಿದೆ. ಶ್ರಮಜೀವಿಗಳು ತಮ್ಮ ದುಡಿಮೆಯಲ್ಲಿ ' ಒಂದು ಭಾಗ ಹಣವನ್ನು

19 ರಂದು ಬೃಹತ್ ರ್‍ಯಾಲಿ



ಖರ್ಚು ವೆಚ್ಚಗಳಿಗಾಗಿ ಕೊಡುತ್ತಿದ್ದಾರೆ. ಅನೇಕರು ಹಗಲಿರುಳ ಅಹೋರತವಾಗಿ ಶ್ರಮಿಸುತ್ತಿದ್ದಾರೆ.

ಅಕ್ಟೋಬರ್ 16 ರಂದು ಸಮ್ಮೇಳನ ಉದ್ಘಾಟನೆ, 19 ರಂದು ಮಧ್ಯಾಹ್ನ 3 ಗಂಟೆಗೆ ಅರಸು ಬೋರ್ಡಿಂಗ್ ಸ್ಕೂಲ್ (ಮಹಾರಾಜ ಕಾಲೇಜು ಎದುರು) ಮೈದಾನದಲ್ಲಿ ಬೃಹತ್ ರ್‍ಯಾಲಿ- ಬಹಿರಂಗ ಸಭೆಗೆ ಅತ್ಯುತ್ಸಾಹದ ತಯಾರಿ. ಈ ರ್‍ಯಾಲಿಯಲ್ಲಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ದುಡಿವ ಜನತೆ, ಜನಸಾಮಾನ್ಯರು ಪಾಲ್ಗೊಂಡು ರಾಷ್ಟ್ರದ ನಾಯಕರ ಮಾತುಗಳನ್ನು ಸಮ್ಮೇಳನದ ಕರೆಯನ್ನು ಆಲಿಸಲು ಉತ್ಸುಕತೆಯಿಂದ ಕಾಯುತ್ತಿದ್ದಾರೆ.

ದೇಶವಿಂದು ಎದುರಿಸುತ್ತಿರುವ ಗಂಭೀರ ಸಮಸ್ಯೆಗಳಿಗೆ ಸೂಕ್ತವಾದ, ಸಮಗ್ರವಾದ ವೈಜ್ಞಾನಿಕ ಪರಿಹಾರ ಸಾಧನೆಯ ಮಾರ್ಗಗಳಲ್ಲಿ ನಿಖರವಾಗಿ ಗುರುತಿಸಿ- ಸಮಾಜದಲ್ಲಿ ಸಮಾನತೆಗಾಗಿ ಶೋಷಣಾರಹಿತ ಸಮಾಜದ ನಿರ್ಮಾಣಕ್ಕಾಗಿ ಹೋರಾಡುತ್ತಿರುವ ದುಡಿವವರ್ಗದ ಈ ಸಮ್ಮೇಳನದ ಕಾರ್ಯಗಳಿಗೆ ಕೈ ಜೋಡಿಸಬಾರದೇಕೆ? ಕಾರ್ಯಕ್ರಮಗಳಲ್ಲಿ ನಾವು-ನೀವೂ ಭಾಗವಹಿಸಬಾರದೇಕೆ? ಬನ್ನಿ ದುಡಿವ ಜನರೆಲ್ಲಾ ಒಂದಾಗಿ ಬನ್ನಿ, 19 ರ ರ್‍ಯಾಲಿಯಲ್ಲಿ ತಪ್ಪದೇ ಭಾಗವಹಿಸಿ.

'ಆತ್ಮಹತ್ಯೆಯಲ್ಲ - ಸಂಘರ್ಷ' ಎಂಬ ಘೋಷಣೆಯಡಿಯಲ್ಲಿ

ರಾಜ್ಯಾದ್ಯಂತ ಪ್ರತಿಭಟನೆ, ಪಾದಯಾತ್ರೆಗಳು

ತುಮಕೂರು : ವಿವಿಧ ರೈತ ಸಂಘಟನೆಗಳು, ರಾಜಕೀಯ ಪಕ್ಷಗಳ ಕಾರ್ಯಕರ್ತರೊಂದಿಗೆ ಸ್ವಾತಂತ್ರ್ಯ ಹೋರಾಟಗಾರ ಟಿ.ಆರ್.ರೇವಣ್ಣ ಭಾಗವಹಿಸಿದ್ದ ಪಾದಯಾತ್ರೆಯಲ್ಲಿ ನಗರದ ವಿವಿಧ ಭಾಗಗಳಲ್ಲಿ ಸಂಚರಿಸಿ ಮಿನಿ ವಿಧಾನಸೌಧದಲ್ಲಿರುವ ಉಪ ಆಯುಕ್ತರ ಕಛೇರಿಗೆ ತೆರಳಿ ಮನವಿ ಸಲ್ಲಿಸಿತು. ಹೋರಾಟಗಾರರನ್ನು ಉದ್ದೇಶಿಸಿ ಮಾತನಾಡಿದ ಟಿ.ಆರ್.ರೇವಣ್ಣ 'ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ರೈತರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿ, ತ್ಯಾಗ ಮಾಡಿದರು. ಆದರೆ ಸ್ವತಂತ್ರ ಭಾರತದಲ್ಲಿ ಅವರನ್ನು ಕೇಳುವವರೇ ಇಲ್ಲ ಎಂಬಂತಾಗಿದೆ. ಗಾಂಧಿಜಯಂತಿ ಈ ಸಂದರ್ಭದಲ್ಲಿ ಸರ್ಕಾರಿ ಕಾರ್ಯಕ್ರಮದಲ್ಲಿ ಭಾಗವಹಿಸಲು ನನ್ನನ್ನು ಕೇಳಿಕೊಂಡರು.ಆದರೆ ನಾನು ಅದರಲ್ಲಿ ಭಾಗವಹಿಸಲಿಲ್ಲ. ಬದಲಾಗಿ ರೈತರಿಗೆ ನಿಜವಾಗಿ ಧೈರ್ಯ ತುಂಬುವ ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದೇನೆ' ಎಂದರು. ಕರ್ನಾಟಕ ರಾಜ್ಯ ರೈತ ಸಂಘದ ಗೋವಿಂದರಾಜು, ಹೆಚ್.ರಾಮಕೃಷ್ಣ, ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡ ಬಿ.ಉಮೇಶ್, ಜಲನಯನ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಅಪ್ಪಾಜಿ, ಜನತಾದಳ (ಜಾತ್ಯಾತೀತ), ಸಿಪಿಐ(ಎಂ) ಮುಖಂಡರು ಮೊದಲಾದವರು ಮಾತನಾಡಿದರು.



ಬೀದರ್ : ಸಭೆಯನ್ನುದ್ದೇಶಿಸಿ ದಸಂಸ ನಾಯಕ ಮಾರುತಿ ಬೌದ್ದೆ

ಕೊಪ್ಪಳ : ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಕುಷ್ಟಗಿ ತಾಲ್ಲೂಕಿನ ಎಂ.ರಾಮಪುರ ಗ್ರಾಮದಲ್ಲಿ ಆರಂಭಗೊಂಡ ಪಾದಯಾತ್ರೆ, ಆಗಸ್ಟ್ ಮೊದಲ ವಾರದಲ್ಲಿ ಕಿತ್ತುತಿನ್ನುವ ಬಡತನ ಮತ್ತು ಹಸಿವಿನಿಂದ ಸತ್ತ 6 ಮಂದಿ ರೈತ ಕುಟುಂಬಕ್ಕೆ ಶ್ರದ್ಧಾಂಜಲಿ ಸಲ್ಲಿಸಿ, ಕೊಪ್ಪಳದವರೆಗೆ ಪಾದಯಾತ್ರೆ ನಡೆಸಿದರು. ಸಭೆಯನ್ನು ಉದ್ದೇಶಿಸಿ ಪ್ರಾಂತ ರೈತ ಸಂಘದ ಆರ್.ಕೆ.ದೇಸಾಯಿ, ಸಿಐಟಿಯು ಮುಖಂಡ ಮಂಟನಗೌಡ ಮೊದಲಾದವರು ಮಾತನಾಡಿದರು.

ಬೀದರ್- ನಗರದಿಂದ ಐದು ಕಿ.ಮೀ ದೂರದ ಚಿಟ್ಟಾ ಗ್ರಾಮದಲ್ಲಿ ಸಾದಲಶೂಲಕ್ಕೆ ಬಲಿಯಾದ ರೈತನ ಮನೆಯಿಂದ ಆರಂಭವಾದ ಪಾದಯಾತ್ರೆ ನಗರದ ಅಂಬೇಡ್ಕರ್ ವೃತ್ತದಲ್ಲಿ ಮುಕ್ತಾಯ ಗೊಂಡು ಸಂಜೆವರೆಗೆ ಧರಣಿ ಸತ್ಯಾಗ್ರಹ ನಡೆಯಿತು.

ಧರಣಿ ನಿರತರನ್ನು ದ್ದೇಶಿಸಿ ಮಾತನಾಡಿದ ಮುಖಂಡರು ಜಿಲ್ಲೆಯಲ್ಲಿ ವಿದ್ಯುತ್ ಸಮಸ್ಯೆ ತೀವ್ರವಾಗಿದ್ದು, ಸರ್ಕಾರ ತಕ್ಷಣ ಗಮನಹರಿಸಿ ನಿತ್ಯ ಕನಿಷ್ಟ 8 ಘಂಟೆ ವಿದ್ಯುತ್ ಪೂರೈಸುವಂತೆ ಒತ್ತಾಯಿಸಿದರು.

ಧರಣಿ ಸತ್ಯಾಗ್ರಹದಲ್ಲಿ ಸಿಪಿಐ(ಎಂ), ಜನತಾದಳ(ಎಸ್), ಪ್ರ.ಜನತಾದಳ, ಕ.ಪ್ರಾ. ರೈತಸಂಘ ಡಿ.ಎಸ್.ಎಸ್, ಎಸ್.ಎಫ್.ಐ, ಡಿ.ವೈ.ಎಫ.ಐ ಮುತಾದ ಸಂಘಟನೆಗಳ ಸಂಗಿರಾಮ್, ಮಡಿವಾಳಪ್ಪ ಹುಚ್ಚಿ, ಶಂಕರ ದೊಡ್ಡಿ, ಪಂಡಿತ ಬೆದ್ರಿ, ರಾಮಚಂದ್ರ ಗಂದಗೆ, ಸಿದ್ರಾಮಪ್ಪ ಕುಂದೆ, ಬಸವರಾಜ ಪಾಟೀಲ್ ಕೊಳ್ಳುರ್, ಮಾರುತಿ ಬೌದ್ದೆ, ಗೋವರ್ಧನ ರಾಠೋಡ್, ಸಾಯಿರೆಡ್ಡಿ ನಿರ್ಣಾ, ವಿಜಯಕುಮಾರ್ ಸೊನಾರೆ, ಅಹಮದಸಾಬ್ ಮುಂತಾದವರು ಪಾಲ್ಗೊಂಡಿದ್ದರು.

ಉಡುಪಿ -ನಗರದ ಸರ್ವಿಸಿ ಬಸ್‌ಸ್ಟ್ಯಾಂಡ್ ಬಳಿಯ ಗಾಂಧಿ ವೃತ್ತದಿಂದ ಆರಂಭಗೊಂಡ ಪಾದಯಾತ್ರೆ, ಅಜ್ಜರ ಕಾಡು ಗಾಂಧಿ ಕಟ್ಟೆಯಲ್ಲಿ ಸಮಾರೋಪಗೊಂಡಿತು. ಪಾದಯಾತ್ರೆ ಆರಂಭದಲ್ಲಿ, ಪ್ರಸಿದ್ಧ ಬರಹಗಾರರೂ, ಚಿಂತಕರೂ ಆದ ಜಿ.ರಾಜಶೇಖರ್, ವಿಚಾರ ವೇದಿಕೆ ಅಧ್ಯಕ್ಷ ಭಾಸ್ಕರ್ ಮಯ್ಯ, ಡಿ.ಎಸ್.ಎಸ್‌ನ ಜಯನ್ ಮಲ್ಪೆ ಮೊದಲಾದವರು ಮಾತನಾಡಿದರು.

ಈ ಪಾದಯಾತ್ರೆ ಮತ್ತು ಧರಣಿ ಸತ್ಯಾಗ್ರಹದಲ್ಲಿ ಡಿ.ಎಸ್.ಎಸ್‌ನ ಸುಂದರ್ ಮಾಸ್ಟರ್, ಕರ್ನಾಟಕ ಪ್ರಾಂತ ರೈತ ಸಂಘ ಯು.ದಾಸ ಭಂಡಾರಿ, ಸಿಪಿಐಯು ವಿನ ಕೆ.ಶಂಕರ್, ಪಿ.ವಿಶ್ವನಾಥ ರೈ, ಎಐಟಿಯುಸಿಯ ಬಿ.ಮೋನಪ್ಪ ಸಾಲಿಯಾನ, ಬ್ಯಾಂಕ್ ನೌಕರರ ಸಂಘದ ಯು.ಶಿವರಾಯ, ವಿಮಾ ನೌಕರರ ಸಂಘದ ಪ್ರಭಾಕರ್ ಕುಂದರ್, ಜೆ.ಡಿ(ಎಸ್) ನ ಮಹಿಮಕುಮಾರ್ ಹೆಗ್ಡೆ, ಚಿಂತಕರಾದ ನಿ.ಮುರಾರಿ ಬಲ್ಲಾಳ್ ಆದಮಾರು ಶ್ರೀಪತಿ ಆಚಾರ್ಯ, ಕೆ.ಪಣಿರಾಜ್, ಆರ್.ಕೆ.ಮಣಿಪಾಲ, ಚಂದ್ರಶೇಖರ್, ಕವಿರಾಜ್ ಅಲ್ಲದೆ ಹಲವಾರು ಸಂಘಟನೆಗಳ ಮುಖಂಡರು, ಕಾರ್ಯಕರ್ತರು ಭಾಗವಹಿಸಿದ್ದರು.

ಬಿಜಾಪುರ - ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ರೈತ ಜಾಗೃತ ವೇದಿಕೆಗಳ ನೇತೃತ್ವದಲ್ಲಿ ಮಹಾತ್ಮ ಗಾಂಧಿ ವೃತ್ತದಿಂದ ಆರಂಭವಾದ ಪಾದಯಾತ್ರೆ ಬಸವವನದಲ್ಲಿ ಧರಣಿ ನಡೆಸಿತು. ನಂತರ ಮಾತನಾಡಿದ ವಿವಿಧ ಸಂಘಟನೆಗಳ ಮುಖಂಡರು ಮತ್ತು ಧರ್ಮ ಗುರುಗಳು 'ಆತ್ಮಹತ್ಯೆ ದಾರಿಗೆ ಇಳಿಯಬೇಡಿ ಎಂದು ರೈತರಿಗೆ ಮನ[ವಿ] ಮಾಡಿದರು.

ಕಾರ್ಯಕ್ರಮದಲ್ಲಿ ಬಸವೇಶ್ವರದ ಮಹದೇ[ವ] ಶಿವಾಚಾರ್ಯರು ವನಶ್ರೀ ಮಠದ ಜಯದೇವ ಚಿಸ್ಮಿಯಾನಂದ ಸ್ವಾಮಿಜಿ, ಕ್ರೈಸ್ತ ಧರ್ಮ[ಗುರು] ಫಾದರ್ ವಿನ್ಸೆಂಟ್ ಕ್ರಾಸ್ಟ್, ಹಾನೀ[ಫ್] ಫಿರದರ್ಗಾದ ಧರ್ಮಗುರು, ಕೊಡಗಿಯ ಸಂಗ[...] ಬಸವ ಸ್ವಾಮಿಗಳು, ವಿವಿಧ ಸಂಘಟನೆಗ[ಳ] ಭೀಮಸಿ ಕಲಾದಗಿ, ಅಣ್ಣರಾಯ ಈಳಗೇರ ಜಾಗೃ[ತ] ವೇದಿಕೆಯ ಡಾ.ರಾಜೇಂದ್ರ ಪೋದ್ದಾರೆ, ವಿಜ[ಯ] ಕುಮಾರ್ ಬರಾದಾರ ವಿಧಾನ ಪರಿಷ[ತ್] ಸದಸ್ಯರಾದ ಎಸ್.ಡಿ.ಕರ್ಪೂರ ಮಠ, ಮಾ[ಜಿ]



ವಿಜಾಪುರದಲ್ಲಿ ಅಣ್ಣಾರಾಯ ಈಳಗೇರ, ಭೀಮಸಿ ಕಲಾದಗಿ

ಶಾಸಕ ಎಸ್.ಎಸ್.ಖೇಡ, ರೈತ ಸಂಘ[ದ] ಭೀಮರಾಯ ಜೋಗುರ, ಎಂ.ಎ[...] ರಂದ್ರೇಗೌಡ, ಪಂಚತ್ವ ಕಲಬುರ್ಗಿ, ಸುರೇ[ಶ] ರಜಪೂತ, ರಮೇಶ ಆಸಂಗಿ ಮೊದಲಾದ[ವರು] ಭಾಗವಹಿಸಿದ್ದರು. ಕಾರ್ಯಕ್ರಮದ ಪೂರ್ವಭ[ಾವಿ] ಸಮಾವೇಶವನ್ನು ಸಾಹಿತಿ ಎಂ.ಎಸ್.ವಾಲಿಯ[ವರ] ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಸವದತ್ತಿ: ಬೆಳಗಾವಿ ಜಿಲ್ಲೆಯ ಸವದತ್ತಿ[ಯ] ಪ್ರಮುಖ ಬೀದಿಗಳಲ್ಲಿ ನೂರಾರು ರೈ[ತರು] ಪಾದಯಾತ್ರೆ ನಡೆಸಿದರು. ರೈತರ ಆತ್ಮಹತ್ಯೆ ತ[...] ಪರಿಹಾರ ಕೋರಿ ಸರ್ಕಾರಕ್ಕೆ ಮನವಿ ಸಲ್ಲಿಸಿ[ದರು].

ಕಾರ್ಯಕ್ರಮದಲ್ಲಿ ಎಸ್.ಹೆಚ್. ಕಪ್ಪಣವ[...] ಜಿ.ಬಿ.ತೋರಗಲ್ಲಾ, ಎಸ್.ಐ.ಸೊನ್ನದ,ಹಟ್[...] ಮುಂತಾದವರು ಭಾಗವಹಿಸಿದ್ದರು.

ಕೇಂದ್ರ - ರಾಜ್ಯ ಸರ್ಕಾರಗಳೆರಡೂ ಕಾರ್ಮಿಕ ವಿರೋಧಿಗಳು

ಅಂತರ್ರಾಷ್ಟ್ರೀಯ ತ್ರಿವಳಿಗಳಾದ ಐಎಂಎಫ್, ವಿಶ್ವಬ್ಯಾಂಕ್ ಮತ್ತು ವಿಶ್ವ ವ್ಯಾಪಾರ ಸಂಘಟನೆಯ ಒತ್ತಡಗಳಿಗೆ ಮಣಿದು ಕೇಂದ್ರದ ಜಾಗತೀಕರಣದ ನೀತಿಗಳಿಂದಾಗಿ ದೇಶಾದ್ಯಂತ ಲಕ್ಷಗಟ್ಟಲೆ ಕಾರ್ಖಾನೆಗಳು ಮುಚ್ಚಿ, ಕೋಟಿಗಟ್ಟಲೆ ಕಾರ್ಮಿಕರು ಉದ್ಯೋಗ ಕಳೆದುಕೊಂಡಿರುವಾಗಲೇ, ಕರ್ನಾಟಕದ ಕಾಂಗ್ರೆಸ್ ಸರ್ಕಾರವೂ ಅದೇ ಕಾರ್ಮಿಕ ವಿರೋಧಿ ನೀತಿಗಳನ್ನು ಅನುಸರಿಸುತ್ತಿದೆ ಎಂದು ಸಿಐಟಿಯು ಕರ್ನಾಟಕ ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ.ನಾಯರ್ ಅವರು ಹೇಳಿದ್ದಾರೆ. ಸೆಪ್ಟೆಂಬರ್ 25ರಂದು ಮಂಗಳೂರಿನ ಎಸ್.ಕೆ.ಟೈಲ್ ವರ್ಕರ್ಸ್ ಯೂನಿಯನ್ನಿನ ಸಭಾಂಗಣದಲ್ಲಿ ಜರುಗಿದ ಸಿಐಟಿಯು 7ನೇ ದಕ್ಷಿಣ ಕನ್ನಡ ಜಿಲ್ಲಾ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಅನೇಕ ದಶಕಗಳ ಹೋರಾಟ ಮತ್ತು ತ್ಯಾಗ, ಬಲಿದಾನಗಳ ಫಲವಾಗಿ ಕಾರ್ಮಿಕ ವರ್ಗವು ಗಳಿಸಿದ ಮುಷ್ಕರದ ಹಕ್ಕನ್ನು ಕಸಿದುಕೊಳ್ಳಲು ಮತ್ತು ಕಾರ್ಮಿಕ ಕಾನೂನುಗಳನ್ನು ಮಾಲಿಕರ ಪರವಾಗಿ ತಿದ್ದುಪಡಿ ಮಾಡಲು ಸರ್ಕಾರವು ನಡೆಸುತ್ತಿರುವ ಪ್ರಯತ್ನಗಳನ್ನು ಖಂಡಿಸಿದ ಅವರು, ಕಾರ್ಮಿಕವರ್ಗವು ಜಂಟಿ ಚಳುವಳಿಗಳನ್ನು ಬಲಪಡಿಸುವ ಮೂಲಕ ಈ ಧಾಳಿಗಳನ್ನು ಸೋಲಿಸಬೇಕೆಂದು ಕರೆ ನೀಡಿದರು. ಕರ್ನಾಟಕ [ಸರ್ಕಾ]ರವು ವಿದ್ಯುತ್ ದರಗಳನ್ನು ಪದೇ ಪದೇ ವಿಪರೀತವಾಗಿ ಏರಿಸಲು ಅನುಕೂಲ ಮಾಡಿಕೊಡುತ್ತಿರುವುದರಿಂದ ಕೈಗಾರಿಕೆ, ಕೃಷಿ ಮತ್ತು ಜನಸಾಮಾನ್ಯರ ಮೇಲೆ ವಿಪರೀತ ಹೊರೆ ಬೀಳುತ್ತಿದೆ. ವಿದ್ಯುತ್ ರಂಗವನ್ನು ಖಾಸಗೀಕರಿಸುವ ಹುನ್ನಾರಗಳು ನಡೆಯುತ್ತಿವೆ. ಸರ್ಕಾರಿ ನೌಕರಿಗಳಲ್ಲಿ ಭಾರೀ ಪ್ರಮಾಣದ ಕಡಿತ ಮಾಡುವ ಮೂಲಕ ಕರ್ನಾಟಕ ಸರ್ಕಾರವು ವಿಶ್ವಬ್ಯಾಂಕಿನ ಒತ್ತಡಗಳಿಗೆ ಮಣಿದು ನೌಕರರನ್ನು ನಿರುದ್ಯೋಗಕ್ಕೆ ತಳ್ಳುತ್ತಿದೆ ಎಂದು ಅವರು ಟೀಕಿಸಿದರು.

ಸಿಐಟಿಯು 7ನೇ ದಕ್ಷಿಣ ಕನ್ನಡ ಜಿಲ್ಲಾ ಸಮ್ಮೇಳನ

ಅಧ್ಯಕ್ಷತೆ ವಹಿಸಿದ್ದ ಕಾ.ಬಿ.ಮಾಧವ ಅವರು ಮಾತನಾಡುತ್ತಾ, ಕಾರ್ಮಿಕರ ಐಕ್ಯತೆಯನ್ನು ಬಲಪ್ರಯೋಗದಿಂದಲೂ, ಕರಾಳ ಕಾನೂನುಗಳಿಂದಲೂ, ಆರ್ಥಿಕ ಧಾಳಿಗಳಿಂದಲೂ ಮುರಿಯಲು ಅಸಾಧ್ಯವಾದಾಗ ಆಳುವ ವರ್ಗಗಳು ಕೋಮುವಾದವನ್ನು ಬೆಳೆಸಿ ಕಾರ್ಮಿಕರು ತಮ್ಮ ತಮ್ಮೊಳಗೆ ಹೊಡೆದಾಡಿ ಸಾಯಬೇಕೆಂದು ಪಿತೂರಿ ನಡೆಸುತ್ತಿದ್ದಾರೆ ಎಂದು ಎಚ್ಚರಿಸಿದರು. ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಮಿಕ ವರ್ಗದ ಸಮರಶೀಲ ಪರಂಪರೆಗಳನ್ನು ನೆನಪಿಸಿದ ಅವರು, ಸರ್ಕಾರದ ಮತ್ತು ಬಂಡವಾಳಶಾಹಿಗಳ ಹೊಸ ಧಾಳಿಗಳನ್ನು ಎದುರಿಸಲು ಸಂಘಟನೆಯನ್ನು ಬಲಪಡಿಸಲು ಕರೆ ನೀಡಿದರು.

ಪ್ರತಿನಿಧಿ ಸಮ್ಮೇಳನದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ ಅವರು ಮಂಡಿಸಿದ ವರದಿ ಮತ್ತು ಕೋಶಾಧಿಕಾರಿ ಸುಕುಮಾರ್ ಮಂಡಿಸಿದ ಲೆಕ್ಕಪತ್ರದ ಮೇಲೆ ಸುದೀರ್ಘ ಚರ್ಚೆ ನಡೆದು ಅವುಗಳನ್ನು ಅಂಗೀಕರಿಸಲಾಯಿತು.

ಮುಂದಿನ ಅವಧಿಗೆ ಅಧ್ಯಕ್ಷರಾಗಿ ಕಾ.ಬಿ.ಮಾಧವ, ಉಪಾಧ್ಯಕ್ಷರುಗಳಾಗಿ ಕಾ.ಕೆ.ಆರ್.ಶ್ರೀಯಾನ್, ಕಾ.ಯು.ಬಿ. ಲೋಕಯ್ಯ, ಕಾ.ಸಂಜೀವ ಬಂಗೇರ ಮತ್ತು ಕಾ.ರಮಣಿ, ಪ್ರಧಾನ ಕಾರ್ಯದರ್ಶಿಯಾಗಿ ಕಾ.ವಸಂತ ಆಚಾರಿ, ಕಾರ್ಯದರ್ಶಿಗಳಾಗಿ ಕಾ.ಜೆ.ಬಾಲಕೃಷ್ಣ ಶೆಟ್ಟಿ, ಕಾ.ಕೆ.ಮಂಜಪ್ಪ ಮತ್ತು ಕಾ.ಬಿ.ಎಂ.ಭಟ್, ಕೋಶಾಧಿಕಾರಿಯಾಗಿ ಕಾ.ಸುಕುಮಾರ್ ಇವರನ್ನೊಳಗೊಂಡ 47 ಮಂದಿಯ ಹೊಸ ಜಿಲ್ಲಾ ಸಮಿತಿಯನ್ನು ಆರಿಸಲಾಯಿತು.

ಸಮ್ಮೇಳನವು ಕೈಗೊಂಡ ಅನೇಕ ನಿರ್ಣಯಗಳ ಪೈಕಿ ಪ್ರಮುಖವಾದವುಗಳು : (1) ಬೀಡಿ ಕಾರ್ಮಿಕರಿಗೆ ಈ ವರ್ಷದ ಏಪ್ರಿಲ್ 1ರಿಂದ ನೀಡಬೇಕಾದ ಹೆಚ್ಚುವರಿ ತುಟ್ಟಿಭತ್ಯೆಗಳನ್ನು ತಕ್ಷಣ ಪಾವತಿಸುವಂತೆ ಮಾಲೀಕ ವರ್ಗವನ್ನು ಒತ್ತಾಯಿಸುವುದು ಹಾಗೂ ತ್ರಿಪಕ್ಷೀ[ಯ] ಸಭೆ ಕರೆದು ಕನಿಷ್ಠ ಕೂಲಿಯ ಕು[ರಿತು] ತೀರ್ಮಾನಿಸಬೇಕೆಂದು ರಾಜ್ಯ ಸರ್ಕಾರ[ವನ್ನು] ಒತ್ತಾಯಿಸುವುದು, (2) ಕಟ್ಟಡ ತೆರಿಗ[ೆ] ವಿಪರೀತ ಏರಿಕೆಗೆ ಅನುವು ಮಾಡಿಕೊಟ್ಟ[...] ಸ್ವಯಂ ಘೋಷಿತ ಆಸ್ತಿ ತೆರಿಗೆಯನ್ನು [...] ಮಾಡುವುದಕ್ಕೆ ವಿರೋಧ, (3) ಕಟ್ಟಡ ಕಾಮಿ[ಕರ] ಕೇಂದ್ರ ಶಾಸನವನ್ನು ರಾಜ್ಯದಲ್ಲಿ [...] ಮಾಡಬೇಕೆಂದು ರಾಜ್ಯ ಸರ್ಕಾರಕ್ಕೆ ಒತ್ತಾಯ[...] ಅಂಗನವಾಡಿ ನೌಕರರಿಗೆ ಏರಿಕೆ [...] ವೇತನವನ್ನು ತಕ್ಷಣ ಬಿಡುಗಡೆ ಮಾಡಲು [...] ಗ್ರಾಮಾಂತರ ಪರ್ಮಿಟ್ಟಿನ ಆಟೋ ರಿಕ್ಷಾ[...] ಮಂಗಳೂರು ನಗರ ದೊಳಗೆ ಓಡಿಸುವ[...] ವಿರುದ್ಧ, (6) ಇಎಸ್ಐ ಆಸ್ಪತ್ರೆಯ ಅವ್ಯವ[ಸ್ಥೆ] ಕುರಿತು, (7) ರಾಷ್ಟ್ರೀಕೃತ ರೂಟ್‌ಗಳಲ್ಲಿ ಖಾ[ಸಗಿ] ಬಸ್ಸುಗಳ ಓಡಾಟಕ್ಕೆ ಅನುಮತಿ ನೀಡಿದ[ುದರ] ವಿರುದ್ಧ, (8) ಗೇರು ಬೀಜ ಸಂಸ್ಕ[ರಣಾ] ಕಾರ್ಮಿಕರಿಗೆ ಕನಿಷ್ಠಕೂಲಿ ಶೀಘ್ರ ನಿಗದಿ[ಪಡಿಸಿ] ಪ್ರಕಟಿಸಲು ಒತ್ತಾಯ.



ಎತ್ತ ಸಾಗಿದೆ ನಮ್ಮ ನಾಗರಿಕ ಸಮಾಜ ?

ಸೀತಾರಾಂ ಯೆಚೂರಿ

> **ಭಾರತದ ಧರ್ಮನಿರಪೇಕ್ಷ ಗಣತಂತ್ರ ಸ್ವರೂಪವನ್ನು ಸಂಪೂರ್ಣವಾಗಿ ವಿರೋಧಿಸುವ ಆರ್‌ಎಸ್‌ಎಸ್ ಮತ್ತದರ ಅಂಗ ಸಂಘಟನೆಗಳು ಆಧುನಿಕ ಭಾರತವನ್ನು ತಮ್ಮ ಪರಿಕಲ್ಪನೆಯ ಅತ್ಯಂತ ಅಸಹಿಷ್ಣು ಫ್ಯಾಸಿಸ್ಟ್ ಮಾದರಿಯ 'ಹಿಂದೂರಾಷ್ಟ್ರ'ವಾಗಿ ಪರಿವರ್ತಿಸುವ ಶತಪ್ರಯತ್ನದಲ್ಲಿ ತೊಡಗಿವೆ. ಈ ಅಜೆಂಡಾಕ್ಕೆ ಅನುಗುಣವಾಗಿ ಮೊದಲು ಅವರು ಸಂಸದೀಯ ಪ್ರಜಾಪ್ರಭುತ್ವದ ಸಂಸ್ಥೆಗಳನ್ನು ತಮಗೆ ಬೇಕಾದಂತೆ ಮಣಿಸಲು ಪ್ರಯತ್ನಿಸುತ್ತಾರೆ.**

ಫ್ಯಾಸಿಸ್ಟ್ ಅಜೆಂಡಾದ ಒಂದು ವಿಭಿನ್ನ ಲಕ್ಷಣವೆಂದರೆ ಸಂಸದೀಯ ಪ್ರಜಾಪ್ರಭುತ್ವ ಪ್ರತಿಯೊಂದು ಲಿಂಗದೊಡನೆ, ಸಂಸ್ಥೆಯೊಡನೆ ಆ ಶಕ್ತಿಗಳು ನಿರಂತರವಾಗಿ ತಿಕ್ಕಾಟಕ್ಕಿಳಿಯುತ್ತವೆ. ಭಾರತದ ಧರ್ಮನಿರಪೇಕ್ಷ ಗಣತಂತ್ರ ಸ್ವರೂಪವನ್ನು ಸಂಪೂರ್ಣವಾಗಿ ವಿರೋಧಿಸುವ ಆರ್‌ಎಸ್‌ಎಸ್ ಮತ್ತದರ ಅಂಗ ಸಂಘಟನೆಗಳು ಆಧುನಿಕ ಭಾರತವನ್ನು ತಮ್ಮ ಪರಿಕಲ್ಪನೆಯ ಅತ್ಯಂತ ಅಸಹಿಷ್ಣು ಫ್ಯಾಸಿಸ್ಟ್ ಮಾದರಿಯ 'ಹಿಂದೂರಾಷ್ಟ್ರ'ವಾಗಿ ಪರಿವರ್ತಿಸುವ ಶತಪ್ರಯತ್ನದಲ್ಲಿ ತೊಡಗಿವೆ. ಈ ಅಜೆಂಡಾಕ್ಕೆ ಅನುಗುಣವಾಗಿ ಮೊದಲು ಅವರು ಸಂಸದೀಯ ಪ್ರಜಾಪ್ರಭುತ್ವದ ಸಂಸ್ಥೆಗಳನ್ನು ತಮಗೆ ಬೇಕಾದಂತೆ ಮಣಿಸಲು ಪ್ರಯತ್ನಿಸುತ್ತಾರೆ. ಯಾವುದೇ ಕಾರಣಕ್ಕೆ ಅದು ಸಾಧ್ಯವಾಗದಿದ್ದರೆ ಆ ಸಂಸ್ಥೆಯನ್ನೇ ಬುಡಮೇಲು ಮಾಡಲು ಪ್ರಯತ್ನಿಸುತ್ತಾರೆ. ಆಗ ತಿಕ್ಕಾಟ ಅನಿವಾರ್ಯವಾಗುತ್ತದೆ.

ಈ ಪ್ರಕ್ರಿಯೆ ಎಂತಹ ಘಟ್ಟ ಮುಟ್ಟಿದೆಯೆಂದರೆ ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ ಇತರ ಕಬಂಧ ಬಾಹುಗಳು ಪ್ರತಿಯೊಂದು ಸಾಂವಿಧಾನಿಕ ಸಂಸ್ಥೆಯೊಡನೆಯೂ ತಿಕ್ಕಾಟಕ್ಕಿಳಿದಿವೆ - ಚುನಾವಣಾ ಆಯೋಗ, ರಾಷ್ಟ್ರೀಯ ಮಾನವ ಹಕ್ಕು ಆಯೋಗ, ಅಲ್ಪಸಂಖ್ಯಾತರ ಆಯೋಗ, ಕೆಲವೊಮ್ಮೆ ನ್ಯಾಯಾಂಗದೊಡನೆಯೂ ತಿಕ್ಕಾಟ ನಡೆಸಿದ್ದಾರೆ. ಸಂಸತ್ತಿನಲ್ಲಿ ಯಾವುದೇ ಅರ್ಜಿ ತಮ್ಮ ರಾಜಕೀಯ ಭವಿಷ್ಯಕ್ಕೆ ತೊಂದರೆಯುಂಟು ಮಾಡುತ್ತದೆಂದರೆ ಅಧಿಕಾರದಲ್ಲಿರುವವರೇ ಸಂಸತ್ತಿನಲ್ಲಿ ಅಂತಹ ಚರ್ಚೆ ನಡೆಯದಂತೆ ಪ್ರಯತ್ನಿಸುತ್ತಾರೆ. ಕಳೆದ ಕೆಲವು ಅಧಿವೇಶನಗಳಲ್ಲಿ ಇದನ್ನು ನೋಡಿದ್ದೇವೆ. ಆದ್ದರಿಂದಾಗಿಯೇ ಕೊನೆಗೆ ಪ್ರತಿ ಪಕ್ಷಗಳು ಒಂದು ಅವಿಶ್ವಾಸ ಠರಾವು ತಂದು ದೇಶದ ಜನರ ಜೀವ ಹಿಂಡುತ್ತಿರುವ ಪ್ರಶ್ನೆಗಳ ಬಗ್ಗೆ ಸಂಸತ್ತು ಮತ್ತು ದೇಶ ನಿರ್ಣಯಿಸಲಾಗದಿದ್ದರೂ ಚರ್ಚೆಯಾದರೂ ನಡೆಯುವಂತೆ ಮಾಡಬೇಕಾಯಿತು.

ಮೂರ್ತ ಉದಾಹರಣೆ

ಒಂದೆಡೆ ಕೋಮು ಅಟ್ಟಹಾಸಕ್ಕೆ ಬಲಿಯಾದವರಿಗೆ ಸಹ ನ್ಯಾಯ ದೊರಕದಂತೆ ನ್ಯಾಯಾಂಗವನ್ನೇ ತಿರುಚುವುದು, ಇನ್ನೊಂದೆಡೆ

> **ಮಾತಿಗೊಂದು ಖಾತೆ!**
>
> ಪಶ್ಚಿಮಬಂಗಾಳದಿ ಈ ಹೊತ್ತು ನೋಡು
> 'ನೀ ಹೋಗಿ ಸತತವೂ ಗಲಭೆಗಳ ಮಾಡು'
> ಅದಕ್ಕಾಗಿ ರಚಿಸಿಹೆವು ಹೊಸದೊಂದು ಖಾತೆ
> ತುರ್ತಾಗಿ ಈ ಕಡೆಗೆ ನೀ ಹೋಗು ಮಾತೆ
>
> \- ವಿಡಂಬಾರಿ

ಇಂತಹ ಅಟ್ಟಹಾಸ ನಡೆಸಿದವರಿಗೆ ರಕ್ಷಣೆ ನೀಡಿ, ಆ ಮೂಲಕ ಅವರಿಗೆ ಪ್ರೋತ್ಸಾಹ ನೀಡುವ ಪ್ರಕ್ರಿಯೆ ಗುಜರಾತಿನಲ್ಲಿ ತಾರಕಕ್ಕೇರಿದೆ. ಬೆಸ್ಟ್ ಬೇಕರಿ ಮೊಕದ್ದಮೆ ಇದರ ಮೂರ್ತ ಉದಾಹರಣೆ. ಇಲ್ಲಿ ಪೀಡಿತರು ಗುಜರಾತಿನ ಹೊರಗೆ ನ್ಯಾಯಾಂಗದ ಮಧ್ಯಪ್ರವೇಶವಾಗಬೇಕು ಎಂದಿದ್ದಾರೆ. ರಾಷ್ಟ್ರೀಯ ಮಾನವ ಹಕ್ಕು ಆಯೋಗವೂ ಅದನ್ನೇ ಪ್ರತಿಪಾದಿಸಿದೆ. ಇದೀಗ ಅದು ಸರ್ವೋಚ್ಚ ನ್ಯಾಯಾಲಯದ ಮುಂದಿದೆ. ಈಗ ಗೋಧ್ರಾ ರೈಲು ಹತ್ಯಾಕಾಂಡಕ್ಕೆ ಬಲಿಯಾದವರ ಸಂಬಂಧಿಕರೂ ಈ ಭೀಕರ ಅಗ್ನಿಕಾಂಡದ ತನಿಖೆ ನಡೆಸುತ್ತಿರುವ ನಾನಾವತಿ ಆಯೋಗವನ್ನು ರಾಜ್ಯದ ಹೊರಗೆ ಸ್ಥಳಾಂತರ ಮಾಡಬೇಕು, ಗುಜರಾತ್ ಸರಕಾರ ನಿಷ್ಪಕ್ಷಪಾತತೆಯ ಬಗ್ಗೆ ತಮಗೆ ನಂಬಿಕೆಯಿಲ್ಲ ಎನ್ನುತ್ತಿದ್ದಾರೆ. ಇದುವರೆಗೂ ಬಿಜೆಪಿ ಮಂದಿ ಸರಕಾರೀ ಪ್ರಾಯೋಜಿತ ಹತ್ಯಾಕಾಂಡವನ್ನು ಈ ಗೋಧ್ರಾ ಕಾಂಡಕ್ಕೆ ಜನರ ಪ್ರತಿಕ್ರಿಯೆಯೆಂದೇ ಸಮರ್ಥಿಸಿಕೊಂಡು ಬಂದಿದ್ದಾರೆ. ಗೋಧ್ರಾ ಕಾಂಡಕ್ಕೆ ಬಲಿಯಾದವರ ಸಂಬಂಧಿಕರ ಹೇಳಿಕೆಗಳು ಇದೆಂತಹಾ ಸುಳ್ಳು ಎಂಬುದನ್ನು ಎತ್ತಿ ತೋರಿದೆ. ತಮ್ಮ ಸಮೀಪದ ಪ್ರಿಯ ಬಂಧುಗಳನ್ನು ಕಳಕೊಂಡವರಲ್ಲಿ ಕೆಲವರು ತಮ್ಮನ್ನು ಆಯೋಗದ ಎದುರು ಸ್ವತಂತ್ರವಾಗಿ ಹೋಗಲು ಕೂಡಾ ಬಿಡುತ್ತಿಲ್ಲ ಎಂದು ಹೇಳಿದ್ದಾರೆ. ಅದರ ಬದಲು, ಅವರ ಪರವಾಗಿ ಬಿಜೆಪಿ ಮತ್ತು ವಿಹೆಚ್‌ಪಿಯವರೇ ಮಾತನಾಡುತ್ತಾರಂತೆ!


ಈ ರೀತಿ ನಾನಾವತಿ ಆಯೋಗ ಸತ್ಯವನ್ನು ಹುಡುಕಿ ತೆಗೆಯುವ ಬದಲು ಅದರಿಂದ ನಂತರದ ಗುಜರಾತ್ ಹತ್ಯಾಕಾಂಡವನ್ನು ಸಮರ್ಥಿಸಿಕೊಳ್ಳಲು ಬಳಸಬಹುದಾದ ಒಂದು ವರದಿ ಬರುವಂತೆ ಪ್ರಭಾವ ಬೀರುವ ಪ್ರಯತ್ನ ಇಲ್ಲಿ ಸ್ಪಷ್ಟವಾಗಿ ಎದ್ದು ಕಾಣುತ್ತದೆ. ಈ ಹಿಂದೆ ಭಾರಿ ಉದಾರತೆಯಿಂದ ಪ್ರಕಟಿಸಿದ ಯಾವುದೇ ಪರಿಹಾರ ಕೂಡಾ ತಮಗೆ ದಕ್ಕಿಲ್ಲ ಎಂದು ದೂರು ನೀಡಿದ್ದಾರೆ. ನಿಜ ಸಂಗತಿಯೆಂದರೆ ಆರ್‌ಎಸ್‌ಎಸ್ ನ ಕಬಂಧಬಾಹುಗಳೆಲ್ಲಾ ಗೋಧ್ರಾ ಕಾಂಡಕ್ಕೆ ಬಲಿಯಾದವರ ಹೆಸರಲ್ಲಿ ನೂರಾರು ಕೋಟಿ ರೂಪಾಯಿಗಳನ್ನು ಬಾಚಿಕೊಂಡಿವೆ ಎಂದು ವರದಿಯಾಗಿದೆ. ಈ ಎಲ್ಲಾ ಹಣ ಎಲ್ಲಿ ಹೋಯಿತು? ಇದು ಗೋಧ್ರಾ ಕಾಂಡಕ್ಕೆ ಬಲಿಯಾದವರ ಸಂಬಂಧಿಕರು ಕೇಳುವ ಇನ್ನೊಂದು ಪ್ರಶ್ನೆ.

ಸಿಬಿಐಯನ್ನು ಬಳಸುವ ಪ್ರಯತ್ನ

ಆರ್‌ಎಸ್‌ಎಸ್/ ಬಿಜೆಪಿ ಈ ಪ್ರಶ್ನೆಗಳಿಗೆ ಉತ್ತರ ಕೊಡುವ ಆತುರದಲ್ಲೇನೂ ಇಲ್ಲ, ಅಥವಾ ಇದನ್ನು ಸಿಬಿಐಗೆ ವಹಿಸುವ ಯೋಚನೆಯಲ್ಲೂ ಇಲ್ಲ. ಅದರ ಬದಲು ಆಧುನಿಕ ಭಾರತೀಯ ನಾಗರಿಕ ಸಮಾಜದ ಇನ್ನೊಂದು ಸಂಸ್ಥೆಯಾದ ಸಿಬಿಐಯನ್ನು ಆರ್‌ಎಸ್‌ಎಸ್/ಬಿಜೆಪಿ ಅಜೆಂಡಾವನ್ನು ಈಡೇರಿಸಲು ಬಳಸುವ ಪ್ರಯತ್ನ ನಡೆದಿದೆ. ಇದೇ ಸಿಬಿಐ 1997 ರಲ್ಲಿ ಎಲ್.ಕೆ.ಅಡ್ವಾಣಿ, ಮುರುಳಿ ಮನೋಹರ ಜೋಷಿ ಮತ್ತಿತರ ಒಟ್ಟು 49 ಕಾವಿಪಡೆಗಳ ನಾಯಕಮಣಿಗಳ ಮೇಲೆ ಬಾಬ್ರಿ ಮಸೀದಿ ಧ್ವಂಸದ ಕ್ರಿಮಿನಲ್ ಪಿತೂರಿಯ ಚಾರ್ಜ್‌ಶೀಟ್ ಹಾಕಿತ್ತು. ಆದರೆ ಕೆಲವು ವಾರಗಳ ಹಿಂದೆ ರಾಮ್‌ಬರೇಲಿ ನ್ಯಾಯಾಲಯದ ಎದುರು ಇದನ್ನು ಹಿಂತೆಗೆದುಕೊಂಡಿತು.

ಆರ್‌ಎಸ್‌ಎಸ್ ಅಜೆಂಡಾವನ್ನು ಮುನ್ನಡೆಸಲು ಆಪಾದನೆಗಳನ್ನು ಹಿಂತೆಗೆದುಕೊಂಡದ್ದಷ್ಟೇ ಅಲ್ಲ, ಈಗ ಸಿಬಿಐನ್ನು ಆಳುವ ಪಕ್ಷದ ರಾಜಕೀಯ ವಿರೋಧಿಗಳ ವಿರುದ್ಧವೂ ಬಳಸುವ ಪ್ರಯತ್ನ ನಡೆದಿದೆ. ಈ ಹಿಂದೆಯೂ ದನ್ನು ನೋಡಿದ್ದೇವೆ. ಕೆಲವೊಮ್ಮೆ ಆಳುವ ಪಕ್ಷಗಳೊಳಗಿನ ರಾಜಕೀಯ ಪ್ರತಿಸ್ಪರ್ಧಿಗಳ ಮೇಲೆ ಇದನ್ನು ಪ್ರಯೋಗಿಸಲಾಗಿದೆ. ಈಗ ಐದು ರಾಜ್ಯಗಳಿಗೆ ಚುನಾವಣೆಗಳು ಸಮೀಪಿಸುತ್ತಿದ್ದಂತೆ ಆಳುವ ಬಿಜೆಪಿ ತನ್ನ ಪ್ರಮುಖ ಪ್ರತಿಸ್ಪರ್ಧಿ ಕಾಂಗ್ರೆಸ್‌ಗೆ ಸಮಸ್ಯೆಗಳನ್ನು ಸೃಷ್ಟಿಸಲು ಸಿಬಿಐಯನ್ನು ಬಳಸುತ್ತಿದೆ.

ಭಾರತದಲ್ಲಿನ ರಾಜಕೀಯ ಶಕ್ತಿಗಳಲ್ಲಿ ಭ್ರಷ್ಟಾಚಾರದ ವಿರುದ್ಧ ರಾಜಿಯಿಲ್ಲದ ಸಮರಸಾರಿರುವ ಪಕ್ಷ ಎಂದು ಸಿಪಿಐ(ಎಂ)ಗೆ ವಿಶಿಷ್ಟ ಸ್ಥಾನಮಾನವಿದೆ. ಅದರವಿರೋಧಿಗಳೂ ಇದನ್ನು ಅರೆಮನಸ್ಸಿನಿಂದಲಾದರೂ ಒಪ್ಪಿಕೊಳ್ಳುತ್ತಾರೆ. ಭ್ರಷ್ಟಾಚಾರ ಅಥವಾ ಕ್ರಿಮಿನಲ್ ಚಟುವಟಿಕೆಗಳ ಬಗ್ಗೆ ಆಪಾದನೆಗಳು, ಚಾರ್ಜ್‌ಶೀಟ್‌ಗಳು ಆಗಿರುವ ಪ್ರಶ್ನೆಗಳಲೆಲ್ಲಾ ಕಾನೂನು ತನ್ನ ದಾರಿಯಲ್ಲೇ ಸಾಗಲಿ ಎಂದು ಸಿಪಿಐ(ಎಂ) ಹೇಳುತ್ತಾ ಬಂದಿದೆ. ಒಂದು ನಾಗರಿಕ ಸಮಾಜದಲ್ಲಿ ಯಾವುದೇ ನಾಗರಿಕ, ಆತನೆಷ್ಟೇ ದೊಡ್ಡವನಾಗಿರಲಿ,



ಕಾನೂನಿಗಿಂತ ಮೇಲ್ಪಟ್ಟು ಇರಲು ಸಾಧ್ಯವಿಲ್ಲ. ಆದರೆ ಈ ನೀತಿಯನ್ನು ಎಲ್ಲರಿಗೂ ಅನ್ವಯಿಸಬೇಕು. ಆಳುವ ಪಕ್ಷದ ಮುಖಂಡರು ಭ್ರಷ್ಟಾಚಾರದ ಗಂಭೀರ ಆಪಾದನೆಗಳಿಂದ ತಪ್ಪಿಸಿಕೊಳ್ಳಲು ಬಿಡುವುದು, ಅವರನ್ನು ರಕ್ಷಿಸುವ ಮಟ್ಟದವರೆಗೂ ಹೋಗುವುದು, ಅತ್ತ ರಾಜಕೀಯ ವಿರೋಧಿಗಳ ಮೇಲಿನ ಆಪಾದನೆಗಳನ್ನು ಮಾತ್ರ ತನಿಖೆ ಮಾಡುವುದು ನಾಗರಿಕ ಸಮಾಜದ ಅವನತಿಯ ಲಕ್ಷಣವಲ್ಲದೆ ಬೇರೇನೂ ಅಲ್ಲ. ಸದ್ಯಕ್ಕೆ ನಡೆಯುತ್ತಿರುವುದು ಇದೇ.

ರಾಜಕೀಯ ಅಜೆಂಡಾದ ವಾಸನೆ

ಛತ್ತೀಸ್ ಗಢದ ಕಾಂಗ್ರೆಸ್ ಮುಖ್ಯಮಂತ್ರಿಯ ವಿರುದ್ಧ ಸಿಬಿಐ ಆಪಾದನೆ ಹಾಕಿರುವ ಸಮಯವನ್ನು ನೋಡಿದರೆ ಒಂದು ರಾಜಕೀಯ ಅಜೆಂಡಾದ ವಾಸನೆ ಹೊಡೆಯುತ್ತದೆ. ಇದುವರೆಗೂ ಬಿಜೆಪಿಯ ಮಿತ್ರರುಗಳಲ್ಲಿ ಒಬ್ಬರಾಗಿದ್ದ ಮಾಯಾವತಿಯವರನ್ನುಈಗ ಕಟಕಟೆಯಲ್ಲಿ ನಿಲ್ಲಿಸಲಾಗಿದೆ. ಈ ಆಪಾದನೆಗಳನ್ನು ನ್ಯಾಯಾಲಯದ ಮುಂದೆ ತಂದು, ತೀರ್ಪಿಗೆ ಕಾಯಬೇಕಾಗುತ್ತದೆ. ಕಾನೂನು ತನ್ನ ದಾರಿಯಲ್ಲೇ ಸಾಗಲು ಹಾಗೂ ತಪ್ಪಿತಸ್ಥರನ್ನು ಶಿಕ್ಷಿಸಲು ಬಿಡಬೇಕು.

> **ಕೋಮುವಾದಿ ಶಕ್ತಿಗಳಿಗೇನಾದರೂ ವಿಜಯ ಸಿಕ್ಕರೆ ಅದು ಅವರಿಗೆ ತಮ್ಮ ಅಜೆಂಡಾವನ್ನು ಅಂದರೆ ಆಧುನಿಕ ಭಾರತೀಯ ನಾಗರಿಕ ಸಮಾಜವನ್ನು ಧ್ವಂಸ ಮಾಡುವ ಅಜೆಂಡಾವನ್ನು ಪೂರ್ಣಗೊಳಿಸಲು ಕೆಲಸ ಮಾಡುವಂತೆ ಧೈರ್ಯ ಕೊಡುತ್ತದೆ**

ಆದರೆ ಅತ್ಯಂತ ಕ್ಷೋಭೆ ತರುವ ಅಂಶವೆಂದರೆ ಆಳುವ ಪಕ್ಷದ ರಾಜಕೀಯ ಅಜೆಂಡಾವನ್ನು ಈಡೇರಿಸಲು ಇಂತಹ ಸಂಸ್ಥೆಗಳನ್ನು ಬಳಸುತ್ತಿರುವ ರೀತಿ ಶಿಕ್ಷಣ ಸಂಸ್ಥೆಗಳು ಮತ್ತು ಚಾರಿತ್ರಿಕ ಸಂಶೋಧನೆಯ ಸಂಸ್ಥೆಗಳಲ್ಲಿ ಇಂತಹ ಕಸರತ್ತುಗಳು, ಒತ್ತಡ ಗಳನ್ನು ಈಗಾಗಲೇ ನೋಡುತ್ತಿದ್ದೇವೆ. ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಭಾರತವನ್ನು ಆರ್‌ಎಸ್‌ಎಸ್ ಕಣ್ಣೋಟದ 'ಹಿಂದೂರಾಷ್ಟ್ರ' ವಾಗಿ ಪರಿವರ್ತಿಸುವುದನ್ನು ಸಮರ್ಥಿಸಿಕೊಳ್ಳಲು ಮತ್ತು ಆ ವಿಚಾರವನ್ನು ಪ್ರತಿಪಾದಿಸಲು ಈ ರೀತಿ ಭಾರತೀಯ ಶಿಕ್ಷಣವನ್ನು ಕೋಮುಗ್ರಸ್ತಗೊಳಿಸುವ, ಭಾರತೀಯ ಇತಿಹಾಸವನ್ನು ಮತ್ತೆ ಬರೆಯುವ ಪ್ರಯತ್ನ ನಡೆಸಲಾಗಿದೆ.

ಮುಂಬರುವ ಐದು ರಾಜ್ಯಗಳ ಚುನಾವಣೆಗಳು ಭಾರತದ ಭವಿಷ್ಯದ ಮೇಲೆ ನಿರ್ಣಾಯಕ ಪ್ರಭಾವ ಬೀರುವಂತವುಗಳು. ಇದರಲ್ಲಿ ಕೋಮುವಾದಿ ಶಕ್ತಿಗಳಿಗೇನಾದರೂ ವಿಜಯ ಸಿಕ್ಕರೆ ಅದು ಅವರಿಗೆ ತಮ್ಮ ಅಜೆಂಡಾವನ್ನು ಅಂದರೆ ಆಧುನಿಕ ಭಾರತೀಯ ನಾಗರಿಕ ಸಮಾಜವನ್ನು ಧ್ವಂಸ ಮಾಡುವ ಅಜೆಂಡಾವನ್ನು ಪೂರ್ಣಗೊಳಿಸಲು ಕೆಲಸ ಮಾಡುವಂತೆ ಧೈರ್ಯ ಕೊಡುತ್ತದೆ. ಇದು ಭಾರತದ ಮತ್ತು ಜನತೆಗೆ ಗಂಡಾಂತರವನ್ನು ತಪ್ಪಿಸಬೇಕಾದರೆ ಇದಕ್ಕೆ ಅವಕಾಶ ನೀಡಲೇಬಾರದು. ಆಧುನಿಕತೆಯತ್ತ ಭಾರತದ ಮುನ್ನಡೆಯನ್ನು ಛಿದ್ರಗೊಳಿಸಲು, ಅದರ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣತಂತ್ರ ಸ್ವರೂಪವನ್ನು ಧ್ವಂಸ ಮಾಡಲು ಬಿಡಲೇಬಾರದು. ಇದು ಭಾರತಕ್ಕಾಗಿ ನಾವು ಮಾಡಬೇಕಾದ ಕೆಲಸ. ❍

> **ಕಾಮಧೇನು**
>
> ರಾಜಕೀಯ ವಸ್ತು ಕಾಮಧೇನು ಇಂದು
> ಗೋಮಾಂಸ ತಂದ ಡಾಲರ್‌ಗಳ ತಿಂದು
> ಹಾಲು ಹನಿಗೂ ಬಂತು ಪರದೇಶ ಇಲ್ಲಿ
> ಕೊಟ್ಟು ಮಾತೆಯ ಕಟುಕರ ಕೈಯಲ್ಲಿ
>
> \- ಆರ್ಗೆ ಹರೀಶ್ ನಾಯ್ಕ



ಮುಷ್ಕರದ ಮೂಲಭೂತ ಹಕ್ಕನ್ನೇ ನಿಷೇಧಿಸಿರುವ ನ್ಯಾಯಾಲಯದ ತೀರ್ಪಿನ ಹಿಂದೆ ಇರುವ ಅಸಲಿ ಸಂಗತಿಗಳೇನು?

ಪ್ರಜಾಪ್ರಭುತ್ವದ ಹಕ್ಕುಗಳು ಅಪಾಯದಲ್ಲಿ

ಅದಮಾರು ಶ್ರೀಪತಿ ಆಚಾರ್ಯ

ತಮಿಳುನಾಡಿನ ಜಯಲಲಿತಾ ಸರಕಾರ ಕಾನೂನು ಬಾಹಿರವಾಗಿ ವಜಾಗೊಳಿಸಿದ್ದ 1.70 ಲಕ್ಷ ಸರಕಾರಿ ನೌಕರರಲ್ಲಿ ಪ್ರಥಮ ಮಾಹಿತಿ ವರದಿ (ಖಟಿ) ಬಾಕಿ ಇರುವ 6072 ನೌಕರರನ್ನು ಹೊರತುಪಡಿಸಿ ಉಳಿದವರನ್ನು ಅವಮಾನಕರ ಶರ್ತಗಳಿಗೊಳಪಟ್ಟು ಮರಳಿ ನೇಮಕ ಮಾಡುವಂತೆ ಆದೇಶಿಸಿರುವ ಶ್ರೇಷ್ಠ ನ್ಯಾಯಾಲಯದ ನ್ಯಾಯ ಮೂರ್ತಿಗಳಾದ ಜಸ್ಟಿಸ್ ವಿಮ್.ಬಿ.ಶಾ ಮತ್ತು ಜಸ್ಟಿಸ್ ಎ.ಆರ್ ಲಕ್ಷ್ಮಣ್ಣನ್ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠವು ಈ ಮೂಲಕ ಜಯಲಲಿತಾಗೆ ಮುಖವುಳಿಸಿಕೊಳ್ಳುವಂತೆ ಮಾಡಿದೆ. ಎಫ್.ಐ.ಆರ್ ಬಾಕಿ ಇರುವ ನೌಕರರದ್ದೂ ನಿಜವಾಗಿ ಎಫ್.ಐ.ಆರ್. ಅಲ್ಲ. ಮುಷ್ಕರದಲ್ಲಿ ಪಾಲ್ಗೊಂಡ ನೌಕರರ ಪಟ್ಟಿಯನ್ನೇ ಎಫ್.ಐ.ಆರ್ ಎಂದು ಪರಿಗಣಿಸಲಾಗಿದೆ. ಇಲ್ಲೂ ಕೂಡಾ ಗೌರವಾನ್ವಿತ ನ್ಯಾಯಮೂರ್ತಿಗಳು ತಮಿಳುನಾಡಿನ ಸರಕಾರಿ ನೌಕರರ ಮುಷ್ಕರ ನ್ಯಾಯ ಬಾಹಿರ ಎಂದು ಸ್ಪಷ್ಟವಾದ ತೀರ್ಪು ನೀಡಿಲ್ಲ. ಸರಕಾರಿ ನೌಕರರಿಗೆ ಮುಷ್ಕರ ಹೂಡುವ ನೈತಿಕ ಅಥವಾ ನ್ಯಾಯ ಸಮ್ಮತವಾದ ಹಕ್ಕಿಲ್ಲ ಎಂಬ ಅನಗತ್ಯವಾದ ಟೀಕೆಯನ್ನು ಅಪ್ರಾಸಂಗಿಕವಾಗಿ ಮಾಡಲಾಗಿದೆ ಅಷ್ಟೆ. ಈ ಟೀಕೆ ಮಾಡುವಡಾಗಲೂ ನ್ಯಾಯಪೀಠವು ಈ ಹಿಂದೆ 1989 ರಲ್ಲಿ ಜಸ್ಟಿಸ್ ಎ.ಎಂ.ಅಹ್ಮದಿ ಅವರ ನೇತೃತ್ವದ ತ್ರಿಸದಸ್ಯ ನ್ಯಾಯಪೀಠವು 'ಮುಷ್ಕರದ ಹಕ್ಕು ನ್ಯಾಯಸಮ್ಮತವಾದದ್ದು' ಎಂಬುದಾಗಿ ನೀಡಿರುವ ತೀರ್ಪನ್ನು ಲಕ್ಷ್ಯ ಮಾಡಿಲ್ಲ ಎನ್ನುವುದು ಸ್ಪಷ್ಟವಾಗಿದೆ.

ತಲೆ ಎತ್ತುತ್ತಿರುವ ಫ್ಯಾಸಿಸ್ಟ್ ಪ್ರವೃತ್ತಿ

ಅದೇನೇ ಇದ್ದರೂ ಜಾಗತೀಕರಣ ಮತ್ತು ಉದಾರೀಕರಣದ ಉರುಳಲ್ಲಿ ಸಿಲುಕಿ ಹಾಕಿಕೊಂಡಿರುವ ಅನೇಕ ಅಭಿವೃದ್ಧಿಶೀಲ ರಾಷ್ಟ್ರಗಳ ಆಳುವ ವರ್ಗಗಳ ಪಾಲಿಗೆ ಇವೊತ್ತು ಪ್ರಜಾಪ್ರಬುತ್ವವೆನ್ನುವುದೊಂದು ಹೊರಲಾಗದ ಹೊರೆಯಾಗಿಬಿಟ್ಟಂತಿದೆ. ಇವರಿಗೆ ಸಾಲ ನೀಡಿ ಬೋನಿನೊಳಗೆ ಹಿಡಿದಿಟ್ಟಿರುವ ಅಮೇರಿಕಾದಂತಹ ದೇಶಗಳು, ವಿಶ್ವಬ್ಯಾಂಕ್, ಐ.ಎಂ.ಎಫ್.ಗಳು ಇದನ್ನು ಸಾಕಷ್ಟು ಬಹಿರಂಗವಾಗಿಯೇ ಉಪದೇಶಿಸುತ್ತವೆ. "ನಮ್ಮಂತಹ ಬಿಳಿತೊಗಲಿನವರಿಗೆ, ಶ್ರೀಮಂತರಿಗೆ ಪ್ರಜಾಪ್ರಬುತ್ವ ಸರಿ, ನಿಮ್ಮಂತಹ ಕರಿಯರಿಗೆ, ದಟ್ಟ ದರಿದ್ರರಿಗೆ ಪ್ರಜಾಪ್ರಭುತ್ವ ಯಾಕೆ? ಎಂಬ ಮನೋಭಾವ ಅವರದ್ದು. ಇವರ ಕಟ್ಟಾ ಚೇಲಾಗಳಾಗಿರುವ ನಮ್ಮ ಸರಕಾರಗಳು ಇದಕ್ಕೆ ತಲೆಯಾಡಿಸಿ ನಮ್ಮ ಒಂದೊಂದೇ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಕಿತ್ತುಕೊಳ್ಳಲಾರಂಭಿಸಿವೆ. ತೀರವಾಗುತ್ತಿರುವ ಮುಗ್ಗಟ್ಟಿನ ಹೊರೆಯನ್ನು ದುಡಿಯುವ ಜನತೆಯ ಮೇಲೆ ಹೇರಿಬಿಡುವ ಅವರ ಪ್ರಯತ್ನಗಳಿಗೆ ನಮ್ಮ ಪ್ರಜಾಸತ್ತಾತ್ಮಕ ಹಕ್ಕುಗಳು ದೊಡ್ಡ ಅಡಚಣೆಯಾಗಿವೆ. ಇಂತಹ ಸನ್ನಿವೇಶದಲ್ಲಿ ನಮ್ಮ ಆಳುವ ವರ್ಗಗಳು ನಮ್ಮ ಪ್ರಜಾಪ್ರಭುತ್ವವಾದಿ ಮುಖವಾಡವನ್ನು ಕಳಚಿಬಿಟ್ಟು ನಗ್ನ ಫ್ಯಾಶಿಸ್ಟ್ ಸ್ವರೂಪದಲ್ಲಿ ಬರಲು ಹೇಸುವುದಿಲ್ಲವೆನ್ನುವುದು ವಿಶ್ವದ ಇತಿಹಾಸದಲ್ಲಿ ಅನೇಕ ಸಲ ಸಾಬೀತಾಗಿದೆ. ಪ್ರಜಾಪ್ರಭುತ್ವದ ಮೇಲಿನ ಆಕ್ರಮಣದಲ್ಲಿ ಮೊತ್ತ ಮೊದಲು ಬಲಿಯಾಗುವುದು ಕಾರ್ಮಿಕರ ಹಕ್ಕುಗಳು. ತಮಿಳುನಾಡು ಸರಕಾರಿ ನೌಕರರ ಮುಷ್ಕರದ ಬಗ್ಗೆ ನ್ಯಾಯಾಂಗವು ಮಾಡಿರುವ ಅನಗತ್ಯ ಟಿಪ್ಪಣಿ, ಬಂದ್ ಮುಂತಾದ ಸಂಘಟಿತ ಹೋರಾಟಗಳ ಕುರಿತು ನ್ಯಾಯಾಂಗವು ತೋರಿಸಿರುವ ಅಸಹನೆ, ಎರಡನೇ ಕಾಮಿಟಿಕ ಆಯೋಗದ ಶಿಫಾರಸು ಇತ್ಯಾದಿಗಳು ಜಾಗತೀಕರಣದ ಇಂದಿನ ಸನ್ನಿವೇಶದಲ್ಲಿ ಬೆಳೆದುಬರುತ್ತಿರುವ ಈ ಫ್ಯಾಶಿಸ್ಟ್ ಮನೋಭಾವದ ಮುನ್ಸೂಚನೆ ಎನ್ನಬಹುದು.

ಭಾರತ ಅಮೇರಿಕಾ ಅಲ್ಲ


ನೋಡಿ, ನೀವು ನಿಮ್ಮ ನೌಕರರನ್ನು 35-40 ವರ್ಷಗಳ ಕಾಲಕ್ಕೆ ಕೆಲಸಕ್ಕೆ ನೇಮಿಸಿಕೊಳ್ಳಬೇಡಿ, ಎರಡು-ಮೂರು ವರ್ಷಗಳ ಕಾಲ ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಂಡು ಆಮೇಲೆ ಕಿತ್ತು ಹಾಕಿ. ಆಗ ಪ್ರಾವಿಡೆಂಟ್ ಫಂಡ್, ಪೆನ್ಶನ್, ಗ್ರಾಜುಯಿಟಿ ಮುಂತಾದ ಸವಲತ್ತುಗಳನ್ನು ಕೊಡಬೇಕಾಗಿಲ್ಲ ಅಲ್ಲವೆ? ಈ ಮಾತುಗಳು ನಮ್ಮ ಕೇಂದ್ರ ಸರಕಾರಕ್ಕೆ ತುಂಬಾ ಇಂಪಾಗಿ ಕೇಳಿಸುತ್ತವೆ. ಅವರೂ ಇಲ್ಲಿ "ಹಯರ್ ಎಂಡ್ ಫೈರ್" ವಿಧಾನವನ್ನು ಬಳಸಲು ತೀರಾ ಉತ್ಸುಕರಾಗಿದ್ದಾರೆ. ಆದರೆ ಒಂದು ಮಾತು. ಅಮೇರಿಕಾದ ಜನ ಸಂಖ್ಯೆ ಕೇವಲ ಇಪ್ಪತ್ತು ಕೋಟಿ- ನಮ್ಮದೋ ನೂರಾನಾಲ್ಕು ಕೋಟಿ. ಅವರ ದೇಶ ನಮ್ಮದಕ್ಕಿಂತ ಆರುಪಟ್ಟು ಹೆಚ್ಚು ವಿಸ್ತಾರವಾಗಿದೆ. ಅವರು ಪ್ರಪಂಚದ ಮೂಲೆ ಮೂಲೆಗಳಲ್ಲಿನ ದೇಶಗಳ ಸಂಪತ್ತನ್ನು ಕೊಳ್ಳೆಹೊಡೆದು ಹೀರಿ ಕೊಬ್ಬಿದ್ದಾರೆ. ನಾವೋ ದಟ್ಟ ದರಿದ್ರರು. ಅವರಿಗೆ ಸರಿಹೊಂದುವ ಎಲ್ಲವೂ ನಮಗೆ ಸರಿಹೊಂದಲಾರದು. ನಮ್ಮ ಸಂಸ್ಕೃತಿ ಬೇರೆ, ನಮ್ಮ ಪರಂಪರೆ ಬೇರೆ, ನಮ್ಮ ವಾಸ್ತವಿಕ ಸ್ಥಿತಿಗೂ ಬೇರೆಯೇ, ನಾವು ಅವರನ್ನು ಕುರುಡಾಗಿ ನಕಲು ಮಾಡುವುದೆಂದರೆ ನವಿಲನ್ನು ಕಂಡು ಕುಣಿದ ಕೆಂಬೂತದಂತೆ ಹಾಸ್ಯಾಸ್ಪದವಾಗಲಾರದೆ?

ಪ್ರಜಾಪ್ರಭುತ್ವದಲ್ಲಿ ಟ್ರೇಡ್ ಯೂನಿಯನ್‌ಗಳು

ಪ್ರಜಾಪ್ರಭುತ್ವದಲ್ಲಿ ಟ್ರೇಡ್ ಯೂನಿಯನ್‌ಗಳಿಗೆ ಮಹತ್ವದ ಸ್ಥಾನವಿದೆ. ಒಂದರ್ಥದಲ್ಲಿ ಟ್ರೇಡ್ ಯೂನಿಯನ್ ಗಳೆಂದರೆ ಪ್ರಜಾಪ್ರಭುತ್ವದ ಬೆನ್ನೆಲುಬು. ಟ್ರೇಡ್ ಯೂನಿಯನ್ ಚಳುವಳಿಯ ಧಾರಣ ಶಕ್ತಿಯೂ ಅಸಾಧಾರಣವಾದದ್ದು. 1930-40 ದಶಕದಲ್ಲಿ ಯುರೋಪಿನಲ್ಲಿ ಫ್ಯಾಸಿಸಂ ತಾಂಡವವಾಡುತ್ತಿದ್ದಾಗ, ಹಿಟ್ಲರ್, ಮುಸಲೋನಿಗಳು ವಿಶ್ವದ ಸರ್ವನಾಶಕ್ಕೆ ಅಣಿಯಾಗುತ್ತಿದ್ದಾಗ ನಾಜೀವಾದದ ಬಿರುಗಾಳಿಗೆ ಹಾರಿಹೋಗದೆ ಗಟ್ಟಿಯಾಗಿ ನಿಂತು ಫ್ಯಾಸಿಸ್ಟ್ ವಿರೋಧಿ ಹೋರಾಟಕ್ಕೆ ಆಧಾರ ಸ್ತಂಭಗಳಾಗಿದ್ದದ್ದು ಯುರೋಪಿನ ಕಾರ್ಮಿಕ ಸಂಘಟನೆಗಳೇ. 1975-77 ರಲ್ಲಿ ನಮ್ಮ ದೇಶದಲ್ಲಿ ವಿಷಮ ಪರಿಸ್ಥಿತಿ ಇದ್ದಾಗ, ನಮ್ಮ ಕಾರ್ಮಿಕ ಸಂಘಟನೆಗಳು ಮಹಾನ್ ಪೌರುಷದ ಕಾರ್ಯವನ್ನೇನೂ ಮಾಡದೇ ಇದ್ದಿರಬಹುದು. ಆದರೆ ವಿಷಮ ಪರಿಸ್ಥಿತಿಯ ಪ್ರವಾಹದಲ್ಲಿ ಹೆಚ್ಚಿನ ಎಲ್ಲ ಸಂಸ್ಥೆಗಳೂ ಕೊಚ್ಚಿಕೊಂಡು ಹೋದಾಗಲೂ ಪ್ರಜಾಪ್ರಭುತ್ವವಾದಿ ಶಕ್ತಿಗಳ ಭೂಗತ ಪ್ರತಿಭಟನೆಗೆ ಆಸರೆ ನೀಡಿದುದು ಇಲ್ಲಿನ ಕಾರ್ಮಿಕ ಸಂಘಟನೆಗಳು! ಇದೀಗ ಅಟ್ಟಹಾಸಗೈಯುತ್ತಿರುವ ಕೋಮುವಾದಿ ಶಕ್ತಿಗಳ ವಿರುದ್ಧ ಪ್ರತಿಭಟನೆಯನ್ನು ಸಂಘಟಿಸುವ, ಸೆಕ್ಯುಲರ್‌ವಾದಿ ಶಕ್ತಿಗಳಿಗೆ ಬೆಂಬಲ ನೀಡಿ ಪ್ರೋತ್ಸಾಹಿಸುತ್ತಿರುವ ಕೆಲಸವನ್ನೂ ಕಾರ್ಮಿಕ ಸಂಘಟನೆಗಳೇ ಮಾಡುತ್ತಿವೆ. ಕೋಮುವಾದಿ ರಾಜಕೀಯ ಪಕ್ಷವೊಂದರ ನಿಯಂತ್ರಣದಲ್ಲಿರುವ ಒಂದು ಕೇಂದ್ರ ಸಂಘಟನೆಯನ್ನು ಹೊರತು ಪಡಿಸಿದರೆ ಈ ದೇಶದ ಯಾವುದೇ ಕೇಂದ್ರ ಕಾರ್ಮಿಕ ಸಂಘಟನೆ ಅಥವಾ ಅಖಿಲ ಭಾರತ ಮಟ್ಟದ ಕಾರ್ಮಿಕ ಫೆಡರೇಶನ್‌ಗಳು ಕೋಮುವಾದಿ ವಿಷಕ್ಕೆ ಈತನಕ ಬಲಿಬಿದ್ದಿಲ್ಲ; ಬಲಿ ಬೀಳುವುದೂ ಇಲ್ಲ.

ಮುಷ್ಕರದ ಹಕ್ಕು, ಕಾರ್ಮಿಕರ ಮೂಲಭೂತ ಹಕ್ಕು

ನ್ಯಾಯಾಲಯಗಳು ಏನೇ ಹೇಳಲಿ, ಮುಷ್ಕರದ ಹಕ್ಕು ಈ ದೇಶದ ಕಾರ್ಮಿಕ ವರ್ಗದ ಮೂಲಭೂತ ಹಕ್ಕು; ಅದು ಯಾರೋ ನಮಗೆ ನೀಡಿದ ಔದಾರ್ಯದ ಉಡುಗೊರೆ ಅಲ್ಲ. ನ್ಯಾಯಾಲಯಗಳ ಅನುಮತಿ ಪಡೆದು ನಾವು ಮುಷ್ಕರ ಮಾಡುವುದೂ ಅಲ್ಲ. ನಮ್ಮ ನೋವು, ಸಂಕಟಗಳಿಗೆ ಅಭಿವ್ಯಕ್ತಿ ನೀಡಲು ನಾವು ಅನಿವಾರ್ಯವಾಗಿ ಮಾಡುವ ಹೋರಾಟವೇ ಮುಷ್ಕರ. ಕೆಲವರು ಹೀಗೆ ವ್ಯಂಗ್ಯವಾಡುವುದಿದೆ- "ಏನು ಬ್ಯಾಂಕಿನಲ್ಲಿ ಕೆಲಸ ಸಿಕ್ಕಿತೇ? ಸರಿ, ಇನ್ನು ನಾಳೆಯಿಂದ ಮುಷ್ಕರ ಮಾಡಿ" ಅಂತ. ನಾವು ಮುಷ್ಕರ ಮಾಡುವುದು ಮನರಂಜನೆಗೆಂದೇ ಈ ಮಂದಿ ಭಾವಿಸಿದಂತಿದೆ. ಕಾರ್ಮಿಕರ ಪಾಲಿಗೆ ಮುಷ್ಕರವೆನ್ನುವುದೊಂದಲು ತಮಾಷೆ ಅಲ್ಲ. ಅದು ಕಾರ್ಮಿಕರ ಬತ್ತಳಿಕೆಯಲ್ಲಿರುವ ಹೋರಾಟದ ಕೊನೆಯ ಅಸ್ತ್ರವೇ ಹೊರತು



ಗುಲ್ಬರ್ಗಾ


ಬೇಕಾಬಿಟ್ಟಿಯಾಗಿ ಬಳಸುವ ಆಯುಧ ಅಲ್ಲ. ಯಾರೂ ಮೋಜಿಗಾಗಿ ಮುಷ್ಕರ ಮಾಡುವುದಿಲ್ಲ. ಮುಷ್ಕರದ ಹಕ್ಕು ಇಲ್ಲದಿದ್ದರೆ ಸಾಮೂಹಿಕ ಚೌಕಾಸಿಯ ಹಕ್ಕೂ ಇಲ್ಲದಂತೆಯೇ; ಅದು ಹಲ್ಲಿಲ್ಲದ ಹಾವಿನಂತೆ ನಿಷ್ಪ್ರಯೋಜಕ. ಮುಷ್ಕರದ ಅವಧಿಗೆ ಯಾರೂ ಸಂಬಳ ಪಡೆಯುವುದಿಲ್ಲ. 'ಖಈ ಢಈಟಚ, ಖಈ ಠಿತೆ ಎಂಬ ತತ್ವದ ಆಧಾರದಲ್ಲಿ ಮುಷ್ಕರ ಮಾಡಿದವರ ವೇತನ ಕಡಿತ ಮಾಡಲಾಗುತ್ತದೆ. ಎರಡು ದಿನ ಮುಷ್ಕರ ಮಾಡಿದರೆ ತಿಂಗಳ ಕೊನೆಗೆ ಸಂಬಳದಲ್ಲಿ ಮುನ್ನೂರು ರೂಪಾಯಿ ಕಡಿತವಾಗುತ್ತದೆ.

ಮುಷ್ಕರದ ದಿನ ಕಛೇರಿಗೆ ಹಾಜರಾಗದೆ ಸಂಬಳ ಕಳೆದುಕೊಂಡರೆ ಅದೇ ಸ್ಟೈಕ್ ಎಂಬುದು ಹೆಚ್ಚಿನವರಿಗೆ ಗೊತ್ತಿಲ್ಲ. 'ಮುಷ್ಕರ' ಎಂದರೆ 'ಲಷ್ಕರೆತೊಯಿಬಾ' ಅಥವಾ 'ಜೈಶೆ ಮೊಹಮ್ಮದ್'ಗಳು ನಡೆಸುವ ಭಯೋತ್ಪಾದಕ ಕೃತ್ಯದಂತೆ ಎಂದು ನಮ್ಮಲ್ಲಿ ಅನೇಕರು ಭಾವಿಸಿರುವಂತಿದೆ. ನಮ್ಮ ಸಮೂಹ ಮಾಧ್ಯಮಗಳು, ಮುಖ್ಯವಾಗಿ ದೃಶ್ಯ ಮಾಧ್ಯಮಗಳಾದ ಸಿನೆಮಾ, ಟಿ.ವಿ. ಮುಂತಾದವು ಗಳೂ 'ಮುಷ್ಕರ', ಕಾರ್ಮಿಕ ಸಂಘಟನೆ ಇತ್ಯಾದಿಗಳನ್ನು ಅತ್ಯಂತ ಕೆಟ್ಟದಾಗಿ ಬಿಂಬಿಸುತ್ತವೆ.

ಮುಷ್ಕರಗಳಿಂದಾಗಿ ಸಾರ್ವಜನಿಕರಿಗೆ ಒಂದಿಷ್ಟು ತೊಂದರೆಯಾಗುತ್ತದೆ ಎನ್ನುವುದು ನಿಜ; ಆದರೆ ಮುಷ್ಕರಗಳ ಉದ್ದೇಶವೂ ಒಂದು ಸೀಮಿತ ಮಟ್ಟದ ಅನಾನುಕೂಲತೆಯುಂಟು ಮಾಡುವುದೇ ಆಗಿದೆ ಎಂದು ಪ್ರಸಿದ್ಧ ಬ್ರಿಟೀಷ್ ರಾಜನೀತಿಜ್ಞ ಹೆರಾಲ್ಡ್ ಲಾಸ್ಕಿ ಹೇಳುತ್ತಾನೆ. ಎಲ್ಲಿಯವರೆಗೆ ಸಮಾಜದಲ್ಲಿ ಎಲ್ಲವೂ ಸುಸೂತ್ರವಾಗಿರುತ್ತದೋ ಅಲ್ಲಿಯವರೆಗೆ ಸಮಾಜವು ಯಾರ ಸಂಕಷ್ಟಗಳ ಬಗೆಗೂ ತಲೆಕೆಡಿಸಿಕೊಳ್ಳುವುದಿಲ್ಲ. ಅದು ನಿಶ್ಚಿಂತ ವಾಗಿರುತ್ತದೆ. ತನಗೆ ಒಂದಿಷ್ಟು ತೊಂದರೆ ಯುಂಟಾದಾಗ ಮಾತ್ರ ಸಮಾಜವು ಎಚ್ಚೆತ್ತು 'ಏನಪ್ಪ ನಿಮ್ಮ ಸಮಸ್ಯೆ' ಎಂದು ಕೇಳುವ ಸೌಜನ್ಯ ತೋರಿಸಬಲ್ಲದು. ನಮ್ಮ ದೌರ್ಬಲ್ಯ ಏನೆಂದರೆ ನಾವು ಮುಷ್ಕರ ಮಾಡುವಾಗ ತೊಂದರೆ ಗೊಳಗಾಗುವವರ ಬಳಿಗೆ ಹೋಗಿ ನಮ್ಮ ಸಮಸ್ಯೆಗಳ ಕುರಿತು ವಿವರಿಸಿ ಹೇಳುವ ಗೊಡವೆಗೆ ಹೋಗುವುದಿಲ್ಲ. ನಾವು ನಮ್ಮಷ್ಟಕ್ಕೇ ಮುಷ್ಕರ ಮಾಡಿದರೆ ಸಾಲದು; ಮುಷ್ಕರ ಯಾಕಾಗಿದೆ ಎಂಬ ಬಗ್ಗೆ ಜನಕ್ಕೆ ತಿಳಿಹೇಳುವ ಕೆಲಸವನ್ನೂ ಮಾಡಬೇಕು. ಮುಷ್ಕರಕ್ಕಿಂತಲೂ ಮುಖ್ಯವಾದುದು ಅದರ ಬಗ್ಗೆ ನಾವು ನಡೆಸುವ ಪ್ರಚಾರ. ಕಾರ್ಮಿಕರು ಕೇವಲ ನಮ್ಮ ಬೇಡಿಕೆಗಳ ಈಡೇರಿಕೆಗಾಗಿ ಮಾತ್ರ ಮುಷ್ಕರ ಮಾಡುವುದಲ್ಲ. ಜರ್ಮನಿಯ ಕಾರ್ಮಿಕ ವರ್ಗ ಸಾರ್ವತ್ರಿಕ ಮುಷ್ಕರ ಮಾಡಿದುದರಿಂದ 1920 ರ ದಶಕದಲ್ಲಿ ಅಲ್ಲಿ ಕ್ಷಿಪ್ರಕ್ರಾಂತಿ ಸಂಭವಿಸುವುದನ್ನು ತಪ್ಪಿಸಿ ಪ್ರಜಾಸತ್ತೆಯನ್ನು ಉಳಿಸಿಕೊಳ್ಳಲಾಯಿತಂತೆ. ಜಗತ್ತಿನ ಕಾರ್ಮಿಕ ವರ್ಗ 1914 ರಲ್ಲಿ ಇಂತಹ ಸಾರ್ವತ್ರಿಕ ಮುಷ್ಕರ ನಡೆಸಿದ್ದರೆ ಮೊದಲನೇ ಮಹಾಯುದ್ಧವನ್ನು ತಡೆಯಬಹುದಾಗಿತ್ತು ಎಂದು ಲಾಸ್ಕಿ ಹೇಳುತ್ತಾನೆ. ನಮ್ಮ ದೇಶದಲ್ಲೂ ಕಳೆದ ಹನ್ನೆರಡು ವರ್ಷದಲ್ಲಿ ಕಾರ್ಮಿಕರು ಜಾಗತೀಕರಣ, ಉದಾರೀಕರಣಗಳ ವಿರುದ್ಧ ಅನೇಕ ಮುಷ್ಕರ ನಡೆಸಿದ್ದಾರೆ. ಮೊನ್ನೆ ಮೇ .21 ರಂದು ಈ ದೇಶದ ಆರು ಕೋಟಿ ಕಾರ್ಮಿಕರು ಜಾಗತೀಕರಣ ಮತ್ತು ಕೋಮುವಾದದ ವಿರುದ್ಧ ಮುಷ್ಕರ ನಡೆಸಿ ಅಪೂರ್ವ ರಾಜಕೀಯ ಪ್ರಜ್ಞೆಯನ್ನು ಮೆರೆದಿದ್ದಾರೆ. ಕೆಲವೇ ದಿನಗಳ ಹಿಂದೆ ವಿಮಾ ನೌಕರರು ವರಿಷ್ಠ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ ಮುಷ್ಕರದ ಹಕ್ಕಿನ ಮೇಲಾಗುತ್ತಿರುವ ಧಾಳಿಯ ವಿರುದ್ಧ ಎರಡು ತಾಸಿನ ಮುಷ್ಕರ ಆಚರಿಸಿದ್ದಾರೆ.


ಬೆಳೆಯುತ್ತಿರುವ ಅಸಹನೆ

ಈಗೀಗ ಸಮಾಜದಲ್ಲಿ ಮುಷ್ಕರಗಳ ಬಗ್ಗೆ ತೀವ್ರ ಅಸಹನೆ ವ್ಯಕ್ತವಾಗುತ್ತಿದೆ. ಇತ್ತೀಚೆಗಂತೂ ಎಲ್ಲ ಸಂಘಟಿತ ಹೋರಾಟಗಳ ಬಗ್ಗೆಯೂ ಜನರಲ್ಲಿ ಅಸಹನೆ ಗೋಚರವಾಗುತ್ತಿದೆ. ಇದು ನಮ್ಮಲ್ಲಿ ಫ್ಯಾಸಿಸ್ಟ್ ಪ್ರವೃತ್ತಿ ಬೆಳೆಯುತ್ತಿರುವುದರ ಲಕ್ಷಣ. ಆದರೆ ವಿಚಿತ್ರವೆಂದರೆ ಕೋಮುವಾದಿಗಳು ದೇವ ಹೆಸರಲ್ಲಿ ಮತದ ಹೆಸರಲ್ಲಿ ನಡೆಸುತ್ತಿರುವ ಅಟ್ಟಹಾಸ, ಕೋಮುಗಲಭೆ, ಬಲವಂತದ ಬಂದ್ ಇತ್ಯಾದಿಗಳ ಬಗ್ಗೆ ಯಾರೂ ಅಸಹನೆ ವ್ಯಕ್ತಪಡಿಸುವುದಿಲ್ಲ. ಮೊನ್ನೆ ಮೊನ್ನೆ ಮಂಗಳೂರಿನಲ್ಲಿ, ಸಾಗರದಲ್ಲಿ ಮತೀಯವಾದಿಗಳು ದೇವರು, ಧರ್ಮದ ನೆಪದಲ್ಲಿ ಪ್ರಚ್ಛನ್ನ ಗೂಂಡಾಗಿರಿ ನಡೆಸಿದಾಗ ಯಾರೂ ಅದನ್ನು ಯಾಕೆ ಖಂಡಿಸಲಿಲ್ಲ. ಬದಲಾಗಿ "ಬಂದ್ ಯಶಸ್ವಿಯಾಗಿದೆ" ಎಂದು ಪತ್ರಿಕೆಗಳು ಕುಂಬಳಕಾಯಿ ಅಕ್ಷರಗಳಲ್ಲಿ ಮುದ್ರಿಸಿದ್ದು ಯಾಕೆ? "ಯಶಸ್ವಿ" ಯಾದದ್ದಾದರೂ ಏನು? ಬಸ್ಸುಗಳನ್ನು ಎಲ್ಲೆಸೆದು ಪುಡಿಮಾಡಿದ್ದೆ? ಅಮಾಯಕ ಪ್ರಯಾಣಿಕರನ್ನು ನಡುದಾರಿಯಲ್ಲಿ ಇಳಿಸಿ ಥಳಿಸಿ, ಮರಗಳನ್ನು ಕಡಿದು ರಸ್ತೆಗೆ ಅಡ್ಡಹಾಕಿದ್ದು? ಕಾರ್ಮಿಕರು ಮಾತ್ರ ಶಾಂತರೀತಿಯಿಂದ ಮುಷ್ಕರ ಮಾಡಿದಾಗಲೂ ಸಮೂಹ ಮಾಧ್ಯಮಗಳು ಸಂಪಾದಕೀಯ ಬರೆದು "ಈ ಮುಷ್ಕರ ರಾಷ್ಟ್ರವಿರೋಧಿಯಾಗಿದೆ" ಎಂದು ಖಂಡಿಸುವುದು ಯಾಕೆ?



ವರ್ಗ ಸಹಕಾರದ ಧೋರಣೆಯನ್ನು ಅನುಸರಿಸುತ್ತಿದ್ದ ಎಐಟಿಯುಸಿ ನೀತಿಗಳ ವಿರುದ್ಧ ಸಿಡಿದೆದ್ದು ವರ್ಗ ಸಂಘರ್ಷವನ್ನು ಎತ್ತಿಹಿಡಿಯಿತು ಸಿಐಟಿಯು. ಕಾರ್ಮಿಕವರ್ಗ ಸಮರಶೀಲ ಹೋರಾಟಗಳನ್ನು ನಡೆಸಿ, ವರ್ಗ ಶತ್ರುಗಳ ವಿರುದ್ಧ ಹೋರಾಡಬೇಕು, ಈ ಉದ್ದೇಶದಿಂದಲೇ 33 ವರ್ಷಗಳ ಹಿಂದೆ ಸಿಐಟಿಯು ಸ್ಥಾಪನೆಯಾಯಿತು. ಸಿಐಟಿಯುನ 9ನೇ ಕರ್ನಾಟಕ ರಾಜ್ಯ ಸಮ್ಮೇಳನ ಮೈಸೂರಿನಲ್ಲಿ ನಡೆಯುತ್ತಿರುವ ಸಂದರ್ಭದಲ್ಲಿ ಸಿಐಟಿಯುವಿನ ರಾಜ್ಯ ಅಧ್ಯಕ್ಷರಿಂದ ಒಂದು ಅವಲೋಕನ

ಕಾರ್ಮಿಕ ವರ್ಗದ ಆಶಾಕಿರಣ ಸಿಐಟಿಯು



ಬಿ.ಮಾಧವ

ಕಾರ್ಮಿಕ ವರ್ಗವು ರಾಜಕೀಯ ಅಧಿಕಾರವನ್ನು ಸ್ವಾಧೀನಪಡಿಸಲು ಪ್ರಜ್ಞಾಪೂರ್ವಕವಾಟ ಹೋರಾಡದಿದ್ದರೆ ಸಮಾಜವಾದ ಮತ್ತು ಶೋಷಣಾರಹಿತ ವ್ಯವಸ್ಥೆ ಎಂಬುದು ಕೇವಲ ಶಬ್ದಗಳಾಗಿಯೇ ಉಳಿಯಬಹುದು ಎಂಬುದನ್ನು ಟ್ರೇಡ್ ಯೂನಿಯನ್ ಚಳುವಳಿಯು ಎಂದಿಗೂ ಮರೆಯಬಾರದು. ಇಂದಿನ ಬಂಡವಾಳಶಾಹಿ-ಭೂಮಾಲಕ ಸರಕಾರವನ್ನು ಕಿತ್ತು ಹಾಕಿ, ಒಂದು ನೈಜ ಜನತಾ ಸರಕಾರವನ್ನು ಸ್ಥಾಪಿಸುವುದೇ ಈ ನಿಟ್ಟಿನಲ್ಲಿ ಇಡಬೇಕಾದ ಮೊದಲ ಹೆಜ್ಜೆ. ಪ್ರಸಕ್ತ ಸರಕಾರವನ್ನು ಬದಲಿಸಲು ನಿರಂತರವಾಗಿ ಹೋರಾಡುವುದು, ರೈತಾಪಿ ಜನತೆಯ ಸಖ್ಯತೆಯೊಂದಿಗೆ ಪ್ರಜಾಸತ್ತಾತ್ಮಕ ಚಳುವಳಿಗಳನ್ನು ಹುಟ್ಟು ಹಾಕುವುದು ಮತ್ತು ಅವುಗಳಲ್ಲಿ ಭಾಗವಹಿಸುವುದು, ಕಾರ್ಷಿಕ ಕ್ರಾಂತಿಯ ಹೋರಾಟಗಳನ್ನು ಬೆಂಬಲಿಸುವುದು..... ಈ ಉದ್ದೇಶಕ್ಕಾಗಿ ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳ



ಸಂಯುಕ್ತ ರಂಗವನ್ನು ರಚಿಸಲು ತನ್ನ ಪೂರ್ತಿ ಶಕ್ತಿಯನ್ನು ಹಾಕುವುದು- ಇವುಗಳು ಟ್ರೇಡ್ ಯೂನಿಯನ್ ಚಳುವಳಿಯ ಅವಶ್ಯಕ ಕರ್ತವ್ಯಗಳಾಗಿವೆ". 1970 ರ ಮೇ 30 ರಂದು ಸಿಐಟಿಯು ಸ್ಥಾಪನಾ ಸಮ್ಮೇಳನದ ಸಮಾರೋಪ ಭಾಷಣದಲ್ಲಿ ಕಾಮ್ರೇಡ್ ಬಿ.ಟಿ.ರಣದೀವೆಯವರು ಹೇಳಿದ ಮಾತುಗಳಿವು. ಕಳೆದ 33 ವರ್ಷಗಳಲ್ಲಿ ಸಿಐಟಿಯು ತನ್ನ ಸ್ಥಾಪಕ ಅಧ್ಯಕ್ಷರ ಆಶಯಗಳ ಪಥದಲ್ಲೇ ಮುನ್ನಡೆಯಲು ಪ್ರಯತ್ನಿಸಿದೆ.


ಎಐಟಿಯುಸಿಯ ಪ್ರಮುಖ ನಾಯಕತ್ವವು ವರ್ಗ ಹೋರಾಟದ ಸಿದ್ಧಾಂತವನ್ನು ಗಾಳಿಗೆ ತೂರಿ ವರ್ಗಶತ್ರುಗಳಿಗೆ ಶರಣಾಗತರಾಗತೊಡಗಿದಾಗ, ಸಂಘಟನೆಯ ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆಯ ನೀತಿಯನ್ನು ಕೈಬಿಟ್ಟಾಗ, ಸಮರಶೀಲ ಹೋರಾಟಗಳಿಗೆ ತಡೆಗೋಡೆಯಂತೆ ನಿಂತಾಗ, ಕಾರ್ಮಿಕ ವರ್ಗದ ಹಿತರಕ್ಷಣೆ ಮಾಡಲು ಒಂದು ಪ್ರತ್ಯೇಕ ಸಂಘಟನೆ ಕಟ್ಟುವುದು ಅನಿವಾರ್ಯವಾಯಿತು. ಕಳೆದ 33 ವರ್ಷಗಳ ಚರಿತ್ರೆಯು ಸಿಐಟಿಯುವಿನ ನಿಲುಮೆಯನ್ನು

ಸಮರ್ಥಿಸಿದೆ. ಪ್ರಥಮ ಸಮ್ಮೇಳನದ ವೇಳೆಗೆ 8 ಲಕ್ಷದಷ್ಟಿದ್ದ ಸಿಐಟಿಯು ಸದಸ್ಯತ್ವವು ಈಗ 40 ಲಕ್ಷಗಳನ್ನು ದಾಟಿದೆ.

1973 ರಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರ ಸರಕಾರವು ಕಾರ್ಮಿಕ ವರ್ಗದ ಮೇಲೆ ವೇತನಸ್ಥಂಭನದ ನೀತಿಯನ್ನು ಹೇರಿತು.

ಅದರ ವಿರುದ್ಧ ದೇಶವ್ಯಾಪಿ ಐಕ್ಯ ಹೋರಟಗಳನ್ನು ನಡೆಸುವುದರಲ್ಲಿ ಸಿಐಟಿಯು ಪ್ರಧಾನ ಪಾತ್ರ ವಹಿಸಿತು. ಎಐಟಿಯುಸಿಯು ಕೇಂದ್ರ ಕಾರ್ಮಿಕ ಸಚಿವ ಆರ್.ಕೆ.ಖಾಡಿಲ್ಕರರ ಸಹಾಯದೊಂದಿಗೆ ಇಂಟಕ್ ಮತ್ತು ಎಚ್.ಎಂ.ಎಸ್‌ನ ಜತೆಗೆ ಸೇರಿ ನ್ಯಾಶನಲ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್ಸ್ ಎಂಬ ವೇದಿಕೆ ರಚಿಸಿ, ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಕಾರ್ಮಿಕ ವರ್ಗ ಹೋರಾಡದಂತೆ ತಡೆಯಲು ಪ್ರಯತ್ನಿಸಿದಾಗ, ಇತರ ಕಾರ್ಮಿಕ ಸಂಘಟನೆಗಳಾದ ಹೆಚ್.ಎಂ.ಪಿ, ಯುಟಿಯುಸಿ, ಟಿಯುಸಿಸಿ, ಎಐಐಇಎ, ಎನ್‌ಎಫ್‌ಪಿಟಿಇ ಮೊದಲಾದವುಗಳನ್ನು ಒಟ್ಟಿಗೆ ತಂದು ಯುನೈಟೆಡ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್ಸ್ ರಚಿಸಿ ಐಕ್ಯ ಹೋರಾಟಗಳನ್ನು ನಡೆಸುವುದರಲ್ಲಿ ಸಿಐಟಿಯು ಪ್ರಮುಖ ಪಾತ್ರವಹಿಸಿತು.

ದೇಶದ ಸುಮಾರು 20 ಲಕ್ಷ ರೈಲ್ವೆ ನೌಕರರು 20 ದಿನಗಳವರೆಗೆ ನಡೆಸಿದ 1974ರ ಚಾರಿತ್ರಿಕ ರೈಲ್ವೇ ಮುಷ್ಕರವು ರೈಲ್ವೇ ವ್ಯವಸ್ಥೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಿತ್ತು. ಇಂದಿರಾ ಸರಕಾರದ ರೈಲ್ವೇ ಪೊಲೀಸರು ರೈಲ್ವೇ ಕಾರ್ಮಿಕರ ಕ್ವಾರ್ಟರ್ಸ್‌ಗಳಿಗೆ ನುಗ್ಗಿ ಹೆಂಗಸರನ್ನೂ ಮಕ್ಕಳನ್ನೂ ಅಮಾನುಷವಾಗಿ ಹೊಡೆದು, ಕ್ರೌರ್ಯದ ಒಂದು ದಾಖಲೆಯನ್ನೇ ನಿರ್ಮಿಸಿದರು. ಇಷ್ಟಾದರೂ ಧೃತಿಗೆಡದೆ ರೈಲ್ವೆ ಕಾರ್ಮಿಕರು ಮುಷ್ಕರವನ್ನು ಮುಂದುವರಿಸುತ್ತಿದ್ದಾಗ, ಎಐಟಿಯುಸಿ ನಾಯಕ ಎಸ್.ಎ.ಡಾಂಗೆಯವರು, ರೈಲ್ವೇ ನೌಕರರು ಆಯಾ ಸ್ಥಳಗಳಲ್ಲಿ ಸಭೆ ಸೇರಿ ಮುಷ್ಕರ ಮುಂದುವರಿಸಬೇಕೇ ಬೇಡವೇ ಎಂದು ತೀರ್ಮಾನಿಸಬೇಕೆಂದು ಕರೆ ನೀಡಿದರು. ಈ ಅಪಾಯಕಾರಿ ಕರೆಯಿಂದಾಗಿ ಕಾರ್ಮಿಕರ ಸ್ಥೈರ್ಯ



ಕುಂದಿತು. ಒಂದೊಂದೇ ಪ್ರದೇಶದಲ್ಲಿ ಮುಷ್ಕರ ಹಿಂತೆಗೆಯಲ್ಪಟ್ಟು ಮುಷ್ಕರ ಪೂರ್ತಿಯಾಗಿ ಕುಸಿಯಿತು. 1975-77 ರ ತುರ್ತು ಪರಿಸ್ಥಿತಿಯ ಸಮಯದಲ್ಲಿ ಎಐಟಿಯುಸಿಯು ಆ ಸರ್ವಾಧಿಕಾರಿ ಆಡಳಿತಕ್ಕೆ ಬೆಂಬಲ ನೀಡಿ ಕಾರ್ಮಿಕ ವರ್ಗದ ಹಿತಾಸಕ್ತಿಗಳನ್ನು ಬಲಿಕೊಟ್ಟಿತು. ಕಾರ್ಮಿಕ ವರ್ಗಕ್ಕೆ ಬೋನಸ್ ನೀಡಲು ಸರಕಾರ ನಿರಾಕರಿಸಿದಾಗ, "ತುರ್ತುಪರಿಸ್ಥಿತಿಯ ಲಾಭಗಳು ಬೋನಸ್ ನಷ್ಟಕ್ಕಿಂತ ನೂರುಪಾಲು ದೊಡ್ಡದು" ಎಂದು ಎಐಟಿಯುಸಿಯ ಪರವಾಗಿ ಡಾಂಗೆ ಹೇಳಿದರು. ಎಐಟಿಯುಸಿಯ ಈ ಎಲ್ಲಾ ಕಾರ್ಮಿಕ ವಿರೋಧಿ ಚಟುವಟಿಕೆಗಳನ್ನು ವಿರೋಧಿಸಿ ಕಾರ್ಮಿಕ ವರ್ಗದ ಜತೆಗೆ ದೃಢವಾಗಿ ನಿಂತು ಹೋರಾಟಗಳನ್ನು ನಡೆಸುತ್ತಾ ಸಿಐಟಿಯು ಬೆಳೆಯಿತು.

ಸಿಐಟಿಯು ಸ್ಥಾಪನೆಯಾದ ಎರಡೇ ವರ್ಷಗಳಲ್ಲಿ ಅದರ ಪ್ರಬಲ ನೆಲೆಯಾದ ಪಶ್ಚಿಮ ಬಂಗಾಳದಲ್ಲಿ ಸಿದ್ಧಾರ್ಥ ಶಂಕರ ರೇ ನೇತೃತ್ವದ ಕಾಂಗ್ರೆಸ್ ಸರಕಾರವು ಕೇಂದ್ರದ ಇಂದಿರಾ ಗಾಂಧಿ ಸರಕಾರದ ಬೆಂಬಲದೊಂದಿಗೆ ಸಿಐಟಿಯು ಕಾರ್ಯಕರ್ತರ ಮೇಲೆ ಅರೆಫ್ಯಾಸಿಸ್ಟ್ ದಬ್ಬಾಳಿಕೆಗಳನ್ನು ನಡೆಸಿತು. ನೂರಾರು ಸಿಐಟಿಯು ಕಾರ್ಯಕರ್ತರನ್ನು ಬರ್ಬರವಾಗಿ ಹತ್ಯೆ ಮಾಡಲಾಯಿತು. ಸಾವಿರಾರು ಕಾರ್ಯಕರ್ತರ ಮನೆಗಳನ್ನು ಧ್ವಂಸ ಮಾಡಲಾಯಿತು. ಅನೇಕ ಕಾರ್ಯಕರ್ತರು ಇತರ ರಾಜ್ಯಗಳಲ್ಲಿ ಆಶ್ರಯ ಪಡೆದರು. ಸಿಐಟಿಯು ಮತ್ತು ಪಶ್ಚಿಮ ಬಂಗಾಳದ ಕಾರ್ಮಿಕ ವರ್ಗ ಈ ದಬ್ಬಾಳಿಕೆಯನ್ನು ರಾಜಕೀಯವಾಗಿ ಎದುರಿಸಿತು. 1977 ರಲ್ಲಿ ನಡೆದ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಸಿಐಟಿಯು ನೇತೃತ್ವದ ಕಾರ್ಮಿಕ ವರ್ಗವು ಎಡ ರಾಜಕೀಯ ಶಕ್ತಿಗಳ ನೇತೃತ್ವದಲ್ಲಿ ಸರ್ವಾಧಿಕಾರಿ ಶಕ್ತಿಗಳನ್ನು ರಾಜಕೀಯವಾಗಿ ಸೋಲಿಸಿ ಎಡರಂಗ ಸರಕಾರವನ್ನು ಅಧಿಕಾರಕ್ಕೆ ತರುವುದರಲ್ಲಿ ಮಹತ್ತರವಾದ ಪಾತ್ರವನ್ನು ವಹಿಸಿತು. ಸಿಐಟಿಯು ಅಖಿಲ ಭಾರತ ಉಪಾಧ್ಯಕ್ಷರಾದ ಕಾಮ್ರೇಡ್ ಜ್ಯೋತಿಬಸು ಮುಖ್ಯಮಂತ್ರಿಯಾದರು. ಕಳೆದ 26 ವರ್ಷಗಳಿಂದ ನಿರಂತರವಾಗಿ ಆಡಳಿತ ನಡೆಸುತ್ತಿರುವ ಎಡರಂಗವು ಪಶ್ಚಿಮ ಬಂಗಾಳದ ಕಾರ್ಮಿಕ ವರ್ಗದ ಹಿತರಕ್ಷಣೆಗಾಗಿ ದುಡಿಯುತ್ತಿದೆ. ದೇಶದ ಬಂಡವಾಳಶಾಹಿ-ಭೂಮಾಲಿಕ ಆಡಳಿತ ವ್ಯವಸ್ಥೆಯ ಸಂವಿಧಾನದ ಚೌಕಟ್ಟಿನ ಮಿತಿಯೊಳಗೆ ಇರುವ ಅವಕಾಶಗಳನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಂಡು ಎಡರಂಗ ಸರಕಾರವು ದುಡಿಯುವ

ಪುಟ 12 ಕ್ಕೆ

ದುಡಿವ ಜನರ ಅನಾರೋಗ್ಯ



ದುಡಿಯುವ ಜನರು ಎಲ್ಲರಂತೆಯೇ ಅನಾರೋಗ್ಯದಿಂದ ಬಳಲುತ್ತಾರೆ. ಆದರೆ ಅದರ ದುಡಿತಕ್ಕೆ ಸಂಬಂಧಿಸಿದ ಅನೇಕ ಕಾಯಿಲೆಗಳು ಅವರಿಗೆ ಮಾತ್ರ ವಿಶೇಷವಾಗಿರುತ್ತವೆ. ಅವುಗಳನ್ನು ಉದ್ಯೋಗಕ್ಕೆ ಸಂಬಂಧಿಸಿದ ರೋಗಗಳೆನ್ನಬಹುದು. ಲಈ ರೋಗಗಳ ಬಗ್ಗೆ ಈಗಾಗಲೇ ಸಾಕಷ್ಟು ಮಾಹಿತಿ ಇದೆ. ಈ ರೋಗಗಳನ್ನು ಹತೋಟಿಗೆ ತರಬಹುದಾಗಿದೆ. ಆದರೆ ಈ ರೋಗಗಳನ್ನು ಹತೋಟಿಗೆ ತರಲು, ಈ ರೋಗಗಳಿಂದ ಉಂಟಾದ ಅನಾರೋಗ್ಯವನ್ನು ಸರಿಪಡಿಸಲು, ಚಿಕಿತ್ಸೆ ಕೊಡಲು, ಸಾವು ಉಂಟಾದಲ್ಲಿ ಪರಿಹಾರ ಕೊಡಲು, ಮಾಲಿಕರು ಮುಂದೆ ಬರುತ್ತಾರೆಯೇ?

ಅನೇಕ ಉದ್ಯಮಗಳಲ್ಲಿ ಕಾರ್ಮಿಕರು ಉದ್ಯೋಗಕ್ಕೆ ಸಂಬಂಧಿಸಿದ ರೋಗಗಳಿಗೆ ತುತ್ತಾಗಿದ್ದಾರೆ. ಪುಪ್ಪುಸದ ರೋಗಗಳು ಹೆಚ್ಚಿನ ಪ್ರಾಮುಖ್ಯತೆ ಪಡೆಯುತ್ತಿವೆ. ಈ ರೋಗಗಳಿಗೆ ಕಲ್ಲಿದ್ದಲು ಗಣಿಯಲ್ಲಿ ಕೆಲಸ ಮಾಡುವವರು, ಕಟ್ಟಡ ನಿರ್ಮಾಣದಲ್ಲಿ ತೊಡಗಿರುವವರು ಮರದ ಕೆಲಸ ಮಾಡುವವರು, ಬೇಕರಿಗಳಲ್ಲಿ ಕೆಲಸ ಮಾಡುವವರು, ಕ್ಷೌರ ಮಾಡುವವರು, ಬೆಸುಗೆ ಕೆಲಸ ಮಾಡುವವರು (soldering) ಬೀಡಿ ಕಟ್ಟುವವರು ಪರೀಕ್ಷಾಲಯಗಳಲ್ಲಿ ಕೆಲಸ ಮಾಡುವವರು ಪಕ್ಷಿ ಸಾಕಣೆಯಲ್ಲಿ ತೊಡಗಿರುವವರು, ಔಷದಿ ತಯಾರಿಕೆಯಲ್ಲಿ ರುವವರು ನೇಯ್ಗೆ ಉದ್ಯಮದಲ್ಲಿ ಕೆಲಸ ಮಾಡುವವರು, ಅರಣ್ಯ ಹಾಗೂ ತೋಟಗಾರಿಕೆಯಲ್ಲಿ ದುಡಿಯುವವರು ಮುಂತಾದವುಗಳಲ್ಲಿಯ ಕಾರ್ಮಿಕರು ತುತ್ತಾಗುತ್ತಾರೆ. ಈ ಕೆಲಸಗಳಲ್ಲಿಯ ಅನೇಕ ಸೂಕ್ತ ಪದಾರ್ಥಗಳು (ಉದಾ ಸಿಲಿಕಾನ್) ಉಸಿರಾಟದ ಮೂಲಕ ನಮ್ಮ ಪುಪ್ಪುಸದೊಳಗೆ ಹೋಗಿ ರೋಗ ಉಂಟುಮಾಡುತ್ತವೆ. ಕೆಲಸ ಮಾಡುವಾಗ ಈ ತೊಂದರೆಗಳು ಕಂಡುಬಂದು, ವಿಶ್ರಾಂತಿಯಲ್ಲಿ ಸ್ವಲ್ಪ ಕಡಿಮೆಯಾದಂತೆ ತೋರುತ್ತಿವೆ. ಕಾರ್ಮಿಕನಿಗೆ ಮೊದಲೇ ಅಸ್ತಮಾ ಅಥವಾ ಉಸಿರಾಟದ ತೊಂದರೆ ಇದ್ದಲ್ಲಿ, ಅವನಿಗೆ ಕೆಲಸ ಮಾಡುವುದೇ ಕಷ್ಟವಾಗುತ್ತದೆ. ಈ ರೋಗ ಕೆಲಸ ಮಾಡಲು ತೊಂದರೆ ಮಾಡುವುದಲ್ಲದೆ, ಸಾವು ಉಂಟು ಮಾಡ

ಬಹುದು. ಅನೇಕ ವೇಳೆ ಕಾರ್ಮಿಕ ತನ್ನ ತೊಂದರೆಯನ್ನು ಗುರುತಿಸದೇ ಇದ್ದಲ್ಲಿ, ನಂತರದ ದಿನಗಳಲ್ಲಿ ಚಿಕಿತ್ಸೆಯೂ ಪರಿಣಾಮಕಾರಿಯಾಗದೇ ಇರಬಹುದು.

- ಪುಪ್ಪುಸದ ತೊಂದರೆ ಕಂಡುಹಿಡಿಯುವುದು ಹೇಗೆ?
- ಉಸಿರಾಟದ ತೊಂದರೆ ಇದೆಯೇ ನಿಮಗೆ?
- ಕಫ ಬರುತ್ತದೆಯೇ? ದುಸ್ತರ ಕೆಲಸ ಮಾಡಿದಾಗ ಉಸಿರಾಟದ ತೊಂದರೆ ಆಯಾಸ ಉಂಟಾಗುತ್ತದೆಯೇ?
- ಸತತವಾಗಿ ಕೆಮ್ಮು ಇದೆಯೇ?
- ನಿಮ್ಮ ಉಗುರಿನಲ್ಲಿ ಬದಲಾವಣೆ ಕಂಡುಬಂದಿದೆಯೆ?
- ಕೆಲಸ ಮಾಡುವ ಸಮಯದಲ್ಲಿ ನಿಮ್ಮ ತೊಂದರೆ ಹೆಚ್ಚಾಗಿರುತ್ತದೆಯೇ?
- ನೀವು ರಜೆಯಲ್ಲಿದ್ದಾಗ ತೊಂದರೆ ಕಡಿಮೆ ಇರುತ್ತದೆಯೇ?
- ನಿಮಗೆ ಕೆಲಸಕ್ಕೆ ಸೇರುವುದಕ್ಕಿಂತ ಮೊದಲೇ ಕೆಮ್ಮು ಕ್ಷಯ/ ಅಸ್ತಮಾ ರೋಗವಿತ್ತೆ?

ಈ ಪ್ರಶ್ನೆಗಳಲ್ಲಿ, ಒಂದು ಅಥವಾ ಹೆಚ್ಚು ಉತ್ತರ ಹೌದು ಎಂದು ಕಂಡು ಬಂದಲ್ಲಿ ಆ ವ್ಯಕ್ತಿಗೆ ಉದ್ಯೋಗಕ್ಕೆ ಸಂಬಂಧಿಸಿದ ಪುಪ್ಪುಸದ ರೋಗವಿದೆಯೆಂದು ಹೇಳಬಹುದಾಗಿದೆ.


ಈ ತೊಂದರೆ ಇದ್ದಲ್ಲಿ ಚಿಕಿತ್ಸೆಗಾಗಿ ನಿಮ್ಮ ಕುಟುಂಬ ವೈದ್ಯರನ್ನು ಸಂಪರ್ಕಿಸಿ, ಆ ರೋಗ ತಡೆಹಿಡಿಯಲು ಸಲಹೆ ಕೇಳಿ.

ಈ ಅಂಕಣದಲ್ಲಿ ಉದ್ಯೋಗಕ್ಕೆ ಸಂಬಂಧಿಸಿದ ಕಾಯಿಲೆ ಬಗ್ಗೆ ಚರ್ಚಿಸಲಾಗುವುದು. ತಮಗೆ ಈ ವಿಷಯದ ಬಗ್ಗೆ ಯಾವುದಾದರೂ ಮಾಹಿತಿ ಇದ್ದಲ್ಲಿ ಸಂಪರ್ಕಿಸಿ.

ಕರ್ನಾಟಕದಲ್ಲಿ ಕೈಗಾರಿ
ಕಾರ್ಮಿಕ ವರ್ಗದ
ಸವಾಲುಗ

ಕರ್ನಾಟಕದಲ್ಲಿ ಕೈಗಾರಿಕಾ ಅಭಿವೃದ್ಧಿ ಏನಾಗಿದೆ? ದಾಪುಗಾಲಿನ ಧಾವಂತದ ಬೆಳವಣಿಗೆ ಸಾಧಿಸಲಾಗುತ್ತಿದೆಯೆಂದು ಸರ್ಕಾರಗಳು ಅಬ್ಬರದ ಪ್ರಚಾರದಿಂದ ನಂಬಿಸಹೊರಟಿವೆ. ಈ ಹೈಟೆಕ್ ಆಡಳಿತವು ಭ್ರಮಾಧೀನತೆ ಬಿತ್ತುತ್ತಿವೆ. ಆದರೆ ರೈತರ ಆತ್ಮಹತ್ಯೆ, ಕೂಲಿಕಾರರ ಹಸಿವು-ಸಾವುಗಳು ಕೃಷಿ ಬಿಕ್ಕಟ್ಟಿನ ತೀವ್ರತೆಯನ್ನು ತೋರುತ್ತಿದ್ದರೆ ಮುಚ್ಚಿದ ಕೈಗಾರಿಕೆಗಳು - ಕೆಲಸ ಕಳೆದುಕೊಂಡ, ಕೆಲಸವೇ ಸಿಗದ ನಿರುದ್ಯೋಗಿಗಳ ದಂಡಿನ ದುರಂತಗಳು ನಿಜ ಸಂಗತಿಯನ್ನು ತೆರೆದಿಡುತ್ತಿವೆ. ಇಂತಹ ಸಂದರ್ಭದಲ್ಲಿ ಕೈಗಾರಿಕೆಯ ಸ್ಥಿತಿ ಮತ್ತು ಕಾರ್ಮಿಕವರ್ಗದ ಮುಂದಿನ ಸವಾಲುಗಳ ಕುರಿತಂತೆ ವಿಶ್ಲೇಷಿಸಿದ್ದಾರೆ ರಾಜ್ಯ ಸಿಐಟಿಯುವಿನ ಪ್ರಧಾನ ಕಾರ್ಯದರ್ಶಿ

ಕಾಂ. ವಿ.ಜೆ.ಕೆ.ನಾಯರ್



ಕರ್ನಾಟಕದ ಕೈಗಾರಿಕೀಕರಣಕ್ಕೆ 2-3 ಘಟ್ಟಗಳಿವೆ. ಪ್ರಥಮವಾಗಿ ಆಗಿನ ಮೈಸೂರು ಸಂಸ್ಥಾನ 20ನೇ ಶತಮಾನದಲ್ಲಿ ಕೈಗಾರಿಕೆಗೆ ಒತ್ತು ಕೊಟ್ಟು, ಬೃಹತ್ ಕೈಗಾರಿಕೆಗಳಾದ ಕೋಲಾರದ ಚಿನ್ನದ ಗಣಿ ಸ್ಥಾಪಿಸಿ 20 ಸಾವಿರ ಕಾರ್ಮಿಕರಿಗೆ ಉದ್ಯೋಗ ಒದಗಿಸಿತ್ತು. ಮೈಸೂರು ಸಿಮ್ಮಿಂಗ್ ಪೆರಾರಿಂಗ್, ಬಿನ್ನಿಮಿಲ್, ಭದ್ರಾವತಿಯಲ್ಲಿ ಉಕ್ಕು ಕಾರ್ಖಾನೆ, ಪೇಪರ್ ಮಿಲ್, ಗಂಧದ ಎಣ್ಣೆ ಕಾರ್ಖಾನೆಗಳನ್ನು ವಿಶ್ವೇಶ್ವರಯ್ಯನವರ ಕಾಲದಲ್ಲಿ ಸ್ಥಾಪಿಸಲಾಗಿತ್ತು. ಮೈಸೂರಿನ ಕೃಷ್ಣ ರಾಜೇಂದ್ರ ಮಿಲ್ (ಕೆ.ಆರ್.ಮಿಲ್) ಮತ್ತು ರೈಲ್ವೇ ವರ್ಕಶಾಪ್‌ಗಳು ಸ್ಥಾಪಿತಗೊಂಡವು.

ಉದ್ದಿಮೆಗಳು ಆರಂಭ

ಎರಡನೇಯ ಘಟ್ಟದಲ್ಲಿ ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ವಾಲ್‌ಚಂದ್-ಹಿರಚಂದಾರು ವಿಮಾನ ರಿಪೇರಿ ವರ್ಕ್‌ಶಾಪ್ ಸ್ಥಾಪಿಸಿದರು. 1941 ರಲ್ಲಿ ಹರಿಹರದಲ್ಲಿ ಮೈಸೂರು ಕಿರ್ಲೋಸ್ಕರ್, ದಾವಣಗೆರೆಯಲ್ಲಿ ಜವಳಿ ಕಾರ್ಖಾನೆಗಳು ಅಸ್ತಿತ್ವಕ್ಕೆ ಬಂದವು.

ಮೈಸೂರು ಸಂಸ್ಥಾನದ ಶಿಕ್ಷಣ ನೀತಿಯಿಂದಾಗಿ ಕಾರ್ಮಿಕರು ಮತ್ತು ಇಂಜನಿಯರಿಂಗ್ ತರಬೇತಿಗೆ ಒತ್ತು ನೀಡಿ ಕೃಷ್ಣ ರಾಜೇಂದ್ರ ಪಾಲಿಟೆಕ್ನಿಕ್, ವಿಶ್ವೇಶ್ವರಯ್ಯ ತಾಂತ್ರಿಕ ಕಾಲೇಜು ಸ್ಥಾಪಿಸಿ, ಜವಳಿ ತಾಂತ್ರಿಕತೆ ಜ್ಞಾನ, ಪ್ರಿಂಟಿಂಗ್, ಫಿಲಂ ರೇಕಾರ್ಡಿಂಗ್, ಸೌಂಡ್ ರೇಕಾರ್ಡಿಂಗ್ ನೀಡಿದ ಫಲವಾಗಿ ನುರಿತ ಕಾರ್ಮಿಕರು ಮತ್ತು ತಂತ್ರಜ್ಞರು ರೂಪುಗೊಂಡು ಉದ್ದಿಮೆಗಳು ಸ್ಥಾಪನೆಗೊಂಡು, ಮುಂದೆ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಉದ್ದಿಮೆಗಳು ತಳವೂರಲು ನಾಂದಿಯಾಯಿತು.

ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ಕೈಗಾರಿಕೆಗಳು ಬಂದ ನಂತರ ಹೆಚ್‌ಎಎಲ್ ವಿಮಾನ ನಿರ್ಮಾಣ, ರೈಲ್ವೇ ಕೋಚ್ ನಿರ್ಮಾಣ, ಬಸ್ ನಿರ್ಮಾಣ, ಏರ್ ಕ್ರಾಫ್ಟ್ ನಿರ್ಮಾಣ ಮುಂತಾದ ಘಟಕಗಳು ಕಾರ್ಯನಿರ್ವಹಿಸತೊಡಗಿದವು. ಇದರಲ್ಲಿ 20 ಸಾವಿರಕ್ಕೂ ಹೆಚ್ಚು ಕಾರ್ಮಿಕರು ಕೆಲಸ ನಿರ್ವಹಿಸಿ, ಇದು ಬೃಹತ್ ಉದ್ದಿಮೆಯಾಗಿ ರೂಪುಗೊಂಡಿತು. ಆಂತರಿಕ ಉತ್ಪಾದನೆಗಾಗಿ ಹೆಚ್‌ಎಂಟಿ ಸ್ಥಾಪನೆಯಾಯಿತು. ದೂರವಾಣಿ ಉತ್ಪಾದನೆಗಾಗಿ ಐಟಿಐ, ರಕ್ಷಣಾ ವಲಯದ ಉಪಯೋಗಕ್ಕಾಗಿ ಬಿಇಎಲ್ ಸ್ಥಾಪನೆಗೊಂಡವು. ಕೇಂದ್ರ ಸರ್ಕಾರದ ಈ ಬೃಹತ್ ಉದ್ದಿಮೆಗಳು ಬೆಂಗಳೂರು ನಗರವನ್ನು ಕೈಗಾರಿಕಾ ಕೇಂದ್ರವನ್ನಾಗಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದವು.

ಮುಂಬಯಿ -ಕರ್ನಾಟಕದ ದಾಂಡೇಲಿಯಲ್ಲಿ 1950 ರ ದಶಕದಲ್ಲಿ ಲಾಲ್‌ಬಾಯಿ ಕಂಪನಿ ಪ್ಲೈವುಡ್ ಮತ್ತು ವೆಸ್ಟ್‌ಕೋಸ್ಟ್ ಪೇಪರ್ ಮಿಲ್ ಸ್ಥಾಪಿತವಾದವು.

ಹುಬ್ಬಳ್ಳಿ ನಗರದಲ್ಲಿ ಮೈಸೂರು ಕಿರ್ಲೋಸ್ಕರ್ ಕಂಪನಿಯ ಎರಡು ಘಟಕಗಳು ಕಾರ್ಯ ಪ್ರಾರಂಭಿಸಿದವು. ಸುಂದರ ವುಡ್ಸ್ ಮತ್ತು ಪೈಬರ್ಸ್ ಮಹಾದೇಶ್ವರ ಜವಳಿ ಗಿರಣಿ. ಬೃಹತ್‌ದಾದ ರೈಲ್ವೇ ವರ್ಕಶಾಪ್ ಸ್ಥಾಪನೆಗೊಂಡವು. 1970 ರ ದಶಕದಲ್ಲಿ ಬೆಳಗಾಂವದಲ್ಲಿ ಇಂಡಿಯನ್ ಅಲುಮಿನಿಯಂ ಕಾರ್ಖಾನೆ ಪ್ರಾರಂಭವಾಯಿತು.

ಹೈದ್ರಾಬಾದ್ ಕರ್ನಾಟಕದಲ್ಲಿ ಹಟ್ಟಿ ಚಿನ್ನದ ಗಣಿ, ಗುಲ್ಬರ್ಗಾದಲ್ಲಿ ಮಹಬೂಬ್‌ಷಾಹಿ ಕಲ್ಬುರ್ಗಿ ಮಿಲ್ಸ್ (ಎಂಎಸ್‌ಕೆ), ಶಹಬಾದ್‌ನಲ್ಲಿ ಎಸಿಸಿ ಸಿಮೆಂಟ್ ಕಾರ್ಖಾನೆ ಮುಂತಾದ ಕಾರ್ಖಾನೆಗಳು ಸ್ಥಾಪನೆಯಾದವು.

ಮೇಲೆ ವಿವರಿಸಿದ ಘನ ಕೈಗಾರಿಕೆಗಳ ಬಿಡಿ ಭಾಗಗಳನ್ನು ಉತ್ಪಾದಿಸುವ ಸಣ್ಣಸಣ್ಣ ಘಟಕಗಳು ಪ್ರಾರಂಭವಾಗಿ ಹಂತಹಂತವಾಗಿ ಕೈಗಾರಿಕಾ ಅಭಿವೃದ್ಧಿ, ಸಹಕಾರಿಯಾಗಿ ಮಧ್ಯಮ ಕೈಗಾರಿಕೆಗಳು ವಿಸ್ತೃತಗೊಂಡ ಬೆಳಯಲಾರಂಭಿಸಿದವು.

1970 ರ ದಶಕದಲ್ಲಿ ದೇಶದ ಬೇರೆ ಕಡೆಗಳಿಂದ ವಲಸೆ ಬಂದ ಬಹಳಷ್ಟು ಕೈಗಾರಿಕೆಗಳು ಬೆಂಗಳೂರು ನಗರದ ಪೂರ್ವದ ವೈಟ್ ಫೀಲ್ಡ್ ಪ್ರದೇಶದಲ್ಲಿ ಸ್ಥಾಪಿತವಾದವು. ಈ ಎಲ್ಲಾ ಕೈಗಾರಿಕೆಗಳ ಒಟ್ಟಾರೆ ಅಭಿವೃದ್ಧಿ ಕರ್ನಾಟಕ ಕೈಗಾರಿಕಾ ರಂಗದಲ್ಲಿ ಒಂದು ಪ್ರಮುಖ ಮೈಲುಗಲ್ಲಾಯಿತು.

ಸಂರಕ್ಷಣಾ ವಲಯ ಮತ್ತು ಅದರ ಅಭಿವೃದ್ಧಿ ಯೋಜನೆಗಳ ಅವಕಾಶಕ್ಕಾಗಿ ಸ್ಥಾಪಿತವಾದ ಕೇಂದ್ರ ಸರ್ಕಾರದ ಒಡೆತನದ ಹಲವಾರು ಸಂಶೋಧನಾ ಕೇಂದ್ರಗಳು ಬೆಂಗಳೂರು ನಗರದಲ್ಲಿ ಸ್ಥಾಪಿತವಾದವು. ಸ್ವತಂತ್ರಪೂರ್ವದಲ್ಲಿ ಸ್ಥಾಪಿತವಾದ ಟಾಟಾ ಇನ್‌ಟ್ಯೂಟ್ ಆಫ್ ಸೈನ್ಸ್ (ಭಾರತೀಯ ವಿಜ್ಞಾನ ಮಂದಿರ) ಅಲ್ಲದೆ ಸೆಂಟ್ರಲ್ ಮಿಷನ್ ಟೂಲ್ಸ್, ಸನರಲ್ ಪ್ಲೈವುಡ್ ಇನ್‌ಸ್ಟ್ಯೂಟ್, ಏರೋನಾಟಿಕ್ ಡೆವಲಪ್‌ಮೆಂಟ್ ಇತ್ಯಾದಿ ಸಂಸ್ಥೆಗಳು, 1970 ದಶಕದಲ್ಲಿ ಸ್ಥಾಪಿತವಾದವು. ಒಟ್ಟು ರಕ್ಷಣ ವಲಯದ ಸಂಸ್ಥೆಗಳನ್ನು ಒಟ್ಟುಗೂಡಿಸಿ ರಿಸರ್ಚ್ ಲ್ಯಾಬೊರೇಟರಿ ಸ್ಥಾಪಿತಗೊಂಡಿದೆ.

50 ದಶಕದಿಂದ ನಡೆಸುತ್ತಾ ಬಂದಿರುವ ವಿವಿಧ ಕೈಗಾರಿಕಾ ತರಬೇತಿ ಕೇಂದ್ರಗಳು ಬೆಳದವಲ್ಲದೆ. 1980 ರ ದಶಕದಲ್ಲಿ ಹಲವಾರು ಇಂಜಿನಿಯರಿಂಗ್ ಕಾಲೇಜುಗಳು, ವೈದ್ಯಕೀಯ ಕಾಲೇಜುಗಳು ಮುಂತಾದ ತಂತ್ರಜ್ಞಾನ ಅಭ್ಯಾಸಿಸುವವರ ಸಂಖ್ಯೆ ಬಹಳಷ್ಟು ವಿಸ್ತಾರಗೊಂಡಿತು. 1980 ರಿಂದ ಗಣಕೀಕರಣ(ಕಂಪ್ಯೂಟರ್) ತಂತ್ರಜ್ಞಾನದ ಅಭಿವೃದ್ಧಿ ಬೆಂಗಳೂರಿನಲ್ಲಿ ಪ್ರಾರಂಭವಾಯಿತು.

ಹೀಗಾಗಿ ಕೇಂದ್ರ ಒಡೆತನದ ಸಾರ್ವಜನಿಕ ಉದ್ದಿಮೆ ಮತ್ತು ಅವನ್ನು ಅವಲಂಬಿಸಿದ ಸಣ್ಣ ಉದ್ದಿಮೆ, ಅದರಿಂದ ಅಭಿವೃದ್ಧಿಗೊಂಡ ಮಧ್ಯಮ ಕೈಗಾರಿಕೆಗಳು, ಬೇರೆ ರಾಜ್ಯದಿಂದ ವಲಸೆ ಬಂದ ಕೈಗಾರಿಕೆಗಳು, ರಕ್ಷಣಾ ವಲಯಕ್ಕಾಗಿ ವಿಶೇಷವಾಗಿ ನಡೆಯುತ್ತಿದ್ದ ಸಂಸ್ಥೆಗಳು, ಅದರ ಮೂಲಕ ಎಲೆಕ್ಟ್ರಾನಿಕ್ಸ್, ಗಣಕೀಕರಣ ಮುಂತಾದ ಆಧುನಿಕ ತಂತ್ರಜ್ಞಾನಕ್ಕೆ ಅನುವು ಮಾಡಿಕೊಡುವ ಕೈಗಾರಿಕೆಗಳು ಬಹಳ ಬೆಳೆದಿತ್ತು.

ಈ ಕೈಗಾರೀಕರಣದ ಆಧಾರದಲ್ಲಿ ಮೊದಲೇ ರಾಜಧಾನಿಯಾಗಿದ್ದ ಬೆಂಗಳೂರು ನಗರ, ಕೆಂಪೇಗೌಡರು ಹಾಕಿದಂತಹ ಮಿತಿದಾಟಿ 10 ಪಟ್ಟು ವಿಶಾಲವಾಗಿ ಬೆಳೆದು ನಿಂತಿದೆ. ಯಶವಂತಪುರ, ಪೀಣ್ಯಾ ಕೈಗಾರಿಕಾ ಪ್ರದೇಶ ಇಂದು ನೆಲಮಂಗಲದವರೆಗೆ ಬೆಳೆದು ತುಮಕೂರಿಗೂ ವ್ಯಾಪಿಸಿದೆ. ಬಳ್ಳಾರಿ ರಸ್ತೆಯಲ್ಲಿ ಹಲವಾರು ಘಟಕಗಳು ಸ್ಥಾಪಿತವಾಗಿ, ದೊಡ್ಡಬಳ್ಳಾಪುರ ಹಾಗೂ ಚಿಕ್ಕಬಳ್ಳಾಪುರದ ಕಡೆಯೂ ಅಭಿವೃದ್ಧಿ ಹೊಂದಿದೆ. ಮುಂದುವರೆದು ಹೆಣ್ಣೂರು ರಸ್ತೆ, ಹಳೇ ಮದ್ರಾಸ್ ರಸ್ತೆಯಲ್ಲಿ ಹೊಸಕೋಟೆಯವರೆಗೂ ವಿಸ್ತರಿಸಿದೆ. ವೈಟ್ ಫೀಲ್ಡ್ ಪ್ರದೇಶದಿಂದ ಈಗ ಹೊಸೂರು ರಸ್ತೆಯ ಎಲೆಕ್ಟ್ರಾನಿಕ್ ಸಿಟಿಯಲ್ಲಿ ಇನ್‌ಫರ್‌ಮೇಷನ್ ಟೆಕ್ನಾಲಜಿ ಪಾರ್ಕ್(ಮಾಹಿತಿ ತಂತ್ರಜ್ಞಾನ ಕೇಂದ್ರ), ಆಡುಗೋಡಿಯ ಮೈಕೊ ಕಾರ್ಖಾನೆಯಿಂದ ಆರಂಭಗೊಂಡು ಕರ್ನಾಟಕದ ದಕ್ಷಿಣದ ಗಡಿ ದಾಟಿ ತಮಿಳುನಾಡಿನ ಹೊಸೂರುವರೆಗೂ ವಿಸ್ತಾರಗೊಂಡಿದೆ. ಡೈರಿ ವೃತ್ತದಿಂದ ಬನ್ನೇರುಘಟ್ಟ ಮಾರ್ಗವಾಗಿ ಜಯನಗರ ದಾಟಿ ಸಾರಕ್ಕಿ ಮಾರ್ಗವಾಗಿ ಕನಕಪುರ ರಸ್ತೆವರೆಗೂ, ಬಲಕ್ಕೆಮೈಸೂರು ರಸ್ತೆಯಲ್ಲಿ ಹೆಜ್ಜಾಲದವರೆಗೂ, ಪಶ್ಚಿಮಕ್ಕೆ ಮಾಗಡಿ, ರಾಜಾಜಿನಗರ ಕೈಗಾರಿಕಾ ಪ್ರದೇಶಗಳನ್ನು ಒಳಗೊಂಡು ಸಾವಿರಾರು ಕಾರ್ಖಾನೆಗಳು ಬೆಳೆದು ಬಂದಿರುವುದಲ್ಲದೆ, ಈ ವಿಸ್ತೃತವಾದ ಪ್ರದೇಶದಲ್ಲೆಲ್ಲಾ ಕೈಗಾರಿಕೆಗಳ ಸೇವೆ ಸಲ್ಲಿಸುವ ಬಹಳಷ್ಟು ಘಟಕಗಳು, ವ್ಯಾಪಾರ ಸಂಸ್ಥೆಗಳು, ಕಾರ್ಮಿಕರು ವಾಸಿಸುವ ಬಡಾವಣೆಗಳು ಅವರ ಅವಶ್ಯಕತೆ ಪೂರೈಸುವ ವಿದ್ಯಾಸಂಸ್ಥೆಗಳು, ಚಿಕಿತ್ಸಾಕೇಂದ್ರಗಳು ತಲೆ ಎತ್ತಿವೆ. ಹೀಗಾಗಿ ಬೆಂಗಳೂರು ನಗರ ವಿಸ್ತೃತವಾಗಿ ರೂಪುಗೊಳ್ಳಲು ಕೈಗಾರೀಕರಣ ಮುಖ್ಯಪಾತ್ರವಹಿಸಿತು.

ಬೆಂಗಳೂರುನಗರದ ಮಧ್ಯಭಾಗದಲ್ಲಿ ವಿದ್ಯುತ್ ಮಗ್ಗಳು, ಅಗರಬತ್ತಿ, ಬೀಡಿ, ಸಿದ್ಧ ಉಡುಪು ಘಟಕಗಳು ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳು, ವಿದ್ಯಾಸಂಸ್ಥೆಗಳು, ನರ್ಸಿಂಗ್‌ಹೋಂ, ಸಾರಿಗೆ, ವಿದ್ಯುತ್, ತೈಲ ಮತ್ತಿತರ ಘಟಕಗಳು ನಡೆಯುತ್ತಿವೆ.

ಕೈಗಾರಿಕೆಗಳಿಗೆ ಪೆಟ್ಟು ನೀಡಿದ ಆರ್ಥಿಕ ನೀತಿ

1991 ರಲ್ಲಿ ಪ್ರಾರಂಭವಾದ ಉದಾರೀಕರಣ ನೀತಿ ಈ ಕೈಗಾರಿಕೆಗಳಿಗೆ ಒಂದೆಡೆ ದೊಡ್ಡ ಹೊಡೆತ ಕೊಟ್ಟಿರುವಾಗಲೇ, ಇನ್ನೂ ಕೆಲವು ಉದ್ದಿಮೆಗಳಿಗೆ ಪ್ರೋತ್ಸಾಹ ನೀಡುತ್ತಿದೆ. ಸಾರ್ವಜನಿಕ ಕ್ಷೇತ್ರದಲ್ಲಿ ಒಟ್ಟಾರೆಯಾಗಿ 1.25 ಲಕ್ಷ ಕಾರ್ಮಿಕರು ದುಡಿಯುತ್ತಿದ್ದು ಈಗ 50 ಸಾವಿರಕ್ಕೆ ಇಳಿದಿದೆ. ಇತರ ಕಾರ್ಮಿಕರನ್ನು ಸ್ವಯಂ ನಿವೃತ್ತಿ




ದುಡಿವ ವರ್ಗದ ಐಕ್ಯ ಚಳುವಳಿಯೊಂದೇ - ಸಿಐಟಿಯು

ಯೋಜನೆಯಡಿ ಹೊರ ನೂಕಲಾಗಿದೆ. ಹೆಚ್.ಎ.ಎಲ್. ಮಾತ್ರ ಲಾಭದಾಯಕಾಗಿ ನಡೆಯುತ್ತಿದ್ದು, ಕಾರ್ಮಿಕರ ನೇಮಕಾತಿ ಮಾಡಿಕೊಳ್ಳುತ್ತಿದೆ. ಬಿಇಎಲ್ ಕಾರ್ಖಾನೆಯಲ್ಲಿ ಹಿಂದೆ 15 ಸಾವಿರ ಕಾರ್ಮಿಕರು ದುಡಿಯುತ್ತಿದ್ದು ಈಗ 5 ಸಾವಿರ ಖಾಯಂ ಕಾರ್ಮಿಕರು ಮತ್ತು 5 ಸಾವಿರ ಹಂಗಾಮಿ ಕಾರ್ಮಿಕರು ದುಡಿಯುತ್ತಿದ್ದಾರೆ. ಬಿಡಿ ಭಾಗಗಳನ್ನು ಸಣ್ಣ ಸಣ್ಣ ಕೈಗಾರಿಕೆಗಳಲ್ಲಿ ಮಾಡಿಸುವ ಬಿಇಎಲ್ ತನ್ನ ಉತ್ಪಾದನಾ ವ್ಯಾಪ್ತಿಯನ್ನು ಕಡಿತಗೊಳಿಸದೆ ಲಾಭದಲ್ಲಿದೆ.

ಭಾರತಕ್ಕೆ ಮಾದರಿಯಾದ ಹೆಚ್‌ಎಂಟಿ ಇಂದು ದುಸ್ಥಿತಿಯಲ್ಲಿದೆ ಮತ್ತು ಖಾಸಗೀಕರಣಕ್ಕೆ ಅನುವಾಗುವ ಹಲವು ಹೆಜ್ಜೆಗಳನ್ನು ಕಾಣಬಹುದಾಗಿದೆ. ಹೆಚ್‌ಎಂಟಿ ಗಡಿಯಾರದ ಘಟಕ ಇಂದು ನೆಪಮಾತ್ರಕ್ಕೆ ನಡೆಯುತ್ತಿದೆ. ಅದರ ವಿಶಾಲವಾದ ಕಾರ್ಮಿಕ ಬಡಾವಣೆಗಳಲ್ಲಿ ಕಾರ್ಮಿಕರಿಲ್ಲದೆ ಬೇರೆಯವರಿಗೆ ವಸತಿಗಳನ್ನು ನೀಡಲಾಗಿದೆ. ಏಷ್ಯಾ ಖಂಡದಲ್ಲೇ ದೊಡ್ಡದಾದ ಐಟಿಐ ಶೋಚನೀಯ ಸ್ಥಿತಿಯಲ್ಲಿದೆ. ಕೋಲಾರದ ಬಿಇಎಂಎಲ್ ಸದ್ಯ ತೊಂದರೆಯಿಲ್ಲದೆ ನಡೆಯುತ್ತಿದೆ. ಕೋಲಾರದ ಚಿನ್ನದ ಗಣಿ ಸಂಪೂರ್ಣವಾಗಿ ಮುಚ್ಚಿದೆ.

ಹರಿಹರದ ಮೈಸೂರು ಕಿರ್ಲೋಸ್ಕರ್ ಕಾರ್ಖಾನೆ, ಎನ್‌ಜಿಇಎಫ್, ಮೈಸೂರು ಲ್ಯಾಂಪ್ಸ್ ಮುಂತಾದ ಕಾರ್ಖಾನೆಗಳು ಮುಚ್ಚಲ್ಪಟ್ಟಿವೆ. ಎಲ್ಲಕ್ಕಿಂತ ಮುಖ್ಯವಾಗಿ ಸಂಘಟಿತವಾದ ಜವಳಿ ಘಟಕಗಳು ಮುಚ್ಚಲ್ಪಟ್ಟಿವೆ. ಕರ್ನಾಟಕದಲ್ಲಿ ಶೇ. 40 ರಷ್ಟಿರುವ ಬಟ್ಟೆ ಉತ್ಪಾದನೆ ಇಂದು ಗುಡಿ ಕೈಗಾರಿಕಾ ಉತ್ಪಾದನೆಗಿಳಿದಿದೆ. 1978 ರಲ್ಲಿ ರಾಜ್ಯದಲ್ಲಿ 39 ಜವಳಿ ಕಾರ್ಖಾನೆಗಳಿದ್ದರೆ ಇಂದು ಬೆಳಗಾಂವ ಜಿಲ್ಲೆಯ ಗೋಕಾಕ್‌ನಲ್ಲಿರುವ ಜವಳಿ ಕಾರ್ಖಾನೆ ಮಾತ್ರ ನಡೆಯುತ್ತಿದೆ. ಜವಳಿ ನಗರವೆಂದು ಖ್ಯಾತಿ ಹೊಂದಿದ ದಾವಣಗೆರೆಯಲ್ಲಿ ಒಂದೇ ಒಂದು ಜವಳಿ ಕಾರ್ಖಾನೆ ಇಲ್ಲವಾಗಿದೆ. ಇಡೀ ನಗರ ಇಂದು ವಿದ್ಯಾಸಂಸ್ಥೆ ಮತ್ತು ವ್ಯಾಪಾರವನ್ನು ಮಾತ್ರ ಅವಲಂಬಿಸಿದೆ. ಶಹಬಾದಿನ ಬೃಹತ್ ಸಿಮೆಂಟ್ ಕಾರ್ಖಾನೆ



ಭದ್ರಾವತಿ ಕಾಗದ ಕಾರ್ಖಾನೆ

ಟ್ಟಿದೆ. 3 ಸಾವಿರ ಕಾರ್ಮಿಕರು ಕೆಲಸ
ದ್ದ ಎಬಿಎಲ್ ಸಿಮೆಂಟ್ ಕಾರ್ಖಾನೆಯಲ್ಲಿ
00 ಕಾರ್ಮಿಕರು ಮಾತ್ರ ಇದ್ದಾರೆ. ಅದು
ಕಂಪನಿ ಒಡೆತನಕ್ಕೆ ಸೇರಿದೆ.
ಲ್ಬರ್ಗಾ ಜಿಲ್ಲೆಯಲ್ಲಿ ಸುಣ್ಣದ ಕಲ್ಲಿನ
ಲ್ಲಿ ಬೆಳೆದ ಬೃಹತ್ ಸಿಮೆಂಟ್ ಕೈಗಾರಿಕೆ
ೀಡ, ವಾಸವದತ್ತ, ವೀಡಿಯ, ಎಸಿಸಿ
ದವುಗಳು ನಡೆಯುತ್ತಿರುವಾಗ ಕೇಂದ್ರ
ದ ಒಡೆತನದಲ್ಲಿರುವ ಕಂದಕುಂಡ
ಬಂದ್ ಆಗಿದೆ. ಅದೇ ಜಿಲ್ಲೆಯಲ್ಲಿ

…ತಿ ಮತ್ತು …ರುವ



ರು ಸಣ್ಣ ಸಿಮೆಂಟ್ ಕಾರ್ಖಾನೆಗಳು ಬಂದ್
ವುದನ್ನು ಕಾಣಬಹುದಾಗಿದೆ.
ಬ್ಬಳ್ಳಿ ನಗರದಲ್ಲಿ ಒಂದೇ ಒಂದು ದೊಡ್ಡ
ನೆ ನಡೆಯುತ್ತಿಲ್ಲ. ಧಾರವಾಡದಲ್ಲಿ ಮಾತ್ರ
ದಾಗಿ ಟೆಲ್ಕೊದ ಒಂದು ಘಟಕ
ಭವಾಗಿದೆ.
ಂಗಳೂರು ನಗರದ ಹಾದಿ ತುಳಿದು
ೂರು ನಗರವು ವಿಸ್ತೃತವಾಗಿ
ತೊಡಗಿದೆ. ನಂಜನಗೂಡು ಕೈಗಾರಿಕಾ
ವಾಗಿದೆ. ಮೈಸೂರು ನಗರದ ವಿಕ್ರಾಂತ್
. ಇರುವ ಮೇಟಗಳ್ಳಿ ಪ್ರದೇಶ ಮುಂದು
ೆ. ಎಲವಾಳು ಪ್ರದೇಶ ಮುಂದುವರೆದಿದೆ.
ಇದೇ ನಗರದ ಬೃಹತ್ ಕೈಗಾರಿಕೆಗಳಾದ
ಲ್ ಜಾವಾ, ಕೆ.ಆರ್.ಮಿಲ್ ಹಾಗೂ
ಮಧ್ಯಮ ಕೈಗಾರಿಕೆಗಳು ಬಂದ್
ವುದನ್ನು ಕಾಣಬಹುದಾಗಿದೆ.
ಾರಿಕೀಕರಣದ ಸ್ವಾಭಾವಿಕ ಪ್ರಶ್ನೆಗಳ
ಾಗಿ ಜವಳಿ ಗಿರಣಿಗಳು ಬಂದ್
ವುದನ್ನು ಕಾಣಬಹುದಾಗಿದೆ. ಪಾರಂಪಿಕ
ಯಾದ ಟೈಲ್ಸ್ ಮುಂತಾದ ಕೈಗಾರಿಕೆಗಳು
ದಲ್ಲಿರುವುದನ್ನು ಕಾಣಬಹುದಾಗಿದೆ.
ದ 3 ಜಿಲ್ಲೆಗಳನ್ನೊಳಗೊಂಡ ಕಾಫಿ ಪ್ರದೇಶ
ಹೊಸ ಆರ್ಥಿಕ ನೀತಿಯಿಂದ ಬಹಳಷ್ಟು
ತೊಂದರೆಗೊಳಗಾಗಿರುವುದನ್ನು
ಹುದಾಗಿದೆ. ಹೀಗಾಗಿ ಪಾರಂಪರಿಕವಾದ
ನೆಗಳು ಒಂದೆಡೆ ಜವಳಿ ಕಾರ್ಖಾನೆಗಳು
ದೆಡೆ ಪಂಚವಾರ್ಷಿಕ ಯೋಜನೆಯಲ್ಲಿ
ಬಂದ ಇಂಜಿನಿಯರಿಂಗ್ ಕೈಗಾರಿಕೆಗಳು
ಕ ತಂತ್ರಜ್ಞಾನವನ್ನು ಸರಿಯಾಗಿ
ಿಕೊಳ್ಳದ ಕೈಗಾರಿಕೆಗಳು, ಸಹಕಾರಿ ಕ್ಷೇತ್ರದ
ಾಸಗಿ ರಂಗದಲ್ಲಿ ಪ್ರಾರಂಭವಾದ ಸಕ್ಕರೆ
ನೆ ಮತ್ತು ನೂಲಿನ ಗಿರಣಿಗಳು ಒಟ್ಟಾರೆ
ಗ್ರಸ್ತವಾಗಿರುವುದು ಕಂಡು ಬರುತ್ತಿದೆ. ಈ
ರಣದಿಂದ ಕರ್ನಾಟಕ ರಾಜ್ಯದ ಕೈಗಾರಿಕಾ
ಭಿವೃದ್ಧಿಗೊಳ್ಳುತ್ತಿದೆ ಎಂದು ಹೇಳುವುದು
ದೊಡ್ಡ ಕೈಗಾರಿಕಾ ತಳಹದಿಯನ್ನು


ಉಳಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಮಾಹಿತಿ ತಂತ್ರಜ್ಞಾನ, ಕೇವಲ ಅಪೂರ್ವ ತಂತ್ರಜ್ಞಾನದ ಕೈಗಾರಿಕೆಗಳು ಉಳಿದು ಬೆಳೆದಿರುವುದನ್ನು ಕಾಣಬಹುದಾಗಿದೆ.

ಕಾರ್ಮಿಕರ ಪಾತ್ರ

ಒಟ್ಟಾರೆ ಬೃಹತ್ ಕೈಗಾರಿಕೆಗಳಲ್ಲಿ ದುಡಿಯುವ ಕಾರ್ಮಿಕರ ಸಂಖ್ಯೆ ಕಡಿಮೆಯಾಗಿರುವುದು ಕಾರ್ಮಿಕ ಸಂಘಗಳು, ಅವರ ನಾಯಕರ ಮೇಲೆ ಒತ್ತಡ ತರುತ್ತಿರುವುದು ಇಂದಿನ ಮುಖ್ಯ ಬೆಳವಣಿಗೆಯಾಗಿದೆ. **ಸಂಘಟಿತ ಕೇಂದ್ರದಿಂದ ಅಸಂಘಟಿತ ಕ್ಷೇತ್ರಕ್ಕೆ ಮಾರ್ಪಾಡಾಗುವುದು ಒಂದೆಡೆಯಾದರೆ ಅಸಂಖ್ಯಾತ ಕಾರ್ಖಾನೆಗಳು ರೋಗಗ್ರಸ್ತವಾಗಿರುವುದು ಇಲ್ಲವೇ ಮುಚ್ಚಿರುವುದು ಕಂಡುಬರುತ್ತಿದೆ.** ಸರ್ಕಾರದ ವಿದ್ಯುತ್ ನೀತಿಯು ಸಣ್ಣ ಘಟಕಗಳನ್ನು ರೋಗಗ್ರಸ್ತಗೊಳಿಸಿದೆ. ಬೃಹತ್ ಕೈಗಾರಿಕೆಗಳು ಸರ್ಕಾರಿ ಕ್ಷೇತ್ರದ ವಿದ್ಯುತ್ ಖರೀದಿಸುವ ಬದಲು ತಮ್ಮದೇ ಉತ್ಪಾದನಾ ಶಕ್ತಿ ಬಳಸಿ ಸರ್ಕಾರಿ ವಲಯದ ವಿದ್ಯುತ್ ಕಂಪನಿಗಳಿಗೆ ವಿದ್ಯುತ್ ಒದಗಿಸುವ ವ್ಯವಸ್ಥೆ ಮಾಡಿಕೊಂಡಿವೆ.

ಕೈಗಾರಿಕಾ ನೀತಿಯ ಕುರಿತು

ಕಾರ್ಮಿಕ ವರ್ಗ ಹಿಡಿಯಾಗಿ ಮಧ್ಯಪ್ರವೇಶ ಮಾಡುವುದು ಸೂಕ್ತವಾದ ಕ್ರಮ ಆಗಿದೆ. **ಕೈಗಾರಿಕಾ ನೀತಿಗಳಲ್ಲಿ ಆದ ದೋಷದಿಂದ ನಿರುದ್ಯೋಗ ಬೃಹತ್ ಆಗಿ ಬೆಳೆದಿದೆ. ಇದರಿಂದ ನಿರುದ್ಯೋಗಿಗಳು ಉದ್ಯೋಗ ಕಳೆದುಕೊಂಡವರು ಜಂಟಿ ಚಳುವಳಿ ರೂಪುಗೊಳ್ಳಬೇಕಾಗಿದೆ.** ಯಾವು ಕ್ಷೇತ್ರದ ಕಾರ್ಮಿಕರಾದರೂ ಜೀವನಾವಶ್ಯಕ ವೇತನ, ಗೌರವಾನ್ವಿತ ಕೆಲಸದ ವಿಧಾನ, ಸಾಮಾಜಿಕ ಭದ್ರತೆ ಇವುಗಳನ್ನು ಒದಗಿಸಬೇಕೆಂದು ಎಲ್ಲಾ ಕಾರ್ಮಿಕರು ಒಳಗೊಂಡ ಚಳುವಳಿಯನ್ನು ರೂಪಿಸಬೇಕಿದೆ.



ಬೆವರು ರಕ್ತ ಬಸಿದು ಕಟ್ಟಿದ ಕಾರ್ಖಾನೆಗಳೀಗ ಮೂರು ಕಾಸಿಗೆ ಕಿತ್ತೆಸೆಯುವ ನಿರ್ಧಾರ


ಸರ್ಕಾರದ ಪಲಾಯನ ಸೂತ್ರ

ಸರ್ಕಾರ ತನ್ನ ಕರ್ತವ್ಯ ನಿರ್ವಹಣೆಯಿಂದ ಪಲಾಯನಗೊಂಡು ಗುತ್ತಿಗೆ ಆಧಾರದಲ್ಲಿ ಮುನ್ಸಿಪಲ್ ಇತರೆ ವ್ಯವಸ್ಥೆ ಮಾಡತೊಡಗಿದೆ. ಹೀಗಾಗಿ ತೆರಿಗೆ ಸೂಲು ಮಾಡುವುದು, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ, ಶಿಕ್ಷಣ, ಆರೋಗ್ಯ, ಸಾರಿಗೆ ಮುಂತಾದ ಎಲ್ಲಾ ರಂಗಗಳಲ್ಲಿ ಗುತ್ತಿಗೆ ಕಾರ್ಮಿಕರನ್ನು ಅವಿರತವಾಗಿ ಬಳಸುತ್ತಿದೆ. ಇಂತಹ ಕಾರ್ಮಿಕರ ಜೀವನಶೈಲಿ ಬಹಳ ಶೋಚನೀಯವಾಗಿದೆ. ಇವರನ್ನು ಸಂಘಟಿಸುವ ಕೆಲಸವನ್ನು ಕೈಗೊಳ್ಳಬೇಕಾಗಿದೆ. ಬೆಳೆಯುತ್ತಿರುವ ಶೋಷಣೆಯು ಗ್ರಾಮಾಂತರ ಜನತೆಯನ್ನು ತೀವ್ರವಾಗಿ ಬಾಧಿಸತ್ತಿರುವುದರಿಂದ ರೈತರ ಆತ್ಮಹತ್ಯೆ ಪ್ರಕರಣಗಳು ಬೆಳೆದು ನಿಂತಿವೆ. **ನಿರುದ್ಯೋಗಿ ಯುವ ಜನತೆಗೆ ನೆರವಾಗುವ ಜೊತೆಜೊತೆಗೆ ಶೋಷಿತ ರೈತ-ಕೂಲಿಕಾರರ ಗುತ್ತಿಗೆ ಆಧಾರದಲ್ಲಿ ದುಡಿಯುತ್ತಿರುವವರ ಹಕ್ಕುಗಳಿಗಾಗಿ ಸಂಘಟಿಸುವುದು ಕಾರ್ಮಿಕವರ್ಗದ ಆದ್ಯ ಕರ್ತವ್ಯವಾಗಿದೆ.**

ಹೊಸ ಉದ್ದಿಮೆಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು ಬಹಳ ಒತ್ತಡದಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಅವರು ಕಾರ್ಮಿಕ ಸಂಘ ರಚಿಸುವುದಾಗಲಿ ಅಥವಾ ಹಕ್ಕುಗಳಿಗೆ ಹೋರಾಡುತ್ತಿಲ್ಲ. ಇವರನ್ನು ಒಳಗೊಂಡು ಸಮಾಜವಾದದ ವ್ಯವಸ್ಥೆಗಾಗಿ ಕಾರ್ಮಿಕ ಚಳುವಳಿ ಮಾಡುವ ಮೂಲಕ ತಮ್ಮ ಕರ್ತವ್ಯಗಳನ್ನು ಪಾಲಿಸಬೇಕಾಗಿದೆ. ○

ಧಾಳಿಗಳ ವಿರುದ್ಧವೇ ಹೋರಾಟ

ಕಾರ್ಮಿಕ ವರ್ಗದ ಮೇಲೆ ನಿರಂತರವಾಗಿ ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣ ಎಂಬ ದುಷ್ಟ ತ್ರಿವಳಿಗಳು ಧಾಳಿ ನಡೆಸುತ್ತಿರುವಾಗ, ಸಿಐಟಿಯು ಈ ಧಾಳಿಗಳ ವಿರುದ್ಧದ ಹೋರಾಟದಲ್ಲಿ ಅಗ್ರಸ್ಥಾನದಲ್ಲಿದೆ. ಸಂಘಟನೆಯ ರಾಷ್ಟ್ರ ಸಮ್ಮೇಳನದ ಮಂದಿನ ತಿಂಗಳು ಜರುಗಲಿದೆ. ಅದರ ಅಧ್ಯಕ್ಷರಾದ ಇ.ಬಾಲಾನಂದನ್ ಇತ್ತೀಚೆಗೆ ಬೆಂಗಳೂರಿಗೆ ಆಗಮಿಸಿದ್ದಾಗ ಪತ್ರಿಕೆಗಾಗಿ ಎಂ.ಆರ್.ಶೆಣೈ ಅವರು ಸಂದರ್ಶಿಸಿದ್ದಾರೆ.


ಇ.ಬಾಲಾನಂದನ್

ಈ ಅಖಿಲಭಾರತ ಸಮ್ಮೇಳನದ ಮಹತ್ವದ ಹಾಗೂ ಚರ್ಚಿಸಲಿರುವ ಪ್ರಮುಖ ವಿಷಯಗಳ ಬಗ್ಗೆ ಸ್ವಲ್ಪ ವಿವರಿಸುವಿರಾ?

● ಕಳೆದ ಮೂರು ವರ್ಷಗಳಲ್ಲಿನ ನಮ್ಮ ಕೆಲಸದ ವಿಮರ್ಶೆಯ ಜತೆಜತೆಗೆ ನಮ್ಮ ಮುಂದಿರುವ ಕರ್ತವ್ಯಗಳ ಬಗ್ಗೆಯೂ ಸಮ್ಮೇಳನ ಚರ್ಚಿಸಲಿದೆ. ಜಾಗತೀಕರಣದ ನೀತಿಗಳು ದುಡಿಯುವ ಜನರನ್ನು ಮಾತ್ರವೇ ಅಲ್ಲ, ದೇಶದ ಸಾರ್ವಭೌಮತೆಯನ್ನು ಸಂಕಷ್ಟಕ್ಕೀಡುಮಾಡಿವೆ. ಬಹಳ ಮುಖ್ಯವಾಗಿ ದುಡಿಯುವ ಜನರ ಹಕ್ಕುಗಳ ಮೇಲೆ, ಅವರ ಕೂಲಿಯ ಮೇಲೆ ದೊಡ್ಡ ರೀತಿಯ ದಾಳಿಗಳು ನಡೆಯುತ್ತಿವೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಿ ನೌಕರರ ಹುದ್ದೆಗಳಲ್ಲಿ ತೀವ್ರ ಕಡಿತವಾಗುತ್ತಿದೆ. ಅಲ್ಲದೆ ನ್ಯಾಯಾಂಗ ಕೂಡಾ, ಕಾರ್ಮಿಕರ ಹಕ್ಕುಗಳ ಮೇಲೆ ಸರ್ಕಾರಗಳು ಮತ್ತು ಮಾಲೀಕರು ನಡೆಸುತ್ತಿರುವ ಪ್ರಹಾರಗಳನ್ನು ಎತ್ತಿಹಿಡಿಯುವ ಪ್ರವೃತ್ತಿಯನ್ನು ತೋರಿಸುತ್ತಿದೆ. ತಮಿಳುನಾಡಿನ ಸರ್ಕಾರಿ ನೌಕರರ ಮುಷ್ಕರದ ಪ್ರಶ್ನೆಯಲ್ಲಿ ಇದು ಸ್ಪಷ್ಟವಾಗಿ ತೋರಿಬಂದಿದೆ. ಸಿಐಟಿಯು ತನ್ನೆಲ್ಲಾ ಸಂಘಟನಾ ಸಾಮರ್ಥ್ಯವನ್ನು ಮುಷ್ಕರದ ಹಕ್ಕನ್ನು ರಕ್ಷಿಸುವ ದಿಟ್ಟನಲ್ಲಿ ಬಸಸಲಿದೆ ಮತ್ತು ಇದಕ್ಕಾಗಿ ಭಾರತದ ಕಾರ್ಮಿಕ ವರ್ಗವನ್ನು ಹಾಗೂ ಪ್ರಜಾಪ್ರಭುತ್ವ ಶಕ್ತಿಗಳನ್ನು ಒಗ್ಗೂಡಿಸಲಿದೆ. ಅಲ್ಲದೆ ಜಾಗತೀಕರಣದ ನೀತಿಗಳನ್ನು ಹಿಮ್ಮೆಟ್ಟಿಸಲು ವಿಶಾಲ ತಳಹದಿಯ ಪ್ರಬಲ ಹೋರಾಟವನ್ನು ರೂಪಿಸಲು ಬೇಕಾದ ಕಾರ್ಯವಿಧಾನಗಳ ಬಗ್ಗೆಯೂ ಸಮ್ಮೇಳನ ಚರ್ಚಿಸಲಿದೆ.

ಇಂತಹ ಹೋರಾಟ ಮುಂದಿನ ದಿನಗಳಲ್ಲಿ ಯಾವ ಸ್ವರೂಪದಲ್ಲಿರುತ್ತದೆ?

● ಹೋರಾಟ ವ್ಯಾಪಕತೆ ಪಡೆಯುತ್ತಿರುವ ಬಗ್ಗೆ ಎರಡು ಮಾತಿಲ್ಲ. ಈಗಾಗಲೇ ಇದು ಹಲವು ಸಂದರ್ಭಗಳಲ್ಲಿ ನಿಚ್ಚಳವಾಗಿ ವ್ಯಕ್ತವಾಗಿದೆ. ದೇಶದ ದುಡಿಯುವ ಜನ ವಿಶಾಲಸ್ತರದ ಐಕ್ಯತೆಯನ್ನು ಸಾಧಿಸಿ ಆಳುವ ಜನರ ನೀತಿಗಳ ವಿರುದ್ಧ ಅತ್ಯಂತ ಪ್ರಬಲ ಪ್ರತಿರೋಧವನ್ನು ಒಡ್ಡಲಿದ್ದಾರೆ.

ಜಾಗತೀಕರಣದ ವಿರುದ್ಧದ ಹೋರಾಟ ವಿಶ್ವದ ಎಲ್ಲೆಡೆ ಬಲಗೊಳ್ಳುತ್ತಿದೆಯೇ?

● ಇಡೀ ವಿಶ್ವವನ್ನೇ ತನ್ನ ಕಪಿಮುಷ್ಟಿಯಲ್ಲಿ ಇಡಬಯಸುವ ಅಮೇರಿಕನ್ ಸಾಮ್ರಾಜ್ಯಶಾಹಿಯ ಕುವ್ಯಾಕ್ತಿನೊಂದಿಗೆ ಜಾಗತೀಕರಣದ ನೀತಿಗಳನ್ನು ಎಲ್ಲಾ ದೇಶಗಳ ಮೇಲೆ ಹೇರಲಾಗುತ್ತಿದೆ. ಆದರೆ ಅಂತಹ ನೀತಿಗಳ ದುಷ್ಪರಿಣಾಮಗಳನ್ನು ಜನ ಅರಿತುಕೊಂಡಿದ್ದಾರೆ ಮತ್ತು ಅವುಗಳ ವಿರುದ್ಧ ಹೋರಾಟಗಳನ್ನು ಸಂಘಟಿಸುತ್ತಿದ್ದಾರೆ. ಅಮೇರಿಕನ್ ಸಾಮ್ರಾಜ್ಯಶಾಹಿ ಮತ್ತು ಅದರ ಬಾಲಂಗೋಚಿಗಳಾಗಿರುವ ವಿಶ್ವಬ್ಯಾಂಕ್, ಅಂತರಾಷ್ಟ್ರೀಯ ಹಣಕಾಸು ನಿಧಿ ಹಾಗೂ ವಿಶ್ವವಾಣಿಜ್ಯ ಕೇಂದ್ರಗಳು ಹೇರುತ್ತಿರುವ ನೀತಿಗಳ ವಿರುದ್ಧದ ಪ್ರತಿಭಟನೆ ದಿನೇ ದಿನೇ ಪ್ರಬಲವಾಗುತ್ತಿದೆ ಮತ್ತು ಬೆಳೆಯುತ್ತಿದೆ ಕೂಡಾ. ಜಾಗತೀಕ ರಾಜಕಾರಣದಲ್ಲಿ ಅಮೇರಿಕೆಗೆ ತೀವ್ರ ವಿರೋಧ ವ್ಯಕ್ತವಾಗುತ್ತಿರುವುದನ್ನು ಗಮನಿಸಿ.

ಪ್ರಶ್ನೆ: ಹೊಸ ಆರ್ಥಿಕ ನೀತಿಗಳನ್ನು ಹಿಮ್ಮೆಟ್ಟಿಸಲು ಸಾಧ್ಯವಿದೆಯೆ?

ಖಂಡಿತವಾಗಿಯೂ ದುಡಿಯುವ ಜನ ತಮ್ಮ ಹೋರಾಟಗಳ ಮೂಲಕ ಈ ನೀತಿಗಳನ್ನು ಹಿಮ್ಮೆಟ್ಟಿಸಬಲ್ಲರು. ಅವರ ಐಕ್ಯತೆಯನ್ನು ಬೆಸೆಯುವ ದಿಟ್ಟಿನಲ್ಲಿ ತೀವ್ರ ಪ್ರಯತ್ನಗಳಾಗಬೇಕಿವೆ. ಕೋಮುವಾದೀ ಶಕ್ತಿಗಳು ಮತ್ತು ಇತರ ವಿಚ್ಛಿದ್ರಕಾರೀ ಪ್ರಚೋದನೆಗಳು ದುಡಿಯುವ ಜನ ವಿಭಾಗದಲ್ಲಿ ಅನೈಕ್ಯತೆ ಮೂಡಿಸಿ, ಆ ಮೂಲಕ ಅವರ ಸಂಘಟನಾ ಸಾಮರ್ಥ್ಯ ಹಾಗೂ ಹೋರಾಟದ ನೀತಿಗಳನ್ನೇ ಅಸ್ಥಿರಗೊಳಿಸುವ ಕುತಂತ್ರ ಮಾಡುತ್ತಿವೆ. ಇಂತಹ ಶಕ್ತಿಗಳ ವಿರುದ್ಧದ ಹೋರಾಟವೂ ತೀವ್ರಗೊಳ್ಳಬೇಕಾಗಿದೆ.

'ಬಂಡವಾಳಶಾಹಿಯ ಗರ್ಭದಲ್ಲಿ ಕಾರ್ಮಿಕವರ್ಗ ಹುಟ್ಟುತ್ತದೆ' ಎಂದು ಕಾರ್ಲ್‌ಮಾರ್ಕ್ಸ್ ಒಂದೂವರೆ ಶತಮಾನದ ಹಿಂದೆಯೇ ಹೇಳಿದ್ದರು. ಮೈಸೂರು ಸಂಸ್ಥಾನದಲ್ಲಿ ದಿವಾನರಾಗಿದ್ದ ರಾಮಸ್ವಾಮಿ ಮೊದಲಿಯಾರ್, ಶೇಷಾದ್ರಿ ಅಯ್ಯಾಂಗಾರ್, ವಿಶ್ವೇಶ್ವರಯ್ಯನವರಂತಹ ಪ್ರಗತಿಪರ ಚಿಂತಕರಿಂದಾಗಿ ಕೈಗಾರಿಕೆಗಳು ಬೆಳೆದು ಬಂದವು. ಅದರ ಒಟ್ಟಿಗೇ ಕಾರ್ಮಿಕ ವರ್ಗ ಕೂಡಾ. ಕರ್ನಾಟಕ ಏಕೀಕರಣದ ಮುಂಚೆ ಮೈಸೂರು ಸಂಸ್ಥಾನದಲ್ಲಿ ನಡೆದ ಕಾರ್ಮಿಕ ಚಳುವಳಿಯ ಬಗ್ಗೆ ಬೆಳಕು ಚೆಲ್ಲಿದ್ದಾರೆ ಲೇಖಕರಾದ ಎನ್.ಪಿ.ಶಂಕರನಾರಯಣ ರಾವ್

ಮೈಸೂರು ಪ್ರಾಂತ್ಯದಲ್ಲಿ ಕಾರ್ಮಿಕ ಚಳುವಳಿ....

ಬ್ರಿಟೀಷರ ಆಳ್ವಿಕೆಯ ಕಾಲದಲ್ಲಿ ಭಾರತದ ನಾನಾ ಭಾಗಗಳಲ್ಲಿ ಆಧುನಿಕ ಉದ್ಯಮಗಳು ತಲೆಯೆತ್ತಿದವು ಹಾಗೂ ಅದರ ಪರಿಣಾಮವಾಗಿ ಕಾರ್ಮಿಕ ಚಳುವಳಿಗಳೂ ರೂಪುಗೊಂಡು, ಬಲಗೊಳ್ಳುತ್ತ ಹೋದವು. ಭಾರತದ ಕಾರ್ಮಿಕ ಚಳುವಳಿಯು ಆರಂಭ ಕಾಲದಿಂದ ರಾಷ್ಟ್ರೀಯ ಚಳುವಳಿಯೊಂದಿಗೆ ಗಾಢವಾದ ನಂಟನ್ನು ಬೆಳೆಸಿಕೊಂಡಿತು.

ಏಕೀಕರಣಕ್ಕೆ ಮುನ್ನ ಮೈಸೂರು ಸಂಸ್ಥಾನ

ಮೈಸೂರು ಸಂಸ್ಥಾನವು ಈ ಪ್ರದೇಶದ ಔದ್ಯಮಿಕ ಪ್ರಗತಿಯಲ್ಲಿ ಒಂದು ಮಟ್ಟದ ಸಂಬದ್ಧತೆಯನ್ನು ಸಾಧಿಸಿತ್ತು. ಇದು ಜಲವಿದ್ಯುತ್ ಉತ್ಪಾದನಾ ಘಟಕಗಳ ಸ್ಥಾಪನೆಯಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ.

19ನೆಯ ಶತಮಾನದ ಕೊನೆಯ ವೇಳೆಗೆ ಕೋಲಾರದ ಚಿನ್ನದ ಗಣಿಗಳು, ಬೆಂಗಳೂರಿನ ಮೈಸೂರ್ ಸ್ಪಿನ್ನಿಂಗ್ ಅಂಡ್ ಮ್ಯಾನುಫಾಕ್ಚರಿಂಗ್ ಕಂಪನಿ ಎಂಬ ಹೆಸರಿನ ರಾಜಾಮಿಲ್, ಬೆಂಗಳೂರು ಸ್ಪಿನ್ನಿಂಗ್ ಅಂಡ್ ವೀವಿಂಗ್ ಮಿಲ್ಸ್ ಎಂಬ ಹೆಸರಿನ ಬಿನ್ನಿಮಿಲ್- ಹೀಗೆ ಮೂರು ಬೃಹತ್ ಉದ್ಯಮಗಳು ಇಲ್ಲಿ ಸ್ಥಾಪನೆಯಾಗಿದ್ದುವು. 1944 ರ ವೇಳೆಗೆ ಇಲ್ಲಿ 605 ಕಾರ್ಖಾನೆಗಳಿದ್ದುವು. ಅವುಗಳಲ್ಲಿ ಸುಮಾರು 80 ಸಾವಿರ ಕಾರ್ಮಿಕರಿದ್ದರು. ಇಲ್ಲಿನ ಉದ್ಯಮಗಳಲ್ಲಿ ಹತ್ತಿ ಜವಳಿ, ರೇಷ್ಮೆ ಜವಳಿ, ಕಾಗದ, ಕಬ್ಬಿಣ ಮತ್ತು ಉಕ್ಕು, ಯಂತ್ರ ನಿರ್ಮಾಣ ಮುಂತಾಗಿ ವಿವಿಧ ಉದ್ಯಮಗಳಿದ್ದುವು. ಉತ್ಪಾದನೆಯ ದೃಷ್ಟಿಯಲ್ಲಿ ಅವು ಬೃಹತ್ ಘಟಕಗಳಲ್ಲ ಎಂಬುದು ನಿಜವಾದರೂ, ಬ್ರಿಟಿಷ್ ಆಳ್ವಿಕೆಯಲ್ಲಿ ಒಂದು ದೇಶೀಯ ಸಂಸ್ಥಾನದಲ್ಲಿ ಅದೂ ಕರ್ನಾಟಕದ ಒಂದು ಭಾಗದಲ್ಲಿ ಸ್ಥಾಪಿಸಿದ ಪ್ರಗತಿ ಇದು ಎಂಬುದು ಸಂತೋಷ ತರುವಂತಹ ಒಂದು ಸಂಗತಿ. ಮುಂದೆ ಹಲವಾರು ಪ್ರಮುಖ ಕೇಂದ್ರ ಸರ್ಕಾರ ಸ್ವಾಮ್ಯದ ಬೃಹತ್ ಉದ್ಯಮಗಳ ಸ್ಥಾಪನೆಗೆ ಈ ಹಿನ್ನೆಲೆಯು ಒಂದು ಪ್ರೋತ್ಸಾಹದಾಯಕ ವಾತಾವರಣವನ್ನು ಸೃಷ್ಟಿಸಿತು.

ಆದರೆ, ಕಾರ್ಮಿಕ ಚಳುವಳಿ ತಲೆ ಎತ್ತಲು ಆ ಕಾಲದ ಸರ್ಕಾರಗಳು ಅವಕಾಶಗಳೇ ದೊರೆಯದಂತಹ ಒಂದು ಬಗೆಯ ವೈರಭಾವದ ಪ್ರತಿಕೂಲ ವಾತಾವರಣವನ್ನು ನಿರ್ಮಿಸಿದ್ದವು. ಆಗಿನ ಬ್ರಿಟಿಷ್ ಭಾರತ ಸರ್ಕಾರವು 1926 ರಲ್ಲಿ ಕಾರ್ಮಿಕ ಸಂಘಗಗಳಿಗೆ ಮಾನ್ಯತೆ ಹಾಗೂ ವಿವಾದಗಳಿಗೆ ಸಂಬಂಧಪಟ್ಟ ಹಾಗೆ ಅಖಿಲಭಾರತ ಟ್ರೇಡ್ ಯೂನಿಯನ್ ಕಾಯಿದೆಯನ್ನು ಜಾರಿ ಮಾಡಿತು. ಮೈಸೂರು ಸಂಸ್ಥಾನವು ಅದನ್ನು ಇಲ್ಲಿಗೆ ಅನ್ವಯಗೊಳಿಸಲೂ ಇಲ್ಲ, ಪರ್ಯಾಯ ಶಾಸನವೊಂದನ್ನು ರೂಪಿಸಲೂ ಇಲ್ಲ. ಇಲ್ಲಿ ಅಂತಹ ಒಂದು ಕಾಯಿದೆ ಜಾರಿಯಾದುದು, ಕಾರ್ಮಿಕ ಹೋರಾಟಗಳ ಪರಿಣಾಮವಾಗಿ, ಅದೂ 1941 ರಷ್ಟು ತಡವಾಗಿ.

ಕಾನೂನು, ಕಾಯಿದೆಗಳು ಜಾರಿಯಾಗಲಿಲ್ಲವೆಂದು ಜೀವನಾವಶ್ಯಕ ವಸ್ತುಗಳ ಬೆಲೆಗಳು ನಿಂತಲ್ಲಿ ನಿಲ್ಲುತವೆಯೇ? 1914 ರ ಬೆಲೆ ಸೂಚ್ಯಾಂಕವನ್ನು 100 ಎಂದು ಪರಿಗಣಿಸಿದರೆ, 1920 ರ ವೇಳೆಗೆ ಅದು 183 ಆಯಿತು. ಅತ್ಯಂತ ಕಡಿಮೆ ಕೂಲಿದರಗಳಲ್ಲಿ ಕೆಲಸ ಮಾಡಬೇಕಾದ ಕಾರ್ಮಿಕರ ಸ್ಥಿತಿಯು ದುರ್ಭರವಾಯಿತು. ಆಗಿನ ಕಾರ್ಮಿಕ ಹೋರಾಟಗಳೆಲ್ಲವೂ ವೇತನ, ಬೋನಸ್‌ಗಳಿಗೆ ಸಂಬಂಧಪಟ್ಟುವು. 1020 ರಲ್ಲಿ ಬಿನ್ನಿಮಿಲ್‌ನಲ್ಲಿ ಬೋನಸ್ ಕೋರಿ ಒಂದು ಮುಷ್ಕರವು ಜರುಗಿತು. 1926 ರಿಂದ 1931 ರ ನಡುವೆ ಅದೇ ಬೇಡಿಕೆಯ ಮೇಲೆ ನಾಲ್ಕು ಬಾರಿ ಮುಷ್ಕರಗಳು ಜರುಗಿದ್ದು, ಈ ಹೋರಾಟಗಳ ಸಂದರ್ಭಗಳಲ್ಲಿ ಕಾರ್ಮಿಕರು ರೊಚ್ಚಿಗೆದ್ದು ಯಂತ್ರಸ್ಥಾವರಗಳಿಗೆ ಹಾನಿಮಾಡಿ ಆಡಳಿತವರ್ಗ ಹಾಗೂ ಪೊಲೀಸರ ದಬ್ಬಾಳಿಕೆಗೆ ಗುರಿಯಾಗುತ್ತಿದ್ದರು. ಇದನ್ನು ಗಮನಿಸಿದ ಕೆಲವರು ಸಹೃದಯಿ ನಾಗರಿಕರು ಕಾರ್ಮಿಕರಿಗೆ ಸೂಕ್ತ ಮಾರ್ಗದರ್ಶನ ಮಾಡಲು ಮುಂದಾದರು. ಇವರಲ್ಲಿ ಕೆ.ಟಿ.ಭಾಷ್ಯಂ ಮತ್ತು ಪಿ.ಎಂ.ರಾಮಶರ್ಮ ಮೊದಲಿಗರು ಹಾಗೂ ಮುಖ್ಯರು. ಅವರುಗಳ ಪ್ರಯತ್ನಗಳಿಂದಾಗಿ ಬೆಂಗಳೂರು ಟೆಕ್ಸ್‌ಟೈಲ್ ಲೇಬರ್ ಯೂನಿಯನ್ ಎಂಬ ಕಾರ್ಮಿಕ ಸಂಘವು ಸ್ಥಾಪನೆಯಾಯಿತು. ಅದರ ಸ್ಥಾಪನೆಯಾದುದು.ಇದನ್ನು 1904 ರ ಸೊಸೈಟೀಸ್ ಆಕ್ಟ್ ಎಂಬ ಕಾಯಿದೆಯ ಪ್ರಕಾರ ನೋಂದಾಯಿಸಲಾಗಿತ್ತು. ಕೋಲಾರ ಚಿನ್ನದ ಗಣಿಗಳ ಕಾರ್ಮಿಕ ಸಂಘವೂ ಸ್ಥಾಪನೆಯಾಗಿತ್ತು. ಅದರ ಸಂಬಂಧವಾಗಿ ಪಿ.ಆರ್.ಶರ್ಮ, ಫಿಲಿಪ್ ಎಂಬುವರ ಹೆಸರುಗಳು ಅಲ್ಲಲ್ಲಿ ಪ್ರಸ್ತಾಪವಾಗಿವೆ.

1930 ರ ದಶಕದ ನಡುಭಾಗದಲ್ಲಿ ಕಾರ್ಮಿಕ ಸಂಘಟನೆಗೆ ವಿಶೇಷ ಗಮನ ಹರಿಸುವ ಉದ್ದೇಶ ಹೊಂದಿದ್ದ ಒಂದು ಸಂಘವು ಅಸ್ತಿತ್ವಕ್ಕೆ ಬಂತು. 1930 ರ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿ, ಬ್ರಿಟಿಷ್ ಪ್ರಾಂತಗಳಲ್ಲಿ ಸೆರೆಮನೆವಾಸ ಅನುಭವಿಸಿ ಹೊರಬಂದಿದ್ದ ಮೈಸೂರು ಸಂಸ್ಥಾನದ ಕೆಲವು ತರುಣರು ಮುಖ್ಯ ಪಾತ್ರವಹಿಸುತ್ತಿದ್ದ ಈ ಸಂಘದ ಹೆಸರು "ಜನಜಾಗೃತಿ ಸಂಘ". ಇದರ ಚಟುವಟಿಕೆಗಳು ಬೆಂಗಳೂರು, ಮೈಸೂರು, ಕೋಲಾರ ಮುಂತಾದೆಡೆಗಳಲ್ಲಿ ಚುರುಕಾಗಿದ್ದುವು.

ಈ ಸಂಘದ ಹಲವರು ಆಗ್ಗೆ ನಿಷೇಧಿತವಾಗಿದ್ದ ಭಾರತ ಕಮ್ಯುನಿಸ್ಟ್ ಪಕ್ಷದ ಸದಸ್ಯರು ಹಾಗೂ ಸಹಾನುಭೂತಿಪರರು. ಮುಂದೆ ಮೈಸೂರು ಸಂಸ್ಥಾನದ ಕಾರ್ಮಿಕ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ ಎನ್.ಡಿ.ಶಂಕರ್, ಎಸ್.ರಾಮಸ್ವಾಮಿ, ಕೆ.ಎಸ್. ಕುಮಾರನ್, ಎಂ.ಎಸ್. ರಾಮರಾವ್ ಮುಂತಾದವರು ಈ ಸಂಘದವರು.

ಈ ತರುಣರು ಆ ವೇಳೆಗಾಗಲೇ ಕಾರ್ಮಿಕರ ನಡುವೆ ಅಭಿಮಾನ ಗಳಿಸಿದ್ದ ಕೆ.ಟಿ. ಭಾಷ್ಯಂ, ಪಿ.ಎಂ.ರಾಮಶರ್ಮ ಇವರೊಂದಿಗೆ ಸೇರಿಕೊಂಡರು. ಸ್ವತಃ ಕಾರ್ಮಿಕ ರಾಗಿ, ಕಾರ್ಮಿಕ ಮುಂದಾಳು ಗಳಾದವರಲ್ಲಿ ಜಿ.ಆರ್.ಚಂಗಲಾರಾಧ್ಯ, ಜೆ. ಲಿಂಗಯ್ಯ, ಎಂ.ಎ. ಪರಶುರಾಂ, ಎಸ್.ರಾಮದಾಸ್, ಎಸ್. ಶ್ರಿರಾಮುಲು ಇವರು ಮುಖ್ಯರು.

1935 ರ ನಂತರ ಕಾರ್ಮಿಕರ ನಡುವೆ ಜಾಗೃತಿಯುಂಟಾಯಿತು. ಆ ವರ್ಷ ಮಹಾರಾಜ ಮತ್ತು ಮಿನರ್ವ ಮಿಲ್‌ಗಳಲ್ಲಿ ಮುಷ್ಕರವು ಜರುಗಿ 9 ಮಂದಿ ಕೆಲಸದಿಂದ ವಜಾ ಆದರು. ಕಾರ್ಮಿಕರು ಮತ್ತು ಕಾರ್ಮಿಕ ಮುಖಂಡರಲ್ಲಿ, ಕಾರ್ಮಿಕರ ಕೋರಿಕೆಗಳಿಗೆ ಹಾಗೂ ಅವರ ಮೇಲೆ ನಡೆಯುವ ದಬ್ಬಾಳಿಕೆ ಮತ್ತು ದೌರ್ಜನ್ಯಗಳಿಗೆ ವಿರುದ್ಧವಾಗಿ ಸಾರ್ವಜನಿಕ ಬೆಂಬಲವನ್ನು ಗಳಿಸುವುದರ ಮಹತ್ವದ ಅರಿವು ಮೂಡಿತು. ಮೈಸೂರು ಕಾಂಗ್ರೆಸ್ ಸ್ಥಾಪನೆಯಾಗಿ ಜನಾಂದೋಲನಗಳು ಪ್ರಾರಂಭವಾದ ಮೇಲಂತೂ ಸಾರ್ವಜನಿಕ ಸಭೆಗಳು, ಕಾರ್ಮಿಕರ ಮೆರವಣಿಗೆಗಳು ದಿನನಿತ್ಯದ ಘಟನೆಗಳಾದವು. ಜನಜಾಗೃತಿ ಸಂಘದ ಕಾರ್ಯಕರ್ತರು ಸಣ್ಣಪುಟ್ಟ ಕಾರ್ಖಾನೆಗಳ ಕಾರ್ಮಿಕರನ್ನು ಸಂಘಟಿಸತೊಡಗಿದರು.

1939 ರ ಫೆಬ್ರವರಿ ತಿಂಗಳಲ್ಲಿ ಟಿ.ಆರ್.ಮಿಲ್ಸ್ ಎಂಬ ಬಟ್ಟೆಗಿರಣಿಯ ಕಾರ್ಮಿಕರು ಹೆಚ್ಚಿನ ... ಕೋರಿ ಮುಷ್ಕರ ಹೂಡಿದರು. ಅವರಿಗೆ ... ವ್ಯಕ್ತಪಡಿಸಲು ಜರುಗಿದ ಹಲವಾರು ... ಸಭೆಗಳ ವರದಿಗಳು ಪೊಲೀಸ್ ದಾಖಲೆ... ಲಭ್ಯವಿದೆ. ಧರ್ಮಾಂಬುಧಿ ಕೆರೆಯ ... (ಈಗಿನ ಬೆಂಗಳೂರು ಬಸ್‌ನಿಲ್ದಾಣ) ... ಸಭೆಯಲ್ಲಿ ಎರಡು ಸಾವಿರ ... ಹಾಜರಿದ್ದರಂತೆ. ಅಂತಹ ಇನ್ನೊಂದು ಸ... ಮಿನರ್ವ ಮಿಲ್ ಕಾರ್ಮಿಕರು ತಮ್ಮ ಒಂದು ... ಕೂಲಿಯನ್ನು ವಂತಿಗೆ ಹಾಕಿ, ಟಿ.ಆರ್... ಕಾರ್ಮಿಕರಿಗೆ ನೆರವು ನೀಡಲು ಮುಂದೆ ... ಇನ್ನೊಂದು ಸಭೆಯಲ್ಲಿ ಆಗ್ಗೆ ಆಲ್ ಇ... ಟ್ರೇಡ್ ಯೂನಿಯನ್ ಕಾಂ... ಕಾರ್ಯದರ್ಶಿಯಾಗಿದ್ದ ಎಸ್.ಎಸ್.ಮಿ... ಆ ಕಾರ್ಮಿಕರಿಗೆ ಬೆಂಬಲ ಸೂಚಿಸಿದರು...

ಅದೇ ವರ್ಷ ಮೈಸೂರಿನಲ್ಲಿ ಜರುಗಿದ ... ಘಟನೆಯು ಕಾರ್ಮಿಕರಲ್ಲಿ ಮೂಡಿದ್ದ ಒಂ... ದಿಟ್ಟತನವನ್ನೂ ಸೂಚಿಸುತ್ತದೆ. ಮೈಸೂರಿ... ದಿನ ಆಚರಿಸಲು ಒಂದು ಸಭೆ ಏ... ಅದರಲ್ಲಿ ಭಾಷಣ ಮಾಡಲು ಬರಬ... ಎನ್.ಡಿ.ಶಂಕರ್ ಮತ್ತು ಇತರರ ...




ಸೂರಿ ನೇತೃತ್ವದಲ್ಲಿ ಮೈಸೂರಿನ ... ಕಾರ್ಖಾನೆಯ ಕಾ...

ಸರ್ಕಾರವು ತಡೆಯಾಜ್ಞೆ ವಿಧಿಸಿತ... ಜನಜಾಗೃತಿ ಸಂಘದ ಇನ್ನೊಬ್ಬ ಕಾ... ಎಸ್.ರಾಮಸ್ವಾಮಿ ಮೈಸೂರಿಗೆ ಹೊ... ರೈಲ್ವೇ ವರ್ಕ್‌ಷಾಪಿನ ಕಾರ್ಮಿಕರ ಸ... ಕಾರ್ಮಿಕ ಸಂಘವೊಂದನ್ನು ಸ್ಥಾ... ಪ್ರಯತ್ನಿಸಿದಾಗ ಅವರನ್ನು ಬಂಧಿಸಿ ... ಮೊಕದ್ದಮೆ ಹೂಡಿದರು. ಅದು ನಿರಾಕ... ಅವರೆಲ್ಲ ತಮ್ಮನ್ನು ಊಟದ ಬಿಡುವಿ... ಮುಷ್ಕರ ಹೂಡಿ, ಮೆರವಣಿಗೆಯಲ್ಲಿ ... ಹೋದರು. ರಾಮಸ್ವಾಮಿಗಂತೂ ಶಿಕ್ಷೆಯ...

ಕಾರ್ಮಿಕರು ಉತ್ಸಾಹದಿಂದ ಭಾಗವಹಿಸುತ್ತಿದ್ದರು

ಎಂ.ಎನ್.ಉಗ್ರಪ್ಪನವರ ಅಪ್ರಕಟಿತ ಆತ್ಮಕಥನದಿಂದ



ಸರ್ಕಾರಿ ಸ್ವಾಮ್ಯದಲ್ಲಿದ್ದ ಕಾರ್ಖಾನೆಗಳ ರೇಷ್ಮೆ ಕೆಲಸಗಾರರು ವಾಸಿಸುತ್ತಿದ್ದ ಟಿ.ನರಸೀಪುರ, ಯಳಂದೂರು, ಮಾಂಬಳ್ಳಿ, ಸಂಕೇಮರಳ್ಳಿ, ರಾಮನಗರ, ಚನ್ನಪಟ್ಟಣ, ಕನಕಪುರ ಇತ್ಯಾದಿ ಸ್ಥಳಗಳಿಗೆ ಕಾಂ. ಸೋಮಸುಂದರ ಶರ್ಮ ಮತ್ತು ನಾನು ಹೋಗಿ ಅಲ್ಲಿಯ ಕೆಲಸಗಾರರನ್ನು ಸಂಪರ್ಕಿಸಿ, ಸುದೀರ್ಘ ಹೋರಾಟಗಳಿಂದ ಮಾತ್ರ ಬೇಡಿಕೆಗಳ ಈಡೇರಿಕೆ ಸಾಧ್ಯ ಎಂಬ ಅರಿವನ್ನು ಅವರಲ್ಲಿ ಉಂಟು ಮಾಡಿದೆವು. ಇದರ ಪರಿಣಾಮವಾಗಿ ಎಲ್ಲಾ ರೇಷ್ಮೆ ಕೆಲಸಗಾರರನ್ನೊಳ ಗೊಂಡ ಕಾಲ್ನಡಿಗೆಯ ಬೃಹತ್ ಜಾಥಾವನ್ನು ಕೊಳ್ಳೆಗಾಲದಿಂದ ಮೈಸೂರಿಗೆ ಆಯೋಜಿಸಿದ್ದೆವು. ಕೆಂಪು ಬಾವುಟಗಳನ್ನು ಹಿಡಿದುಕೊಂಡು ಮುಗಿಲೆತ್ತರಕ್ಕೆ ಕ್ರಾಂತಿಕಾರಿ ಘೋಷಣೆಗಳನ್ನು ಕೂಗುತ್ತಾ ಸಾಗುತ್ತಿದ್ದ ಅಧಿಕ ಸಂಖ್ಯೆಯ ಮಹಿಳೆಯರನ್ನು ಒಳಗೊಂಡ ಜಾಥಾವನ್ನು ಮಾರ್ಗಮಧ್ಯದಲ್ಲಿ ವೀಕ್ಷಿಸುತ್ತಿದ್ದ ರೈತಾಪಿ ಬಂಧುಗಳು ಹಾಗೂ ಸಾರ್ವಜನಿಕರು ವಿಸ್ಮಿತರಾಗಿದ್ದರು. ರಾತ್ರಿ ವೇಳೆ ತಂಗುತ್ತಿದ್ದ ಗ್ರಾಮಗಳಲ್ಲಿ ಕ್ರಾಂತಿಗೀತೆಗಳನ್ನು ಹಾಡುವುದರ ಜೊತೆಗೆ ಪಕ್ಷದ ಧೋರಣೆಗಳನ್ನು ಒಳಗೊಂಡ ಭಾಷಣಗಳನ್ನು ಮಾಡುತ್ತಿದ್ದೆವು. ಇವು ಜನರಿಗೆ ಅತಿ ಪ್ರಿಯವಾಗಿದ್ದವು. ಈ ಜಾಥಾ ಕೊಳ್ಳೆಗಾಲ ದಿಂದ ಅಗರ, ಮಾಂಬಳ್ಳಿ ಮಾರ್ಗವಾಗಿ ಸಂಕೆಮರಳ್ಳಿಗೂ ಅಲ್ಲಿಂದ ಕುದೇರು ಮತ್ತು ಮೂಗೂರು, ನರಸೀಪುರ ಮಾರ್ಗವಾಗಿ ಮೈಸೂರಿಗೆ ಆಗಮಿಸಿತ್ತು. ಈ ಜಾಥಾದಲ್ಲಿ ಮಹಿಳೆಯರು ಅಧಿಕ ಸಂಖ್ಯೆಯಲ್ಲಿದ್ದರು- ಸುಮಾರು ಒಂದು ವಾರ ನಡೆದ ಈ ಜಾಥಾದ ರೇಷ್ಮೆ ಕೆಲಸಗಾರರಿಗೆ ಮಾರ್ಗ ಮಧ್ಯದಲ್ಲಿನ ಹಳ್ಳಿಗಳ ರೈತಾಪಿಗಳು ಊಟೋಪಚಾರಗಳನ್ನು ನೀಡುವುದು ಜೊತೆಗೆ ಕೆಲಸಗಾರರ ಬೇಡಿಕೆಗಳ ಈಡೇರಿಕೆಗೆ ತಮ್ಮ ಬೆಂಬಲವನ್ನು ಸಹ ಸೂಚಿಸಿದ್ದರು.

ಮೈಸೂರನ್ನು ತಲುಪಿದ ಜಾಥಾ ಕಾರ್ಮಿಕ ಇಲಾಖೆಯ ಮುಂದೆ ಬೃಹತ್ ಪ್ರದರ್ಶನ ನಡೆಸಿ ಅನಂತರ ಜಿಲ್ಲಾಧಿಕಾರಿಗಳ ಕಛೇರಿಗೆ ತಲುಪಿ ಅಲ್ಲಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಹೀಗೆ ಜಾಥಾಗಳನ್ನೊಳಗೊಂಡಂತೆ, ಮೆರವಣಿಗೆ, ಧರಣಿ ಇತ್ಯಾದಿ ಕಾರ್ಯಕ್ರಮಗಳನ್ನು ಕೈಗೊಂಡುದರ ಪರಿಣಾಮವಾಗಿ, ರೇಷ್ಮೆ ಕೆಲಸಗಾರರ ಸಮಸ್ಯೆಗಳನ್ನು ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲಾಯಿತು. ತತ್ಪರಿಣಾಮವಾಗಿ ಕೊಳ್ಳೆಗಾಲದ ರೇಷ್ಮೆ ಕೆಲಸಗಾರರ ಅನೇಕ ಬೇಡಿಕೆಗಳ ಈಡೇರಿಕೆಯಲ್ಲಿ ನಮ್ಮ ಪಕ್ಷದ ನೇತೃತ್ವದ ಕಾರ್ಮಿಕ ಸಂಘದ ಪಾತ್ರ ಅವಿಸ್ಮರಣೀಯವಾದುದು.

ನಿರ್ಗತಿಕರಿಗೆ ಗುಡಿಸಲುಗಳ ನಿರ್ಮಾಣ

ಕೊಳ್ಳೆಗಾಲಕ್ಕೆ ಸುಮಾರು 2 ಕಿ.ಮೀ. ಸಮೀಪದಲ್ಲಿ ಕಾವೇರಿ ಹೊಳೆಯ ನೀರು ಭರ್ತಿಯಾದಾಗ ನೀರು ಶೇಖರವಾಗುತ್ತಿ... ಪ್ರದೇಶ ಸುಮಾರು 100 ರಿಂದ ... ಎಕರೆಯಷ್ಟಿತ್ತು. ಈ ಪ್ರದೇಶ ಸಮ... ಮೇಲ್ವರ್ಗ ದವರ ಕಣ್ಣಿಗೆ ಬಿದ್ದಿದ್ದರು... ಅಲ್ಲಿಯ ಪರಿಸ್ಥಿತಿಯಲ್ಲಿ ವಾಸಿಸಲು ಸಿದ್ಧ... ಇದನ್ನು ಮನಗಂಡ ನಾವುಗಳು ಆ ಪ್ರದ... ಒಂದೇ ರಾತ್ರಿಯಲ್ಲಿ ಕಟ್ಟಿಗೆ ... ಮ--ಳೆಯಿಂದ ಸುಮಾರು 100 ರಿ... ಗುಡಿಸಲುಗಳನ್ನು ನಿರ್ಮಿಸಿ ... ಬಡಕುಟುಂಬಗಳು ಅಲ್ಲಿ ವಾ... ಅನುಕೂಲ ಕಲ್ಪಿಸಿಕೊಟ್ಟೆವು. ... ಸರ್ಕಾರದ ಅಧಿಕಾರಿಗಳು ... ಮಾಡಿ ಅಲ್ಲಿನ ನಿವಾ... ಭೂಮಿಯ ಹಕ್ಕುಪತ್ರ... ನೀಡುವಂತೆ ಮಾಡಿದ ಕೀರ್ತಿ... ಹಾಗೂ ಪಕ್ಷದ ನಾಯಕರ ... ದಲ್ಲಿದ್ದ ಕಾರ್ಮಿಕರ ಸಂಘಕ್ಕೆ ...

ಕೊಳ್ಳೇಗಾಲದ ಮೇಲ್ಕಂಡ ಪ್ರದ... ಪಕ್ಷದ ಉಪಯೋಗಕ್ಕಾಗಿ ಜನಕ... ಜಾಗದಲ್ಲಿ ಪಕ್ಷದ ಕಛೇರಿ ಈಗಲೂ ಇ... ಕೆಲಸಗಾರರ ಪರವಾದ ಹೋರಾಟಗಳ... ನಾಯಕರು ನೀಡಿದ್ದ ನಾಯಕತ್ವದ ... ವಾಗಿ ಕೊಳ್ಳೇಗಾಲದ ಪುರಸಭೆಗೆ ಒ... ಮೂವರು ಸದಸ್ಯರು ಆಯ್ಕೆಯಾಗಿದ್ದ...

ರಾಷ್ಟ್ರಮಟ್ಟದ ನಾಯಕರುಗಳು ಮೈ... ಮತ್ತು ಬೆಂಗಳೂರಿಗೆ ಭೇಟಿ ನೀಡಿದಾ... ಮಾಡುತ್ತಿದ್ದ ಮೆರವಣಿಗೆ ಹಾಗೂ ... ಸುಮಾರು 2-3 ಬಸ್ಸುಗಳಲ್ಲಿ ರೇಷ್ಮೆ ಕೆಲ... ಬಂದು ಉತ್ಸಾಹದಿಂದ ಪಾಲ್ಗೊಳ್ಳುತ್ತಿ...

ಬಂಡವಾಳಶಾಹಿ ವ್ಯವಸ್ಥೆ ಇಂದು ಬಿಕ್ಕಟ್ಟಿನಲ್ಲಿದೆ. ತನಗೆ ಬಂದೊದಗಿದ ಬಿಕ್ಕಟ್ಟಿನ ಹೊರೆಯನ್ನು ದುಡಿಯುವ ಜನರ ಮೇಲೆ ಹೇರಲು ಬಹುಕೃತ ರೂಪದಲ್ಲಿ ಬರುತ್ತಿದೆ. ಇದರ ವಿರುದ್ಧ ಕಾರ್ಮಿಕವರ್ಗ, ಜನಸಮೂಹ ಐಕ್ಯ ಹೋರಾಟ ನಡೆಸಬೇಕೆಂದು ಪ್ರಯತ್ನಿಸುವಾಗ, ಕಾರ್ಮಿಕ ವರ್ಗದ ಐಕ್ಯತೆ ಮುರಿಯಲು, ಜನರ ದಿಕ್ಕು ತಪ್ಪಿಸಲು ಕೋಮುವಾದ ಪ್ರಯತ್ನಿಸುತ್ತಿದೆ. ಈ ಕುರಿತು ಸಿಐಟಿಯು ರಾಜ್ಯಾಧ್ಯಕ್ಷ ಬಿ.ಮಾಧವ ಅವರ ಲೇಖನ

ಕೋಮುವಾದದ ಅಪಾಯ


ಭಾರತದಂತಹ ಬಹುಧರ್ಮಗಳ, ಬಹುಭಾಷೆಗಳ, ಬಹುಸಂಸ್ಕೃತಿಗಳ ದೇಶದಲ್ಲಿ ಈ ಎಲ್ಲಾ ವೈವಿಧ್ಯತೆಗಳನ್ನು ಗೌರವಿಸುವ ಮೂಲಕ ಮಾತ್ರವೇ ರಾಷ್ಟ್ರೀಯ ಐಕ್ಯತೆ ಕಾಪಾಡಲು ಸಾಧ್ಯ. ಕೋಮುವಾದವು ಒಂದು ಧರ್ಮ ಮತ್ತು ಒಂದು ಸಂಸ್ಕೃತಿಯನ್ನು ಇತರರ ಮೇಲೆ ಹೇರುತ್ತದೆ. ಇದರಿಂದಾಗಿ ದ್ವೇಷ ಬೆಳೆಯುತ್ತದೆ. ದ್ವೇಷವು ಹಿಂಸೆ ಮತ್ತು ರಕ್ತಪಾತಕ್ಕೆ ದಾರಿ ಮಾಡಿಕೊಡುತ್ತದೆ. ಮುಗ್ಧ ಜನರು ಸದಾ ಕಾಲವೂ ಭಯ ಮತ್ತು ಅಭದ್ರತೆಯ ವಾತಾವರಣದಲ್ಲಿ ಬದುಕಬೇಕಾಗುತ್ತದೆ. ಜನರ ಜೀವ ಮತ್ತು ಆಸ್ತಿಪಾಸ್ತಿ ನಾಶವಾಗುತ್ತದೆ. ದೇಶದ ಅಭಿವೃದ್ಧಿ ಕುಂಠಿತವಾಗುತ್ತದೆ. ಮಾನವ ನಿರ್ಮಿತವಾದ ಈ ದುರಂತಗಳ ಮೊದಲ ಬಲಿ ಕಾರ್ಮಿಕ ವರ್ಗ. ಕೋಮುವಾದವು ಕಾರ್ಮಿಕ ವರ್ಗವನ್ನು ಪ್ರಜಾಸತ್ತಾತ್ಮಕ ಚಳುವಳಿಯನ್ನೂ ವಿಭಜಿಸುತ್ತದೆ.

ಭಾರತದಲ್ಲಿ ಇಂದು ಹರಡುತ್ತಿರುವ ಕೋಮುವಾದಿ ಭಯೋತ್ಪಾದನೆಯನ್ನು ಕೇವಲ ಹಿಂದೂ ಪುನರುತ್ಥಾನವಾದ ಅಥವಾ ಮುಸ್ಲಿಂ ಮೂಲಭೂತವಾದದ ಪರಿಣಾಮಗಳೆಂದು ಪರಿಗಣಿಸಲಾಗದು. ಧರ್ಮಕ್ಕೂ ಈ ಭಯೋತ್ಪಾದನೆಗಳಿಗೂ ಇರುವ ಸಂಬಂಧ ನೆಪಮಾತ್ರ. ಕೋಮುವಾದಿ ಭಯೋತ್ಪಾದನೆಯ ಹಿಂದೆ ಫ್ಯಾಸಿಸ್ಟ್ ಶಕ್ತಿಗಳಿವೆ. ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ನೀತಿಗಳಿಂದಾಗಿ ತನ್ನ ಅಸ್ತಿತ್ವಕ್ಕೆ ಎದುರಾಗಿರುವ ಅಪಾಯಗಳ ವಿರುದ್ಧ ಹೋರಾಡುತ್ತಿರುವ ಕಾರ್ಮಿಕ ವರ್ಗದ ಐಕ್ಯತೆಯನ್ನೇ ಒಡೆಯಲು ಫ್ಯಾಸಿಸ್ಟ್ ಶಕ್ತಿಗಳು ಕೋಮು ಭಾವನೆಗಳನ್ನು ಕೆರಳಿಸುತ್ತಿವೆ. ರಾಜಕೀಯ ಅಧಿಕಾರವನ್ನು ತಮ್ಮ ಕೈಗಳಲ್ಲಿ ಹಿಡಿದುಕೊಂಡಿರುವ ಹಿಂದೂ ಕೋಮುವಾದಿಗಳು ಹಿಂದುತ್ವದ ಹೆಸರಿನಲ್ಲಿ ಇಡೀ ವ್ಯವಸ್ಥೆಯನ್ನು ಕೋಮುವಾದೀಕರಣಗೊಳಿಸಲು ಪ್ರಯತ್ನಿಸುತ್ತಿವೆ. ಇದೇ ಸಮಯದಲ್ಲಿ, ಶತಮಾನಗಳಿಂದ ಬೆಳೆದುಬಂದ ಭ್ರಾತೃತ್ವಕ್ಕೆ ಅಡ್ಡಗೋಡೆಯಂತೆ ಮುಸ್ಲಿಂ ಮೂಲಭೂತವಾದಿ ಬೆಳೆದು ಬರುತ್ತಿರುವುದು ಹಿಂದೂ ಕೋಮುವಾದಿಗಳ ವಿಷಪೂರಿತ ಪ್ರಚಾರಗಳಿಗೆ ಅಸ್ತ್ರ ಒದಗಿಸುತ್ತದೆ.

ಬಂಡವಾಳಶಾಹಿ ವ್ಯವಸ್ಥೆಯ ಬಿಕ್ಕಟ್ಟಿನಿಂದಾಗಿ ಉದ್ಯೋಗಾವಕಾಶಗಳಿಂದ ವಂಚಿತರಾದ ಕೋಟಿಗಟ್ಟಲೆ ಯುವಜನರ ದೊಡ್ಡದೊಂದು ಭಾಗವನ್ನು ಕೋಮು ಆಧಾರದಲ್ಲಿ ಸಂಘಟಿಸಿ, ಅವರಲ್ಲಿ ಅನ್ಯಕೋಮಿನವರ ವಿರುದ್ಧ ದ್ವೇಷ ಭಾವನೆ ಬೆಳೆಸಿ, ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಹೋರಾಡದಂತೆ ಅವರ ಗಮನವನ್ನು ಬೇರೆಡೆಗೆ ಸೆಳೆಯುವ ಕೆಲಸವನ್ನು ಹಿಂದೂ ಕೋಮುವಾದಿಗಳು ಯಶಸ್ವಿಯಾಗಿ ಮಾಡುತ್ತಿದ್ದಾರೆ. ಅಲ್ಪಸಂಖ್ಯಾತರು ವಿಶೇಷವಾಗಿ ಈ ದೇಶದ ಜನಸಂಖ್ಯೆಯ ಶೇಕಡಾ 12 ರಷ್ಟಿರುವ ಮುಸ್ಲಿಮರು ವಿದೇಶಿಯರೆಂದೂ, ದೇಶದ ಉದ್ಯೋಗಾವಕಾಶಗಳ ಮತ್ತು ಸಂಪನ್ಮೂಲಗಳ ಒಂದು ಭಾಗವು ಅವರ ಪಾಲಾಗಿರುವುದರಿಂದಲೇ ನಿರುದ್ಯೋಗ ಸಮಸ್ಯೆ ಬೆಳೆಯುತ್ತಿದೆ ಎಂದೂ ಅವರು ಪ್ರಚಾರ ಮಾಡುತ್ತಿದ್ದಾರೆ. ಹತಾಶ ನಿರುದ್ಯೋಗಿ ಯುವಕರು ಅದನ್ನು ನಂಬುತ್ತಾರೆ. ಈ ವಿದೇಶಿಯರನ್ನು ದೇಶದಿಂದ ಓಡಿಸಿ ಬಿಟ್ಟರೆ ತಮಗೆ ಉದ್ಯೋಗಾವಕಾಶ ಮತ್ತು ಸಮೃದ್ಧಿ ದೊರೆಯುವುದೆಂದು ಅವರು ಭಾವಿಸುತ್ತಾರೆ.

ಕೋಮುವಾದವು ಫ್ಯಾಸಿಸಂನ ಭಾರತೀಯ ರೂಪ. ಫ್ಯಾಸಿಸಂನ ಕೆಲವು ಲಕ್ಷಣಗಳನ್ನು ಪರಿಶೀಲಿಸಿದರೆ, ಭಾರತದ ಕೋಮುವಾದದೊಂದಿಗೆ ಅವುಗಳು ಹೊಂದಿರುವ ಸಾಮ್ಯತೆಗಳು ಸ್ಪಷ್ಟವಾಗಬಹುದು:

- ರಾಷ್ಟ್ರೀಯ ಅವಮಾನವನ್ನು ಸರಿಪಡಿಸುವ ಘೋಷಣೆಯನ್ನು ಫ್ಯಾಸಿಸ್ಟರು ಜನತೆಯ ಮುಂದಿಡುತ್ತಾರೆ. (ಮಂದಿರ ಒಡೆದು ಮಸೀದಿ ಕಟ್ಟಿದರು ಎಂಬ ಪ್ರಚಾರ)
- ಒಬ್ಬ ರಾಷ್ಟ್ರೀಯ ಶತ್ರುವನ್ನು ಸೃಷ್ಟಿಸುತ್ತಾರೆ. ಆ ಶತ್ರುವೇ ದೇಶದ ಎಲ್ಲಾ ಸಂಕಷ್ಟಗಳಿಗೂ ಕಾರಣ ಎಂದು ಪ್ರಚಾರ ಮಾಡುತ್ತಾರೆ.
- ಒಂದು ಜನಾಂಗ ಅಥವಾ ಧರ್ಮದ ಹೆಸರಿನಲ್ಲಿ ಕಾರ್ಯಾಚರಣೆ ಮಾಡುತ್ತಾರೆ.
- ದೇಶದಲ್ಲಿ ಯುದ್ಧೋನ್ಮಾದವನ್ನು ಹುಟ್ಟಿಸುತ್ತಾರೆ.
- ಸುಳ್ಳು ಹೇಳುವುದು ಫ್ಯಾಸಿಸ್ಟರ ಪ್ರಮುಖ ಲಕ್ಷಣ. ಒಂದು ಸುಳ್ಳನ್ನು ಅನೇಕ ಬಾರಿ ಹೇಳಿದರೆ ಅದು ಸತ್ಯವಾಗುತ್ತದೆ ಎಂಬ ಗೋಬೆಲ್ಸನ ಸಿದ್ಧಾಂತ.
- ಫ್ಯಾಸಿಸಂ ಜನಗಳನ್ನು ಅತ್ಯಂತ ಭ್ರಷ್ಟರಾದ, ಹಣಕ್ಕಾಗಿ ಏನನ್ನಾದರೂ ಮಾಡಲು ಹೇಸದ ವ್ಯಕ್ತಿಗಳ ಮರ್ಜಿಗೆ ತಳ್ಳಿ, ಜನ ಸಮೂಹಗಳ ಆಳವಾದ ಭ್ರಮನಿರಸನದ ಲಾಭ ಪಡೆದು, ಒಂದು ಪ್ರಾಮಾಣಿಕವಾದ ಹಾಗೂ ಭ್ರಷ್ಟವಲ್ಲದ ಸರಕಾರ ಬೇಕೆಂಬ ಒತ್ತಾಯದೊಂದಿಗೆ ಜನಗಳ ಮುಂದೆ ಬರುತ್ತದೆ.



ವರ್ಣಾಶ್ರಮ ಧರ್ಮದ ದಮನಕಾರಿ ಸಾಮಾಜಿಕ ವ್ಯವಸ್ಥೆಯ ಮೂಲಕ ಸಮಾಜದ ಕೆಳಸ್ತರದ ಜನರನ್ನು ಪ್ರಾಣಿಗಳಿಗಿಂತಲೂ ಕೀಳಾಗಿ ಪರಿಗಣಿಸುತ್ತಿದ್ದ ಪುರೋಹಿತಶಾಹಿಗಳಿಂದ ನಿಯಂತ್ರಿಸಲ್ಪಡುತ್ತಿರುವ ಸಂಘ ಪರಿವಾರವು ಇಂದು ದಲಿತರ, ಆದಿವಾಸಿಗಳ ಮತ್ತು ಹಿಂದುಳಿದ ವರ್ಗಗಳ ಹಿತರಕ್ಷಕರ ಸೋಗು ಹಾಕಿಕೊಂಡು ಅವರ ಕೆಲವು ವಿಭಾಗಗಳನ್ನು ತಮ್ಮ ಪ್ರಭಾವದಲ್ಲಿ ಇಟ್ಟುಕೊಳ್ಳುವುದರಲ್ಲಿ ಯಶಸ್ವಿಯಾಗಿರುವುದು ಚರಿತ್ರೆಯ ಒಂದು ದುರಂತ.

ಸಂಘ ಪರಿವಾರದ ಆರ್ಥಿಕ ಕಾರ್ಯಕ್ರಮಗಳೇನು? ಕೃಷಿಯನ್ನು ಅವಲಂಬಿಸಿರುವ ಕೋಟಿಗಟ್ಟಲೆ ಭೂರಹಿತರಿಗೆ ಭೂಮಿ ಒದಗಿದಸಲು ಸಮಗ್ರ ಭೂ ಸುಧಾರಣೆಯನ್ನು ಅವರು ಜಾರಿಗೊಳಿಸುವರೇ? ಭೂಮಾಲಕರ ಹೆಚ್ಚುವರಿ ಭೂಮಿಯನ್ನು ಬಡರೈತರಿಗೂ ಕೃಷಿ ಕಾರ್ಮಿಕರಿಗೂ ಹಂಚುವರೆ? ಬಡತನ ನಿವಾರಣೆಗಾಗಿ, ನಿರುದ್ಯೋಗ ನಿವಾರಣೆಗಾಗಿ ಅವರ ಕಾರ್ಯಕ್ರಮಗಳೇನು? ವರ್ತಕ ಬಂಡವಾಳಶಾಹಿಗಳ ಪ್ರಭಾವದಲ್ಲಿರುವ ಸಂಘ ಪರಿವಾರದವರು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಎಲ್ಲಾ ಅವಶ್ಯಕ ಸಾಮಗ್ರಿಗಳನ್ನು ಸಾಕಷ್ಟು ಪ್ರಮಾಣದಲ್ಲಿ ಕಡಿಮೆ ಬೆಲೆಗೆ ಜನರಿಗೆ ವಿಸ್ತರಿಸುವರೆ? ಕಾರ್ಮಿಕ ವರ್ಗಕ್ಕೆ ಅವಶ್ಯಕತೆ ಆಧಾರಿತ ಕನಿಷ್ಟ ವೇತನ ನೀಡುವರೆ? ಕುಡಿಯುವ ನೀರಿನ ಸರಬರಾಜನ್ನು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಹಸ್ತಾಂತರಿಸಲು ಸರಕಾರವು ಸಿದ್ಧತೆ ನಡೆಸುತ್ತಿರುವಾಗ, ಉಪವಾಸದಿಂದ ಸಾಯುತ್ತಿರುವ ಬಡವರಿಗೆ ಒಂದು ಗುಟುಕು ನೀರು ನೀಡುವರೆಂಬ ಖಾತ್ರಿ ಇದೆಯೆ? ಈ ಪ್ರಶ್ನೆಗಳಿಗೆ ಉತ್ತರ ಇಲ್ಲವೆಂದಾದರೆ ಕೋಮುವಾದಿಗಳಿಗೆ ಹಾಕಿ ಧಿಕ್ಕಾರ!

> **ಧರ್ಮಕ್ಕೂ ಭಯೋತ್ಪಾದನೆಗೂ ಇರುವ ಸಂಬಂಧ ನೇಪಮಾತ್ರ. ಜಾಗತೀಕರಣದ ವಿರುದ್ಧದ ಕಾರ್ಮಿಕವರ್ಗದ ಹೋರಾಟ, ಐಕ್ಯತೆ ಒಡೆಯುವ ಶಕ್ತಿಗಳಿವೆ**

ಪಟ್ಟಭದ್ರ ಹಿತಾಸಕ್ತಿಗಳ ಬೆಂಬಲದಿಂದ ಬೆಳೆಯುತ್ತಿರುವ ಸಂಘ ಪರಿವಾರಕ್ಕೆ ಜನಸಾಮಾನ್ಯರ ಸಮಸ್ಯೆಗಳ ಪರಿಹಾರಕ್ಕೆ ಯಾವುದೇ ಕಾರ್ಯಕ್ರಮವಿಲ್ಲ. ಅಲ್ಪಸಂಖ್ಯಾತ ಮುಸ್ಲಿಂ ಮತ್ತು ಕ್ರೈಸ್ತ ಸಮುದಾಯಗಳ ವಿರುದ್ಧ ಬಹುಸಂಖ್ಯಾತ ಹಿಂದುಗಳ ಭಾವನೆಗಳನ್ನು ಕೆರಳಿಸುವ ಮೂಲಕ ಅವರು ಜನಬೆಂಬಲ ಗಳಿಸಿದರು. ಕೋಮು ಗಲಭೆಗಳ ಸಂದರ್ಭದಲ್ಲಿ ಕೋಮು ದ್ವೇಷಗಳು ಆಳವಾಗಿ ಹರಡುತ್ತದೆ. ಅಭೂತಪೂರ್ವ ರಕ್ತಪಾತ, ಸಾವಿರಗಟ್ಟಲೆ ಮುಗ್ಧರ ಹತ್ಯೆ, ಅಂಗಡಿಗಳ ಲೂಟಿ, ಮನೆಗಳಿಗೆ ಕಿಚ್ಚಿಡುವುದು, ಮಹಿಳೆಯರ ಮೇಲೆ ದೌರ್ಜನ್ಯ, ಚಾರಿತ್ರಿಕ ಸ್ಮಾರಕಗಳ ನಾಶ ಮತ್ತು ಅನೈತಿಕ ಕ್ರಮಗಳು ಅವರನ್ನು ಅಧಿಕಾರದ ಸ್ಥಾನಕ್ಕೆ ಏರಿಸಿದರು. ಗುಜರಾತಿನಲ್ಲಿ ನರಮೇಧ ನಡೆಸಿದ ನಂತರ ಅಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಭಾರೀ ಬಹುಮತದಿಂದ ಗೆದ್ದಾಗ ತಮ್ಮ ಕರಾಳ ಕೃತ್ಯಗಳಿಗೆ ಜನತೆಯ ಮಾನ್ಯತೆ ದೊರಕಿದೆ ಎಂಬ ಭ್ರಮೆ ಅವರನ್ನು ಆವರಿಸಿತು.

ಹಿಂದೂ ಮತ್ತು ಮುಸ್ಲಿಂ ಕೋಮುವಾದಗಳೆರಡನ್ನೂ ಎದುರಿಸಿ ಸೋಲಿಸಲು ಧರ್ಮನಿರಪೇಕ್ಷ ಶಕ್ತಿಗಳ ಜತೆಗೆ ಕೈಜೋಡಿಸಬೇಕಾದ ಇಂದಿನ ಸನ್ನಿವೇಶದಲ್ಲಿ ಮುಸ್ಲಿಂ ಸಮುದಾಯದ ಒಂದು ವಿಭಾಗವು ಮೂಲಭೂತವಾದಿಗಳ ಪ್ರಭಾವಕ್ಕೆ ಒಳಗಾಗಿ ತನ್ನ ಸಮುದಾಯವನ್ನು ಪ್ರಜಾಸತ್ತಾತ್ಮಕ ಚಳುವಳಿಯಿಂದ ಹೊರಗಿಡುವ ಪ್ರಯತ್ನ ಮಾಡುತ್ತಿರುವುದು ಒಂದು ಅಪಾಯಕಾರಿ ಪ್ರವೃತ್ತಿಯಾಗಿದೆ. ಈ ಪ್ರವೃತ್ತಿಯಿಂದ ಮುಸ್ಲಿಂ ಸಮುದಾಯದ ಹಿತರಕ್ಷಣೆ ಮಾಡುವ ಬದಲು ಅವರನ್ನು ಕೋಮುವಾದಿ ಭಯೋತ್ಪಾದಕ ದಾಳಿಗಳಿಗೆ ಗುರಿಪಡಿಸುತ್ತದೆ.

21 ನೇ ಶತಮಾನ ವಿಜ್ಞಾನದ ಶತಮಾನ. ವಿಜ್ಞಾನದ ಪ್ರಗತಿಯೊಂದಿಗೆ ಭಾರತ ದಾಪುಗಾಲು ಹಾಕಲು ಸಾಧ್ಯವಾಗಬೇಕಾದರೆ, ದೇಶದ ಭವಿಷ್ಯವನ್ನು ರೂಪಿಸುವ ಚಾರಿತ್ರಿಕ ಹೊಣೆ ಹೊತ್ತಿರುವ ಕಾರ್ಮಿಕ ವರ್ಗ ಎಲ್ಲಾ ಕಂದಾಚಾರಗಳ ಮತ್ತು ಅವೈಜ್ಞಾನಿಕ ಪ್ರವೃತ್ತಿಗಳ ವಿರುದ್ಧ ಹೋರಾಡಬೇಕು. ಕಾರ್ಮಿಕ ವರ್ಗದ ಮುನ್ನಡೆಯ ಮುಂದೆ ಹೆಬ್ಬಂಡೆಯಂತೆ ನಿಂತಿರುವ ಕೋಮುವಾದವನ್ನು ಸೋಲಿಸಬೇಕಾದರೆ ಕಾರ್ಮಿಕರಲ್ಲಿ ವೈಜ್ಞಾನಿಕ ಮನೋಭಾವವನ್ನು ಬೆಸೆಯಬೇಕು.

ಭಾರತದಲ್ಲಿ ಹುಟ್ಟಿದ ಪ್ರತಿಯೊಂದು ಮಗುವೂ ನಮ್ಮ ಸಂವಿಧಾನದ ಪ್ರಕಾರ ಈ ದೇಶದ ಪ್ರಜೆ. ಆತ ಯಾವುದೇ ಮತಕ್ಕೆ ಸೇರಿದವರ ಮಗನಾಗಿ ಹುಟ್ಟಿದ್ದು ಆಕಸ್ಮಿಕ. ಅದು ಆತನ ಆಯ್ಕೆಯಲ್ಲ. ಹೀಗಿರುವಾಗ ಧರ್ಮದ ಆಧಾರದಲ್ಲಿ ಜನರನ್ನು ವಿಭಜಿಸುವುದು ಅಮಾನವೀಯ. ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಇಂತಹ ಭಾವನೆಗಳು ಇರಲಿಲ್ಲ. ಬ್ರಿಟೀಷರು 'ಸಿಪಾಯಿ ದಂಗೆ' ಎಂದು ಕರೆದ ಭಾರತದ ಪ್ರಥಮ ಸ್ವಾತಂತ್ರ್ಯ ಹೋರಾಟದಲ್ಲಿ ಝಾನ್ಸಿ ಲಕ್ಷ್ಮೀಬಾಯಿ, ತಾತ್ಯಾಟೋಪಿಯಂತೆ ಬಹಾದ್ದೂರ್ ಷಾ ಜಫರ್‌ನ ಪಾತ್ರವೂ ಉಜ್ವಲವಾದದ್ದು. ಸ್ವಾತಂತ್ರ್ಯ ಹೋರಾಟದಲ್ಲಿ ಎಲ್ಲಾ ಧರ್ಮಗಳ ಜನರೂ ಜೀವನ ಹಂಗು ತೊರೆದು ಹೋರಾಡಿ ಬಲಿದಾನ ಮಾಡಿದ್ದಾರೆ. ಭಾರತದ ಕಾರ್ಮಿಕ ವರ್ಗದ ಚಳುವಳಿಯನ್ನು ಕಟ್ಟಿ ಬೆಳೆಸಿದ ಮಹಾನ್ ನಾಯಕರಲ್ಲಿ ಲಾಲಾ ಲಜಪತ್ ರಾಯ್, ದಿವಾನ್ ಚಮನ್‌ಲಾಲ್ ಮೊದಲಾದವರಂತೆಯೇ ಮುಜಾಫರ್ ಅಹಮದ್, ಶೈಕತ್ ಉಸ್ಮಾನಿ, ಜೋಸೆಫ್ ಬಾಪ್ಟಿಸ್ಟರಾ ಮೊದಲಾದವರೂ ಅಪಾರ ತ್ಯಾಗ, ಬಲಿದಾನಗಳನ್ನು ಮಾಡಿದ್ದಾರೆ. 1930 ರಲ್ಲಿ ಪೇಶಾವರದಲ್ಲಿ ಚಳುವಳಿ ನಡೆಸುತ್ತಿದ್ದ ಮುಸ್ಲಿಂ ರೈತರ ಮೇಲೆ ಗುಂಡು ಹಾರಿಸಲು ಬ್ರಿಟೀಷ್ ಸೇನಾಧಿಕಾರಿಗಳು ಆದೇಶ ನೀಡಿದಾಗ, ಆ ಕ್ರೂರ ಆದೇಶವನ್ನು ಧಿಕ್ಕರಿಸಿ ರೈತರೊಂದಿಗೆ ಕೈಜೋಡಿಸಿದ ಗರ್‌ವಾಲಿ ರೆಜಿಮೆಂಟಿನ ಹಿಂದೂ ಸೈನಿಕರು, ಕೋರ್ಟ್ ಮಾರ್ಶಲ್‌ಗೆ ಒಳಗಾಗಿ ಉಗ್ರ ಶಿಕ್ಷೆಗೆ ಗುರಿಯಾದರೂ, ಕೋಮು ಭಾವನೆ ಅವರ ಹತ್ತಿರ ಸುಳಿದಿರಲಿಲ್ಲ.

ಇದು ನಮ್ಮೆಲ್ಲರ ದೇಶ ಎಂಬ ಅಭಿಮಾನದಿಂದ ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಭವ್ಯ ಪರಂಪರೆಗೆ ಇಂದು ಕೋಮುವಾದಿಗಳು ಕಳಂಕ ಹಚ್ಚುತ್ತಿದ್ದಾರೆ. ಆ ಮೂಲಕ ಸಾವಿರಗಟ್ಟಲೆ ಹುತಾತ್ಮರಿಗೆ ದ್ರೋಹ ಮಾಡುತ್ತಿದ್ದಾರೆ.

ಐಕ್ಯ ಮತ್ತು ಬಲಿಷ್ಠ ಹೋರಾಟಗಳ ಮೂಲಕ ಜಾಗತೀಕರಣದ ದಾಳಿಗಳನ್ನು ಹಿಮ್ಮೆಟ್ಟಿಸಬೇಕಾಗಿರುವ ದೇಶಪ್ರೇಮಿ ಚಳುವಳಿಗಳಿಗೆ ಕಾರ್ಮಿಕ ವರ್ಗ ಮತ್ತು ಸಮಸ್ತ ಜನತೆ ಸಜ್ಜುಗೊಳ್ಳಬೇಕಾದ ಸನ್ನಿವೇಶದಲ್ಲಿ ಜನರ ಐಕ್ಯತೆಯನ್ನು ಒಡೆಯುವ ಕೋಮುವಾದಿಗಳ ಹುನ್ನಾರವು ದೇಶದ್ರೋಹವಲ್ಲದೆ ಮತ್ತೇನಲ್ಲ.

ಸಿಐಟಿಯು ಮನುಷ್ಯರನ್ನು ಮನುಷ್ಯರೆಂದು ಮಾತ್ರವೇ ಪರಿಗಣಿಸುತ್ತದೆ. ಧರ್ಮ, ಜಾತಿ, ಪಂಗಡಗಳು ವೈಯಕ್ತಿಕ ವಿಷಯಗಳು. ಅವುಗಳನ್ನು ರಾಜಕೀಯ ಉದ್ದೇಶಗಳಿಗೆ, ಕಾರ್ಮಿಕ ಚಳುವಳಿಯನ್ನು ಒಡೆಯುವ ಉದ್ದೇಶಗಳಿಗೆ ಬಳಸುವುದನ್ನು ಸಿಐಟಿಯು ಬಲವಾಗಿ ವಿರೋಧಿಸುತ್ತದೆ. ದೇಶದ ಕಾರ್ಮಿಕ ವರ್ಗ ನೆಮ್ಮದಿಯಿಂದ ಬದುಕುವಂತಾಗಲು ಕೋಮುವಾದ ಅಳಿಯಬೇಕು.

ಐಕ್ಯರಂಗ


ಸಿಇಟಿ ಸಮಸ್ಯೆಗೆ ವಾಸ್ತುದೋಷ ಕಾರಣ ?

ಡಿಕೇಶಿ ಪ್ರದರ್ಶಿಸಿದ ಪ್ರಚಂಡ ಅ'ಜ್ಞಾನ'

ಸಿಇಟಿ ಪದ್ಧತಿ ಕೆಡಲು ವಾಸ್ತುದೋಷ ಕಾರಣವೆಂದು ಹೇಳುವ ಮೂಲಕ ಕರ್ನಾಟಕ ಸರ್ಕಾರದ ನಗರಾಭಿವೃದ್ಧಿ ಸಚಿವ ಡಿ.ಕೆ.ಶಿವಕುಮಾರ್ ತಮ್ಮ ಅಜ್ಞಾನವನ್ನು ಪ್ರದರ್ಶಿಸಿದ್ದಾರೆ. ಇತ್ತೀಚೆಗೆ ಎಂ.ಎ. ಪರೀಕ್ಷೆಗೆ ಬರೆದುದು ಬಹುಶಃ ಸುಮ್ಮನೇ ಪ್ರಚಾರ ಗಿಟ್ಟಿಸಿಕೊಳ್ಳಲು; ಜ್ಞಾನ ಹೆಚ್ಚಿಸಿಕೊಳ್ಳಲು ಅಲ್ಲ ಎಂಬುದು ಯಾರಿಗಾದರೂ ತಿಳಿಯುತ್ತದೆ.

ಈಗಾಗಲೇ ಅತ್ಯಂತ ಶ್ರೀಮಂತರ ಮಕ್ಕಳ ಕೈಗೆ ಮಾತ್ರ ಎಟುಕುವ ಪ್ರಾಥಮಿಕ ಮತ್ತು ಪ್ರೌಢ ವಿದ್ಯಾ ಸಂಸ್ಥೆಯನ್ನು ಸ್ಥಾಪಿಸಿರುವ ಡಿಕೇಶಿ ಅವರು ಇಂಜನಿಯರಿಂಗ್ ಕಾಲೇಜು ಪ್ರಾರಂಭಿಸಿದ್ದಾರೆಂದು ಪ್ರಚಾರವಿದೆ. ಮುಂದಿನ ವರ್ಷ ಮೆಡಿಕಲ್ ಕಾಲೇಜು, ಡೆಂಟಲ್ ಕಾಲೇಜು ಆರಂಭಿಸುವ ಆಲೋಚನೆ ಇರಬೇಕು. ಈಗಾಗಲೇ ಸುಪ್ರಿಂಕೋರ್ಟ್‌ನ ತೀರ್ಪಿನ ಬೆಂಬಲ ಪಡೆದಿರುವ ಖಾಸಗಿ ಶಿಕ್ಷಣ ಸಂಸ್ಥೆಗಳು ಮುಂದಿನ ವರ್ಷದಿಂದ ಸಿಇಟಿ ಪದ್ಧತಿಯೇ ಇಲ್ಲದಂತೆ ಮಾಡುವ ಪ್ರಯತ್ನ ನಡೆಯುತ್ತಿದೆ. ಆದ್ದರಿಂದಲೇ ಖಾಸಗಿ ಲಾಬಿಗಳ ವಕ್ತಾರ ಶಿವಕುಮಾರ್ ವಾಸ್ತುದೋಷದ ಮೇಲೆ ಆಪಾದನೆ ಆರಂಭಿಸಿದ್ದಾರೆ.

ಭಾರತದ ಸಂವಿಧಾನದ ಭಾಗ 4ಎ ಪ್ರಕಾರ 'ವೈಜ್ಞಾನಿಕ ಮನೋಭಾವನೆ, ಮಾನವೀಯತೆ.... ಇವುಗಳನ್ನು ಅಭಿವೃದ್ಧಿಗೊಳಿಸುವುದು' ಮೂಲಭೂತ ಕರ್ತವ್ಯಗಳಲ್ಲಿ ಒಂದು. ಆದರೆ ಸಂವಿಧಾನದ ಮೇಲೆ ಪ್ರತಿಜ್ಞೆ ಮಾಡಿ ಅಧಿಕಾರ ಸ್ವೀಕರಿಸಿದ ಶಿವಕುಮಾರ್ ಅವರು ವೈಜ್ಞಾನಿಕ ಮನೋಭಾವನೆ ಹೆಚ್ಚಿಸುವ ಬದಲಾಗಿ ಅದನ್ನು ಕುಂಠಿತಗೊಳಿಸಲು, ಜನರ ಹಾದಿ ತಪ್ಪಿಸಲು ಪ್ರಯತ್ನಿಸುತ್ತಿದ್ದಾರೆ. ಅಂದರೆ ವೈಜ್ಞಾನಿಕ ವಿಚಾರಧಾರೆಯನ್ನು ಪೋಷಿಸಬೇಕಾದ ಮಂತ್ರಿಗಳು ಸಂವಿಧಾನಕ್ಕೆ ಅಪಚಾರ ಎಸಗುತ್ತಿದ್ದಾರೆ. ಕೆಲವು ತಿಂಗಳುಗಳ ಹಿಂದೆ ಕರ್ನಾಟಕ ಸರ್ಕಾರದ ಮುಜರಾಯಿ ಇಲಾಖೆ, ಮಳೆ ಭರಿಸಲಿಕ್ಕಾಗಿ ಪೂಜೆ ನಡೆಸಬೇಕೆಂದು ಆದೇಶ ಹೊರಡಿಸಿತ್ತು. ನಂತರ ಇದೇ ಸರ್ಕಾರ ಸಾಧಾರಣ 5 ಕೋಟಿ ರೂ. ಖರ್ಚು ಮಾಡಿ ಮೋಡ ಬಿತ್ತರೆ ನಡೆಸುವ ತಂತ್ರಜ್ಞಾನಕ್ಕೆ ಮೊರೆ ಹೊಕ್ಕಿದೆ. ವಿಜ್ಞಾನಕ್ಕೂ ಅಜ್ಞಾನಕ್ಕೂ ಎಲ್ಲಿಯ ಸಂಬಂಧ?



ಯಾವುದೇ ದೋಷಗಳಿಗೆ ವೈಜ್ಞಾನಿಕವಾಗಿ ಆಲೋಚಿಸಿ ಪರಿಹಾರ ಕಂಡುಕೊಳ್ಳದೆ ಮೌಢ್ಯಗಳ ಮೇಲೆ ಗೂಬೆ ಕೂರಿಸುವುದು ಯಾವ ನ್ಯಾಯ? ರೈತರ ಆತ್ಮಹತ್ಯೆಗಳಿಗೆ ಮೂಲಭೂತ ಕಾರಣಗಳನ್ನು ಕಂಡುಹಿಡಿದು ಅದಕ್ಕೆ ಪರಿಹಾರ ನೀಡುವ ಬದಲು ಅದು ಅವರ ಪೂರ್ವಜನ್ಮದ ಕರ್ಮ ಎಂತಲೋ, ಅವನ ಹಣೆಬರಹ ಎಂತಲೋ 'ಬ್ರಾಂಡು' ಮಾಡಿದರೆ ಎಷ್ಟು ಸರಿ? ಜೋತಿಷ್ಯ ಶಾಸ್ತ್ರವನ್ನು ಪಠ್ಯಪುಸ್ತಕದಲ್ಲಿ ಅಳವಡಿಸಬೇಕೆನ್ನುವ ಬಿಜೆಪಿಯವರಿಗೂ, ಸಿಇಟಿ ತೊಂದರೆಗಳಿಗೆ ವಾಸ್ತು ದೋಷವೇ ಕಾರಣ ಎನ್ನುವ ಕಾಂಗ್ರೆಸ್‌ಗೂ ಏನು ವ್ಯತ್ಯಾಸ?

ಗಾಂಧೀಜಿ ಒಂದೆಡೆ ಹೇಳುತ್ತಾರೆ "ದುರದೃಷ್ಟದಿಂದ, ಮಾನವನ ಪ್ರಗತಿಗೆ ಅವಶ್ಯಕವಾದ ವಿಜ್ಞಾನವನ್ನು ರಾಜಕೀಯ ದುಷ್ಟನ ಹಾಗೂ ವ್ಯಾಪಾರ ಶೋಷಕನ ಕೈಯ ಸಾಧನವನ್ನಾಗಿ ಮಾಡಲಾಗಿದೆ. ಇದು ಮನುಕುಲದ ಪೂರ್ಣ ಸುಖದ ಆಧಾರ ಸ್ತಂಭವಾದ ಮಾನವೀಯ ಲಕ್ಷಣವನ್ನೇ ಮರೆಸಿಬಿಟ್ಟಿದೆ" ಎಂದಿದ್ದಾರೆ. ಆ ಗಾಂಧಿ ತಾತನ ಫೋಟೋ ಇಟ್ಟುಕೊಂಡು, ವೋಟು ಕೇಳುವ ಇವರು, ಗಾಂಧಿ ಹೇಳಿದ ವೈಜ್ಞಾನಿಕ ಅಂಶವನ್ನೇ ಮರೆತು ಬಿಡುತ್ತಿದ್ದಾರೆ.

ರಾಜ್ ಅಪಹರಣ, ನಾಗಪ್ಪ ಅಪಹರಣ ಯಾಕೆ ಆಯಿತೆಂದು ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ, ಜೊತೆಯಲ್ಲಿ ಸರ್ಕಾರದ ವಿಫಲತೆಯನ್ನು ಇದು ಎತ್ತಿ ತೋರಿಸಿದೆ. ಕಾವೇರಿ ವಿವಾದಕ್ಕೆ ಸಕಾಲದಲ್ಲಿ ಮಳೆ ಬಾರದೆ ಇದ್ದುದು ಒಂದು ಕಾರಣವಾದರೆ, ಎರಡು ರಾಜ್ಯಗಳ ಮುಖ್ಯಮಂತ್ರಿಗಳು ತಮ್ಮ ಕುರ್ಚಿಯ ಭದ್ರತೆಗಾಗಿ, ಜನರನ್ನು ಹಾದಿ ತಪ್ಪಿಸಿದ್ದು ಇನ್ನೊಂದು ಕಾರಣ. ಅದು ಎಲ್ಲರಿಗೂ ತಿಳಿದಿರುವಾಗ, ದಕ್ಷಿಣ ಬ್ಲಾಕ್ ಕಟ್ಟಡ ಕಟ್ಟುವಾಗ ಹಳ್ಳ ತೋಡಿದ್ದು ಸರಿಯಾಗಿಲ್ಲ ಎಂದು ಹೇಳುವುದು ಎಷ್ಟು ಸರಿ?

ಮುಖ್ಯಮಂತ್ರಿ ಎಸ್.ಎಂ.ಕೃಷ್ಣರವರ ಬಲಗೈ ಭಂಟ, ಡಿ.ಕೆ.ಶಿವಕುಮಾರ್ ಅವರಿಗೊಂದು ಕಿವಿಮಾತು 'ಕೋಟು ಇರುವವರಿಗೆ ಮಾತ್ರ ನೋಟು ಸಿಗುವಂತೆ ಮಾಡುವ ನಿಮ್ಮ ಸರ್ಕಾರದ ನೀತಿ ಇದೇ ರೀತಿ ಮುಂದುವರಿದರೆ, ಮುಂದಿನ ಚುನಾವಣೆಯಲ್ಲಿ ಖಂಡಿತ ನೀವು ಅಧಿಕಾರಕ್ಕೆ ಬರುವುದಿಲ್ಲ, ಆಗ ಪುನಃ ದಕ್ಷಿಣ ಬ್ಲಾಕ್ ಕಟ್ಟಡದ ವಾಸ್ತುವಿನ ಮೇಲೆ ದೋಷ ಹೊರಿಸಬೇಡಿ. ಬದಲಾಗಿ ನೊಂದ ರೈತಾಪಿ, ಜನಸಾಮಾನ್ಯರು ನಿಮ್ಮ ವಿರುದ್ಧ ತಿರುಗಿ ಬಿದ್ದಿದ್ದಾರೆ ಎಂದು ಎಚ್ಚೆತ್ತುಕೊಳ್ಳಿ.

- ಬಾಲಕೃಷ್ಣ ಶೆಟ್ಟಿ



ಕಾರ್ಮಿಕ ವರ್ಗದ....

ಪುಟ 7 ರಿಂದ

ವರ್ಗದ ಹಿತರಕ್ಷಣೆ ಮಾಡುತ್ತಿದೆ. ದುಡಿಯುವ ವರ್ಗವು ತನ್ನ ಹಕ್ಕುಗಳನ್ನು ಪ್ರತಿಪಾದಿಸುತ್ತಾ ಮುನ್ನಡೆದಂತೆ, ವರ್ಗಹೋರಾಟಗಳು ತೀವ್ರಗೊಳ್ಳುತ್ತಿವೆ. ಕಳೆದ 33 ವರ್ಷಗಳಲ್ಲಿ ಪಶ್ಚಿಮ ಬಂಗಾಳದಲ್ಲಿ ವರ್ಗ ಹೋರಾಟಗಳಲ್ಲಿ ದುಡಿಯುವ ಜನತೆಯ ಐದು ಸಾವಿರದಷ್ಟು ಕಾರ್ಯಕರ್ತರು ಹುತಾತ್ಮರಾಗಿದ್ದಾರೆ. ದೇಶದಲ್ಲಿ ಬಡವಾಳಶಾಹಿ-ಭೂಮಾಲಿಕ ವರ್ಗಗಳ ಆಳ್ವಿಕೆ ಇರುವಷ್ಟು ಕಾಲ ವರ್ಗ ಹೋರಾಟಗಳಲ್ಲಿ ಈ ರೀತಿಯ ಹಿಂಸಾತ್ಮಕ ದಾಳಿಗಳನ್ನು ದುಡಿಯುವ ವರ್ಗ ಎದುರಿಸಬೇಕಾಗುತ್ತದೆ.

ಪ್ರತಿಗಾಮಿ ಶಕ್ತಿಗಳ ಹಣಬಲ ಮತ್ತು ತೋಳ್ಬಲವನ್ನು ಸಮರ್ಥವಾಗಿ ಎದುರಿಸಿ ಪ್ರತೀ ಚುನಾವಣೆಯಲ್ಲೂ ಹೆಚ್ಚು ಹೆಚ್ಚು ಜನಬೆಂಬಲ ಗಳಿಸುತ್ತಿರುವ ಕಾರ್ಮಿಕ ವರ್ಗದ ರಾಜಕೀಯ ಪಕ್ಷವಾದ ಸಿಪಿಐ(ಎಂ) ಇಡೀ ದೇಶದ ಕಾರ್ಮಿಕ ವರ್ಗಕ್ಕೆ ಸ್ಫೂರ್ತಿ ನೀಡುವ ಜನಪರವಾದ ಸರಕಾರವನ್ನು ಪಶ್ಚಿಮ ಬಂಗಾಳದಲ್ಲಿ ನಡೆಸುತ್ತಿದೆ. ಪಶ್ಚಿಮ ಬಂಗಾಳದ ಸಿಐಟಿಯು ಕಾರ್ಯಕರ್ತರು ಹರಿಸಿದ ರಕ್ತ ವ್ಯರ್ಥವಾಗಿಲ್ಲ.

ಕೇರಳದಲ್ಲಿ ಎಡಪ್ರಜಾಪ್ರಭುತ್ವ ರಂಗ ಮತ್ತು ತ್ರಿಪುರದಲ್ಲಿ ಎಡರಂಗವನ್ನು ಸ್ಥಾಪಿಸಲು ಕಾರ್ಮಿಕ ವರ್ಗವನ್ನು ಅಣಿನೆರೆಸಿದ ಸಿಐಟಿಯು, ಆ ರಾಜ್ಯಗಳಲ್ಲಿ ಕಾರ್ಮಿಕರ ಹಕ್ಕುಗಳ ರಕ್ಷಣೆಗಾಗಿ ಅತ್ಯಂತ ಪರಿಣಾಮಕಾರಿಯಾಗಿ ದುಡಿಯುತ್ತಿದೆ.

ಸಿಐಟಿಯು ಸ್ಥಾಪನಾ ಸಮ್ಮೇಳನದಲ್ಲಿ ಕಾಮ್ರೇಡ್ ಬಿ.ಟಿ.ರಣದಿವೆಯವರು ವ್ಯಕ್ತಪಡಿಸಿದ ಆಶಯಗಳನ್ನು ಕಾರ್ಯರೂಪಕ್ಕೆ ತರಬೇಕಾದರೆ ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರಾದ ಸಿಐಟಿಯು ಸಂಗಾತಿಗಳು ಮುನ್ನಡೆಯುತ್ತಿರುವ ಸಮರಶೀಲ ಹೋರಾಟಗಳ ದಾರಿಯಲ್ಲಿ ಇತರ ಎಲ್ಲಾ ರಾಜ್ಯಗಳ ಸಂಗಾತಿಗಳೂ ದೃಢವಾದ ಹೆಜ್ಜೆಗಳನ್ನಿಡಬೇಕಾಗಿದೆ. ವರ್ಗಹೋರಾಟದ ದಾರಿ ದುರ್ಗಮವಾದದ್ದು. ಈ ದಾರಿಯ ಒಂದೊಂದು ತಿರುವಿನಲ್ಲೂ ಕಾರ್ಮಿಕ ವರ್ಗದ ಶತ್ರುಗಳು ಅವಿತಿರುತ್ತಾರೆ. ಆದರೆ ಕಾರ್ಮಿಕ ವರ್ಗಕ್ಕೆ ಬೇರೆ ದಾರಿ ಇಲ್ಲ. ಬೇರೆ ದಾರಿ ಇರುವುದಿದ್ದರೆ ಅದು ವರ್ಗ ಸಖ್ಯತೆಯ ದಾರಿ. ಅದು ಕಾರ್ಮಿಕ ವರ್ಗದ ಕೈಕಾಲು ಕಟಿಟಿ ಬಂಡವಾಳಶಾಹಿಯ ಕಾಲ ಬುಡದಲ್ಲಿಡುವ ದಾರಿ. ಅಂತಹ ವಿನಾಶಕಾರಿ ದಾರಿಯನ್ನು ಸಿಐಟಿಯು 33 ವರ್ಷಗಳ ಹಿಂದೆಯೇ ತಿರಸ್ಕರಿಸಿದ್ದರಿಂದಲೇ ಇಂದು ಅದು ದೇಶದ ಕಾರ್ಮಿಕ ವರ್ಗಣದ ಆಶಾಕಿರಣವಾಗಿದೆ.


ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣಗಳ ಅನಿಷ್ಟಗಳ ವಿರುದ್ಧ ಎಲ್ಲಾ ವಿಭಾಗಗಳ ಕಾರ್ಮಿಕರನ್ನೂ, ನೌಕರರರನ್ನೂ, ರೈತಾಪಿ ಜನತೆ ಮತ್ತು ವಿದ್ಯಾರ್ಥಿ ಯುವಜನರನ್ನೂ ಐಕ್ಯ ವೇದಿಕೆಯಲ್ಲಿ ಅಣಿನೆರೆಸಿ ಹೋರಾಟಗಳನ್ನು ನಡೆಸುವುದರಲ್ಲಿ ಸಿಐಟಿಯು ಮುಂಚೂಣಿಯಲ್ಲಿದೆ. ಸಮಾನ ಬೇಡಿಕೆಗಳ ಆಧಾರದಲ್ಲಿ ಹೋರಾಡಲು ದೇಶದ ಎಲ್ಲಾ ಕಾರ್ಮಿಕ ಸಂಘಗಳ ಕಾನ್‌ಪೆಡರೇಶನ್ ರಚಿಸಬೇಕೆಂದು ಸಿಐಟಿಯು ಕರೆ ನೀಡಿದೆ. ಇಡೀ ಕಾರ್ಮಿಕ ವರ್ಗವನ್ನು ಐಕ್ಯಗೊಳಿಸುವುದು ಸಿಐಟಿಯುವಿನ ಗುರಿ. ಸಿಐಟಿಯು ಬರೇ ಒಂದು ಕಾರ್ಮಿಕ ಸಂಘಟನೆಯಲ್ಲ. ಅದು ಸಾಮಾಜಿಕ ಪರಿವರ್ತನೆಗಾಗಿ ಕಾರ್ಮಿಕ ವರ್ಗವನ್ನು ಮುನ್ನಡೆಸುವ ಒಂದು ಚಳುವಳಿ.

ಮಾನವನಿಂದ ಮಾನವನ ಶೋಷಣೆ ಇಲ್ಲದ ಹೊಸ ಸಾಮಾಜಿಕ ವ್ಯವಸ್ಥೆಯೊಂದನ್ನು ಅಸ್ತಿತ್ವಕ್ಕೆ ತರಬೇಕೆಂಬುದು ಸಿಐಟಿಯುವಿನ ಆಶಯ. ಕೂಲಿ ಮತ್ತು ಸವಲತ್ತುಗಳಲ್ಲಿ ಸುಧಾರಣೆಗಾಗಿ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಹೋರಾಡುವ ಜತೆಗೆ, ಅಂತಿಮವಾಗಿ ಕೂಲಿಯ ಗುಲಾಮಗಿರಿಯ ಪದ್ಧತಿಯನ್ನೇ ತೊಡೆದು ಹಾಕಿ, ಪ್ರತಿಯೊಬ್ಬನೂ ತನ್ನ ಸಾಮರ್ಥ್ಯಕ್ಕೆ ಅನುಗುಣವಾ ದುಡಿಯುವ ಮತ್ತು ಅದರ ಪ್ರತಿಫಲವನ್ನು ಪ್ರತಿಯೊಬ್ಬನಿಗು ಆತನ ದುಡಿಮೆಗೆ ಅನುಗುಣವಾಗಿ ಹಂಚುವ ವೈಜ್ಞಾನಿ ಸಮಾಜವಾದಿ ವ್ಯವಸ್ಥೆಯನ್ನು ಅಸ್ತಿತ್ವಕ್ಕೆ ತರುವುದ ಸಿಐಟಿಯುವಿನ ಗುರಿ. ಈ ಗುರಿ ಈಡೇರಬೇಕಾದರೆ ಇಡ ಕಾರ್ಮಿಕ ವರ್ಗವನ್ನು ಐಕ್ಯಗೊಳಿಸಬೇಕಾಗಿದೆ. ಸದ್ಯ ಪರಿಸ್ಥಿತಿಯಲ್ಲಿ ಭಾರತದ ಸಂಘಟಿತ ಕಾರ್ಮಿಕ ವರ್ಗ ಅಸಂಖ ಕಾರ್ಮಿಕ ಸಂಘಟನೆಗಳಡಿಯಲ್ಲಿ ಹಂಚಿಹೋಗಿದೆ. ಇವುಗಳ ಹೆಚ್ಚಿನವುಗಳು ಸುಧಾರಣಾವಾದಿ ಕಾರ್ಮಿಕ ಸಂಘಗಳಾಗಿದ ಅವುಗಳು ಸಾಮಾಜಿಕ ಪರಿವರ್ತನೆಯ ಗುರಿ ಹೊಂದಿಲ್ಲ ಅಸಂಘಟಿತ ಕ್ಷೇತ್ರದ ಕೋಟಿಗಟ್ಟಲೆ ಕಾರ್ಮಿಕರ ಸಂಘಟಿತರಾಗಿಲ್ಲ.

ಸಾಮಾಜಿಕ ಪರಿವರ್ತನೆಯ ಮೊದಲ ಹೆಜ್ಜೆಯಾ ಜನತಾ ಪ್ರಜಾಪ್ರಭುತ್ವವನ್ನು ಸ್ಥಾಪಿಸಬೇಕಾದರೆ ಈಗಿ ಬಂಡವಾಳಶಾಹಿ ಭೂಮಾಲಕ ಪ್ರಭುತ್ವವನ್ನು ಅಧಿಕಾರದಿಂ ಕೆಳಗಿಳಿಸಲು ಕಾರ್ಮಿಕ ವರ್ಗದ ನೇತೃತ್ವದಲ್ಲಿ ಹೋರಾ ನಡೆಸಬೇಕು. ಕಾರ್ಮಿಕ ವರ್ಗದ ತಕ್ಷಣದ ಬೇಡಿಕೆಗ ಈಡೇರಿಕೆಗಾಗಿ ಐಕ್ಯ ಹೋರಾಟಗಳನ್ನು ನಡೆಸು ಮೂಲಕವಷ್ಟೇ ಇಡೀ ವರ್ಗವನ್ನು ಐಕ್ಯಗೊಳಿಸಲು ಸಾಧ್ಯ ಈ ನಿಟ್ಟಿನಲ್ಲಿ ಕಾರ್ಮಿಕ ವರ್ಗದ ಸಮಾನ ಬೇಡಿಕೆಗ ಆಧಾರದಲ್ಲಿ ರಾಷ್ಟ್ರಮಟ್ಟದಲ್ಲಿ ಕಾರ್ಮಿಕ ಸಂಘಟನೆಗಳ ಒಂದ ಕಾನ್ಫೆಡರೇಶನ್ ರಚಿಸುವ ಸೂಚನೆಯನ್ನು ಸಿಐಟಿಯು ಮುಂದಿಟ್ಟಿದೆ. ಆದರೆ ಇತರ ಕಾರ್ಮಿಕ ಸಂಘಟನೆಗಳು ಸೂಚನೆಗೆ ಅನುಕೂಲಕರವಾಗಿ ಸ್ಪಂದಿಸಲಿಲ್ಲ. ಆದರೂ ಜಂ ವೇದಿಕೆಗಳ ಮೂಲಕ ಕಾರ್ಮಿಕ ವರ್ಗದ ವಿಶಾ ಸಮೂಹಗಳನ್ನು ಐಕ್ಯ ಹೋರಾಟಗಳಲ್ಲಿ ಒಂದು ಗೂಡಿಸ ಸಿಐಟಿಯು ಶಕ್ತಿಮೀರಿ ದುಡಿಯುತ್ತಿದೆ.


ಮಾನವನಿಂದ ಮಾನವನ ಶೋಷಣೆ ತೊಡೆದುಹಾಕಿ, ಕೂಲಿ ಗುಲಾಮನಾಗಿ ಕಿತ್ತಸೆದು ಸಮತಾ ಸಮಾಜ ಕಟ್ಟುವ ಗುರಿ ಸಿಐಟಿಯುವಿನದು

ವಿವಿಧ ಕಾರ್ಮಿಕ ಸಂಘಟನೆಗಳನ್ನು ಒಟ್ಟಿಗೆ ತಂ ಎಪ್ಪತ್ತರ ದಶಕದಲ್ಲಿ ರಚಿಸಲಾದ ರಾಷ್ಟ್ರೀಯ ಆಂದೋ ಸಮಿತಿ, ಆ ನಂತರದ ಹೊಸ ಪರಿಸ್ಥಿತಿಯಲ್ಲಿ ರಚಿಸಲಾ ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿ, ಕಾರ್ಮಿಕ ರೈ ವಿದ್ಯಾರ್ಥಿ- ಯುವಜನ ಮೊದಲಾದ ಅನೇಕ ಸಂಘಟನೆಗಳ ಒಳಗೊಂಡ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿ ಕಾರ್ಮಿಕರ ರಾಷ್ಟ್ರೀಯ ಅಸ್ಸೆಂಬ್ಲಿ ಮತ್ತು ಅದರ ಕರ ಅನುಗುಣವಾಗಿ ದೇಶಾದ್ಯಂತ ರಚಿಸಲ್ಪಟ್ಟ ಕಾರ್ಮಿಕ ಸಂಘ ಜಂಟಿ ಸಮಿತಿಗಳು ನಮ್ಮ ಇಡೀ ವರ್ಗವನ್ನು ಐಕ್ಯಗೊಳಿಸು ನಿಟ್ಟಿನಲ್ಲಿ ಸಿಐಟಿಯುವಿನ ಮುತುವರ್ಜಿಯಲ್ಲಿ ರೂಪಿಸಲ್ಪ ವೇದಿಕೆಗಳು. ಈ ವೇದಿಕೆಗಳ ಮೂಲಕ ಅನೇಕ ಜ ಚಳುವಳಿಗಳನ್ನು ಯಶಸ್ವಿಯಾಗಿ ನಡೆಸಲಾಗಿದೆ. ಸಿಐಟಿ ಬರೇ ಒಂದು ಕಾರ್ಮಿಕ ಸಂಘಟನೆಯಲ್ಲ. ಅದು ಸಾಮಾ ಪರಿವರ್ತನೆಗಾಗಿ ಕಾರ್ಮಿಕ ವರ್ಗವನ್ನು ಮುನ್ನಡೆಸು ಚಳುವಳಿಯಾಗಿದೆ



ಲೆನಿನ್

ಧಮನಿಯಲ್ಲಿ ಬಿಸಿ ನೆತ್ತರುಕ್ಕದೆ ನೆನೆಯಲಾರೆ
ನಿನ್ನ, ಲೆನಿನ್ ಹೆಸರದು ಸಿಡಿಲ್ ಸದ್ದು !
ದೊರೆಗಿವಿಗೆ; ನಿನ್ನ ಸಮತಾಬೋಧೆ ಸಿಡಿಮದ್ದು ನರ
ಸಂಗ್ರಹ ಬುದ್ಧಿ ಸ್ವಾರ್ಥತೆಯನುರಿದೋರೆ
ದಹಿಸಿ, ನಿಃಸ್ವಾರ್ಥತೆಯ ಬೆಂಕಿಯಿಂ ಹೃತ್ಕುಂಡ
ಸರ್ವದಾ ಪ್ರಜ್ವಲಿಸುವಂತೆಸಗೆ. ಜಮದಗ್ನಿ
ಸುತನಂತೆ ನೀನು ಪಾರ್ಥಿವ ಕುಲಕೆ ಬಡಬಾಗ್ನಿ;
ದುಡಿವ ದೀನರ ದೈವವನ್ಯರ್ಗೆ ಯಮದಂಡ !
ಗೆಯ್ಯುವರ್ಗೇನಿಲ್ಲ, ಕುಳಿತಂಬರಿಗೆ ಬಲ್ಲ;
ಮುಳ್ಳುನೋವಾಳಿಂಗೆ, ಕಂಪು ಹೂವೊಡೆಯಂಗೆ;
ಗೋಳವಗೆ, ಸೊಂಪಿವಗೆ, ಈ ತರತಮವನೆಲ್ಲ



ಮುರಿಯೆ ಬಹನಲ್ಲಲ್ಲಿ ಕಲ್ಕಿ.
ರಕ್ತದ ಗಂಗೆ ಸಿರಿ ನಾಳದಿಂದ
ಮರಳಿ ಬಡತನದೊಣಗು ಮ
ಹರಿದಕ್ಕೆ ದೊರೆಗಳಸಿ ಕೂಲಿ
ರೈತರ ಕೈಗೆ!

- ಕುವೆಂ



"ಈ ದೇಶದಾಗ ಹುಟ್ಟಿದ್ದೇ ತಪ್ಪಾಗೈತಪ್ಪ"

ಅವರ ಉಡಿಗೆ ತೊಡಿಗೆ ನೋಡಿದ್ರೆ ಅವರೊಂದು ಕೂಲಿಕಾರರ ಕುಟುಂಬಕ್ಕೆ ಸೇರಿದವ್ರು ಎಂದೆನಿಸುತ್ತಿತ್ತು. ಗಂಟುಮೂಟೆ ಕಟ್ಕೊಂಡು ಮಕ್ಕಳು ಮರಿಗಳೊಂದಿಗೆ ಹಾವೇರಿ ನಿಲ್ದಾಣದಲ್ಲಿ ರೈಲಿಗಾಗಿ ಕಾದು ಕುಳಿತಿದ್ದರು. ಕತ್ತಲಾಗುತ್ತಿದ್ದಂತೆ ರೈಲು ನಿಲ್ದಾಣದಲ್ಲಿ ಜನದಟ್ಟಣೆ ತೀವ್ರವಾಯಿತು. ಸಿಪಿಐ(ಎಂ) ಹಮ್ಮಿಕೊಂಡಿದ್ದ ರ್‍ಯಾಲಿಯಲ್ಲಿ ಭಾಗವಹಿಸಲು ಹೊರಟಿದ್ದಡ ಹಾನಗಲ್, ಹಾವೇರಿ, ಬ್ಯಾಡಗಿ,ಶಿಗ್ಗಾಂವ್, ಮೊದಲಾದ ತಾಲ್ಲೂಕುಗಳಿಂದ ರೈತರು, ಕೂಲಿಕಾರರು ವಿದ್ಯಾರ್ಥಿ ಯುವಜನರು ದೊಡ್ಡ ಜನಸಂಖ್ಯೆಯಲ್ಲಿ ಬಂದು ರೈಲು ನಿಲ್ದಾಣದಲ್ಲಿ ಜಮಾಯಿಸ ತೊಡಗಿದ್ರು.

ಹೆಚ್ಚುತ್ತಿದ್ದ ಜನಸಂದಣಿಯನ್ನು ಕಂಡು ಅಲ್ಲಿ ಮೊದಲೇ ರೈಲಿಗಾಗಿ ಕಾದುಕುಳಿತಿದ್ದ ಕೂಲಿಕಾರ ಮಹಿಳೆಯರಲ್ಲಿ ಆತಂಕ ಸುರುವಾಯ್ತು. ಇಷ್ಟೊಂದು ಜನರ ಮಧ್ಯೆ ಮಕ್ಕಳು ಮರಿಗಳೊಂದಿಗೆ ತಮಗೆ ರೈತಲು ಹತ್ತಲಾದಿತೇ ಎಂಬ ಭೀತಿ ಅವರ ಮಾತುಗಳಲ್ಲಿ ವ್ಯಕ್ತವಾಗುತ್ತಿತ್ತು. ಉಳಿದವರಂತೆ ಅವರು ಬೆಂಗ್ಳೂರು ರ್‍ಯಾಲಿಗೆ ಹೊರಟವರಲ್ಲ ಎಂದು ಗೊತ್ತಾದಾಗ ನಾನು ಅವರನ್ನು ಮಾತನಾಡಿಸಲು ಮುಂದಾದೆ.

"ಎಲ್ಲಿಗೆ ಹೊರಟಿದಿವ್ವವ್ವ ಸಣ್ಣ ಸಣ್ಣ ಮಕ್ಕಳನ್ನು ಕರ್‍ಕೊಂಡು?" ಕುತೂಹಲ ತಡೆಯಲಾಗ್ದೆ ಕೇಳಿಬಿಟ್ಟೆ. ಗುಂಪಿನಲ್ಲಿದ್ದವರೆಲ್ಲಾ ನನ್ನತ್ತ ತಿರುಗಿದರು. "ದುಡ್ಯಾಕ್ ಹೊಂಟಿವಿಯಪ್ಪ, ಬೆಂಗ್ಳೂರ್ ಕಡೆಗೆ" ಅವರೊಳಗೆ ಮಧ್ಯಮ ವಯಸ್ಸಿನ ಮಹಿಳೆಯೊಬ್ಬಳು ನನ್ನ ಪ್ರಶ್ನೆಗೆ ಉತ್ತರವಿತ್ತಳು. "ಯಾವ ಊರು ನಿಮ್ದು?" ನನ್ನ ಎರಡನೇ ಪ್ರಶ್ನೆ. "ನಾವು ಕಲಘಟಗಿ ತಾಲೂಕ್ ಮಡ್ಕಿ ಹೊನ್ನಳ್ಳಿ ಯವರು. ಏನ್ ಮಾಡೋದು. ಊರಾಗ ನೋಡಿದ್ರೆ ಕೆಲ್ಸ ಇಲ್ಲ. ಮಳಿ ಇಲ್ದೆ ಭೂಮಿ ಬಾಯಿ ಬಿಟ್ಟೈತಿ. ರೈತರ ಒಂದು ತಟಗು ಬೀಜ ಭೂಮ್ಯಾಗ ಹಾಕಿಲ್ಲ. ಅವ್ರೆ ಸಾಯಾಕ ಹತ್ತಾರ್. ನಮ್ಮ ಕೂಲಿಕಾರ್ರ ಪಾಡು ನಾಯಿ ಪಾಡಾಗೈತ್ರಿ" ಎಂದಳು. ಆ ಹೆಣ್ಣುಮಗಳು.

"ನಿಮ್ಮ ಊರಾಗ ಸರ್ಕಾರ್‍ದೋರು ಬರಗಾಲ ಕಾಮಗಾರಿ ಯಾವ್ದಾ ಸುರು ಮಾಡಿಲ್ವ? ನಾನು ಮಾತು ಬೆಳೆಸಿದೆ. "ಸುರು ಮಾಡಿದ್ರು. ಒಣಗಿನಿಂತ ಕೆರ್‍ಯಾಗಿನ ಮಣ್ಣು ತೆಗೆಯಾಕ ಹಚ್ಚಿದ್ರು. ಊರಾನ್ ಜನ ಒಂದು ವಾರ ಸಂಭ್ರಮದಿಂದ ದುಡಿದಿವಿ. ಆದ್ರೆ ನಮಗೆ ಕೂಲಿ ಕೊಡಾಕಂಂತ ತಂದಿದ್ದ ಅಕ್ಕಿ ಪಂಚಾಯತಿ ಚೇರಮನ್ ಮನಿಯೊಳಗ ಮಾಯಾ ಆತಂತ್ರಿ. ನಮ್ಮ ದುಡ್ಡ ಪಗಾರ ಕೊಡ್ಲಿಲ್ಲ, ಅಕ್ಕೀನೂ ಕೊಡ್ಲಿಲ್ಲ ನೋಡ್ರಿ. ನಮ್ಮ ತುತ್ತು ಅನ್ನಾನೂ ಇವ್ರ ಕಿತ್ಕೊಂಡ್ರೆ ನಾವು ಬದ್ಕೋದು ಹ್ಯಾಗೆ. ನಾವು ಈ ದೇಶದಾಗ ಹುಟ್ಟಿದ್ದೇ ತಪ್ಪಾಗೈತಪ್ಪ" ಎಂದು ನಿಟ್ಟುಸಿರು ಬಿಟ್ಟಳು ಆ ತಾಯಿ.

ಬೆಳೆಹಾನಿ, ಬೆಲೆಕುಸಿತ, ಸಾಲದ ಬಾಧೆ ತಾಳಲಾಗದೆ ರೈತರು ಆತ್ಮಹತ್ಯೆ ಮಾಡಿ ಕೊಳ್ಳುತ್ತಿರುವಾಗ ರೈತರನ್ನೇ ಅವಲಂಬಿಸಿರುವ ಕೃಷಿ ಕೂಲಿಕಾರರನ್ನು ಎಲ್ಲರು ಮರೆತೇಬಿಟ್ಟಿದ್ದಾರೆ.

ಕೂಲಿಕಾರರಾಗಿ ಹುಟ್ಟಿದ್ದೇ ತಪ್ಪಾಗಿದೆ ಎನ್ನುತ್ತಿರುವಂತೆ ಕಾಣುತ್ತಿದ್ದಾರೆ ಬರದ ನಾಡಿನ ಕೂಲಿಕಾರರು. ಇಲಿ ಹೆಗ್ಗಣಗಳಾಗಿ ಹುಟ್ಟಿದ್ದರೆ ಸರ್ಕಾರಿ ಉಗ್ರಾಣಗಳಲ್ಲಿ ನಿಶ್ಚಿಂತೆಯಿಂದ ಇರಬಹುದಾಗಿತ್ತು. ಕೋಟಿಗಟ್ಟಲೆ ಟನ್ ಆಹಾರ ಧಾನ್ಯಗಳನ್ನು ಇಟ್ಟುಕೊಂಡು ಬಡವರನ್ನು ಉಪವಾಸ ಸಾಯಿಸುತ್ತಿರುವ ಈ ಸರ್ಕಾರಗಳನ್ನು ನಡೆಸುತ್ತಿರುವವರು ಮನುಷ್ಯರಾ?

ಸಾಲದ ಬಾಧೆ ಅವರನ್ನು ತಟ್ಟಿಲ್ಲ ನಿಜ. ಕೂಲಿಕಾರರಿಗೆ ಯಾವ ಬ್ಯಾಂಕ್ ಸಾಲ ಕೊಡತ್ತೈತಿ, ಯಾವ ಸಾಲ ಕೊಡುವ ಸಾಹುಕಾರ ಇವರಿಗೆ ಸಾಲ ಕೊಟ್ಟಾನು? ಬರದ ಬವಣೆಗೆ ಸಿಲುಕಿ ತತ್ತರಿಸುತ್ತಿರುವ ಕೂಲಿಕಾರ ಕುಟುಂಬಗಳು ಮನೆಯಲ್ಲಿ ಸಾಕಿದ ಕುರಿಕೋಳಿಗಳನ್ನು ಮಾರಿ, ಮಕ್ಕಳು ಮರಿಗಳನ್ನು ಕಟ್ಟಿಕೊಂಡು ತಂಡೋಪತಂಡವಾಗಿ ಬೆಂಗಳೂರು ಮಂಗಳೂರು ಕಡೆ ಗುಳೆ ಹೋಗುವುದು ಪ್ರತಿದಿನದ ಸಾಮಾನ್ಯ ದೃಶ್ಯವಾಗಿದೆ. ಕೆಲಸ ಹುಡುಕಿಕೊಂಡು ಗೊತ್ತು ಗುರಿಯಿಲ್ಲದೆ ಹೊರಡುವ ಈ ಜನಗಳಿಗೆ ಎಲ್ಲಿ ನೆಲೆ, ಎಲ್ಲಿ ಬೆಲೆ? ಹೋದಲ್ಲಿ ಕೆಲಸ ಸಿಗುತ್ತದೆ ಎಂಬ ಭರವಸೆ ಇಲ್ಲ. ಕೆಲಸ ಮಾಡಿದ ಮ್ಯಾಲೆ ಕೂಲಿ, ಸಂಬಳ ಸಿಗುತ್ತದೆ ಎಂಬ ಖಾತರಿ ಇಲ್ಲ. ಕ್ಷಣಕ್ಷಣಕ್ಕೂ ಎಲ್ಲವೂ ಅನಿಶ್ಚಿತ! ಕೂಲಿಕಾರರ ಬದುಕೇ ಅಭದ್ರ! ಇತ್ತ ಬದುಕಲೂ ಆಗದ ಅತ್ತ ಸಾಯಲೂ ಆಗದ ನರಕಯಾತನೆ!

ಹುಬ್ಬಳ್ಳಿಯಿಂದ ಹೊರಟು ಬೆಂಗಳೂರಿನತ್ತ ಓಡುತ್ತಿದ್ದ ರೈಲು ಅಂದು ಹಾವೇರಿ ನಿಲ್ದಾಣಕ್ಕೆ ಬಂದು ನಿಂತಾಗ ನೂಕು ನುಗ್ಗಲು. ಮೊದಲೇ ತುಂಬಿದ್ದ ಎರಡನೇ ವರ್ಗದ ಡಬ್ಬಿಗಳಿಗೆ ವಿಧಿಯಿಲ್ಲದೆ ನಾವೆಲ್ಲರೂ ನುಗ್ಗಬೇಕಾಯಿತು. ಮಲಗಿದವರನ್ನು ಎಬ್ಬಿಸುತ್ತಾ ಮೇಲಿಟ್ಟ ಲಗೇಜುಗಳನ್ನು ಕೆಳಗೆ ಇಳಿಸುತ್ತಾ ಸ್ಥಾವಕಾಶ ಮಾಡಿಕೊಳ್ಳುವ ಪ್ರಯತ್ನ ಬಿರುಸಾಗಿಯೇ ನಡೆಯಿತು.

"ಯಪ್ಪಾ..... ಸಾವಕಾಶನೋ.... ಎತ್ತ ಬೇಕಾದರತ್ತ ಒಗಿಬ್ಯಾಡ್ರೋ..... ಅದರಾಗ ನನ್ನ ಬಂಗಾರ ಐತಿ. ಮುದುಕಿಯೊಬ್ಬಳ ನಡುಗುವ ಧ್ವನಿ ನನ್ನ ಗಮನ ಸೆಳೆಯಿತು. "ಏನಜ್ಜ, ಇದರಾಗ ಎಷ್ಟು ಗಂಟನ್ನು ಎತ್ತಿ ಆಕೆಯ ಕೈಯೊಳಗೆ ಇಡುತ್ತಾ ನಾನು ಕೇಳಿದೆ. "ಯಪ್ಪಾ, ನಮ್ಮಂತ ಕೂಲಿಕಾರರ ಕೈಗೆ ಎಲ್ಲಿಂದ ಬರ್‍ಬೇಕು ಬಂಗಾರ. ಇದು ರೊಟ್ಟಿ ಗಂಟಪ್ಪಾ, ನಮಗೆ ಇದಿಷ್ಟು ಸಿಕ್ಕರೆ ಬಂಗಾರ ಸಿಕ್ಕಾಂಗೇ ನೋಡ್ರಪ್ಪಾ. ಇದ್ಕೂ ಈವಾಗ ಸಂಚಕಾರ ಬಂದೈತೆಪ್ಪಾ. ಹತ್ತೆ ರೂಪಾಯಿ ಕೊಟ್ರೆ ಸಾಕು ಎಂದು ಯೂರೂ ಕೆಲಸಕ್ಕೆ ಕರ್‍ಕೋದಿಲ್ಲ. ಅದ್ಕ ನಮ್ಮ ಮಕ್ಳ ಬೆಂಗಳೂರಿಗೆ ಹೊಂಟಾರ ದುಡ್ಯಾಕ ನಾನೂ ಅವರ ಸಂಗಡ ಹೊಂಟೇನಿ" ಎಂದಳು ಕುಂದಗೋಳ ತಾಲೂಕಿನ ಅಜ್ಜಿ.

● ವಿಜಯಕುಮಾರ್ ದೊಡ್ಡಮನಿ

ಹೀಗೊಂದು ಘಟನೆ, ಒಂದೆಂದರೆ ಒಂದೇ ಅಲ್ಲ!

ಬಾಲಕನ ಕಣ್ಣು ಕಿತ್ತ ಕಿರಾತಕರು

ಬಿಹಾರದ ಬರ್ಬರ ಘಟನೆಯ ಸ್ಥಳಕ್ಕೆ ಅಲ್ಲಿನ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಘಟಕ ಭೇಟಿ ಕೊಟ್ಟಿದೆ. ದನ್‌ಬೀರ್‌ನಿಗೆ ಸಹಾಯ ಸಿಗುವಂತೆ, ಘಟನೆಗೆ ವಿರೋಧ ವ್ಯಕ್ತವಾಗುವಂತೆ- ಘಟನೆಗೆ ಧ್ವನಿ ಕೊಟ್ಟಿದೆ. ಪರಿಣಾಮವಾಗಿ ಧನಬೀರ್- ಇಂದು ಚಿಕಿತ್ಸೆ ಪಡೆಯುತ್ತಿದ್ದಾನೆ. ಕೇಂದ್ರದ ಪ್ರಯತ್ನದಿಂದ ಸಹೃದಯರಿಂದ ಹಣಕಾಸಿನ ನೆರವಿನ ಸಹಾಯಹಸ್ತ ಬರುತ್ತಿದೆ. ಸಂಘಟನೆಯ ಕರ್ನಾಟಕ ಘಟಕದ ವತಿಯಿಂದ ಆಸ್ಪತ್ರೆಗೆ ಭೇಟಿ ನೀಡಿ ಸಾಂತ್ವನ ಹೇಳಲಾಗಿದೆ. ಧನವೀರ್ ಮತ್ತವನ ಕುಟುಂಬಕ್ಕೆ ಸಹಾಯ ಒದಗಿಸಲು ಸಂಘಟನೆ ಪ್ರಯತ್ನ ನಡೆಸಿದೆ.

"ಈ ನಾಡ ಮಣ್ಣಿನಲ್ಲಿ ಮಣ್ಣಾದ ಜನಗಳ ಕಥೆಯಾ... ಬೆಲ್ಚಿಯ ಜನಗಳ ಕಥೆಯಾ...." 70 ರ ದಶಕದಲ್ಲಿ ಬಿಹಾರದ ಬೆಲ್ಚಿಯಲ್ಲಿ ನಡೆದ ದಲಿತರ ಸಜೀವ ದಹನದ ವಿರುದ್ಧ- ಸಮುದಾಯ ತಂಡ ಬೀದಿ ಬೀದಿಗಳಲ್ಲಿ ಬೀದಿ ನಾಟಕ ನಡೆಸಿತ್ತು. ಅದೇ ಬಿಹಾರದಲ್ಲಿ ಇಂದಿಗೂ ಕರುಳಿರಿಯುವ ದೌರ್ಜನ್ಯ ಅವ್ಯಾಹತವಾಗಿ ನಡೆಯುತ್ತಲೇ ಇದೆ. ಭೂಮಾಲಿಕರ ರಣವೀರ ಸೇನೆ ಒಂದೆಡೆ ಬಡ ಜನರನ್ನು ಹಿಂಸೆಗೊಳಿಸುತ್ತಿದ್ದರೆ, ಇನ್ನೊಂದೆಡೆ ಜಾತೀಯ ವೈರಗಳನ್ನು ತೀರಿಸಿಕೊಳ್ಳಲು ಸಿಗುವ ಅತ್ಯಂತ ಕ್ಷುಲ್ಲಕ ಕಾರಣವನ್ನೂ ಬಳಸಿಕೊಳ್ಳುವ ಜಾತಿ ರಾಜಕೀಯ.

ಈ ಘಟನೆ ವರದಿಯಾಗುತ್ತಿರುವುದು ಹೀಗೆ- ಧನಬೀರ್ ಎಂಬ 14 ರಿಂದ 16 ವರ್ಷದೊಳಗಿನ ಮುಗ್ಧ ಬಾಲಕ. ಅತ್ಯಂತ ಬಡ ಕೂಲಿಕಾರ ಕುಟುಂಬದ ತಂದೆತಾಯಿಗಳ 7 ಜನರ ಮಕ್ಕಳಲ್ಲಿ ಹಿರಿಯ ಮಗ. ಅವನು ಮತ್ತು ಒಂದು ಕಾಲದಲ್ಲಿ ಅವನ ಸ್ನೇಹಿತನಾಗಿದ್ದ ರಣಬೀರ್-- ಒಂದು ಮುಷ್ಟಿ ಕಡಲೆಗಾಗಿ ಹೊಲದಲ್ಲಿ ಜಗಳವಾಡಿದ್ದರು. ಅದರ ಸೇಡಿಗಾಗಿ -13.09.03 ರಂದು ಸಂಜೆ ಊಟ ಮುಗಿಸಿ ಊರ ಹೊರಗೆ ಗಂಗಾ ತಟದ ಕಟ್ಟೆಯ ಮೇಲೆ (ಸೋದರ ಅತ್ತೆಯ ಮನೆ) ಮಲಗಿದ್ದ ಧನ್‌ಬೀರ್‌ನನ್ನು ರಣಬೀರ್ ಬಂದು ಆತನ ತಾಯಿಗೆ ಮೈ ಸರಿ ಇಲ್ಲ, ಆಸ್ಪತ್ರೆಗೆ ಕರೆದೊಯ್ದಿದ್ದಾರೆ ಎಂದು ನಂಬಿಸಿ ಕರೆದೊಯ್ಯುತ್ತಾನೆ. ನೇರ ದಾರಿ ಬಿಟ್ಟು ಬಳಸುದಾರಿಯಲ್ಲಿ ಕರೆದೊಯ್ದು ರಣಬೀರ್ ಮತ್ತು ಆತನ ಕೆಲವು ಸಹಚರರು ಧನವೀರ್‌ನಿಗೆ ಬಡಿಯುತ್ತಾರೆ. ನಂತರ ಊರಿನ (ಮಧುರಾಪುರ ದಲ್ಲಿರುವ) ಮುಖಿಯಾನ ಬಳಿ ನ್ಯಾಯ ಪಂಚಾಯ್ತಿಗೆ ಎಳೆದೊಯ್ಯುತ್ತಾರೆ. ಅಲ್ಲಿ ಅವನ ಮೇಲಿನ ಆರೋಪ ಪಟ್ಟಿಗೆ ಕಡಲೆಯ ಜಗಳದ ಜೊತೆ ಬೈಸಿಕಲ್ ಕದ್ದ ಸುಳ್ಳು ಆರೋಪವೂ ಸೇರುತ್ತದೆ.

ದಲಿತ ಬಾಲಕ ಧನವೀರ್ ಕಡಲೆ ಕದ್ದನೆಂದು ಹೊತ್ತೊಯ್ದ ಭೂಮಾಲೀಕರು ಆತನ ಕಣ್ಣು ಕಿತ್ತೇ ಬಿಟ್ಟರು. ಬಿಹಾರದ ಭೂಮಾಲೀಕರ ಈ ದೌರ್ಜನ್ಯದಲ್ಲಿ ಬಲಿಯಾದ ಬಾಲಕ ಈಗ ಬೆಂಗಳೂರಲ್ಲಿ...

ಊರಿನ ಮುಖಿಯಾ - ಕಳ್ಳತನಕ್ಕೆ ತಕ್ಕ ಶಾಸ್ತಿ ಮಾಡುವ ನಿಟ್ಟಿನಲ್ಲಿ- ಅವನ ಎರಡೂ ಕಣ್ಣುಗಳನ್ನು ಕಿತ್ತು ಅವನನ್ನು ರಸ್ತೆಯಲ್ಲಿ ಬಿಸಾಡಿ ಎಂದು ಆಜ್ಞೆ ಮಾಡುತ್ತಾನೆ. ಹದಿ ಹರೆಯದ ಬಾಲಕ ಯಾದವ ಜನಾಂಗಕ್ಕೆ ಸೇರಿದನಾದರೆ- ಮುಖಿಯೂ ಕುರ್ಮಿ ಜನಾಂಗಕ್ಕೆ ಸೇರಿದವನು ಎಂಬುದು ಇಲ್ಲಿ ಗಮನಿಸಬೇಕಾದ ಅಂಶ.

ಕಣ್ಣು ಕಿತ್ತ ಘೋರ ಕೃತ್ಯ

ನನ್ನ ವೈದ್ಯಕೀಯ ವೃತ್ತಿಯ ಅನುಭವದಲ್ಲಿರಲಿ ಓದಿದ ಪುಸ್ತಕಗಳಲ್ಲಿ ಕೂಡ ಇಂತಹ ಬರ್ಬರತೆಯ ಕುರಿತು ಓದಿಲ್ಲ. ಜರ್ಮನಿ ಮತ್ತಿತರೆಡೆ ಸ್ನೇಹಿತರನೇಕರು ಕೂಡ ಇಂತಹ ಘೋರ ಕೃತ್ಯವನ್ನು ಕಂಡಿಲ್ಲ ಕೇಳಿಲ್ಲ. ಇದು 15 ನೇ ಶತಮಾನದ ಬರ್ಬರತೆನ್ನೂ ಮೀರಿಸುವಂತಾದ್ದು- ಎಂದು ಧನ್‌ಬೀರ್‌ನನ್ನು ಚಿಕಿತ್ಸೆಗೆಂದು ಕರೆಸಿಕೊಂಡಿರುವ ಡಾ. ಸುನೀತಾ ಅಗರ್‌ವಾಲ್ ತಿಳಿಸುತ್ತಾರೆ. ಇದು ಉತ್ಪ್ರೇಕ್ಷೆಯ ಮಾತಲ್ಲ.

ಧನಬೀರ್‌ನ ಎರಡೂ ಕಣ್ಣು ಗುಡ್ಡೆಗಳು ಸಂಪೂರ್ಣ ಧ್ವಂಸವಾಗಿದೆ. ಅತ್ಯಂತ ಹರಿತವಾದ ಚಾಕುಗಳನ್ನು ಬಳಸಿ ಕಣ್ಣುಗಳನ್ನು ಉಲ್ಟಾ ಮಾಡಲಾಗಿದೆ. ತನ್ನ ಸಹಜ ಆಕಾರವನ್ನೇ ಕಳೆದುಕೊಂಡು ಕೇವಲ ಮುಖದೊಳಗಿನ ಎರಡು ಕುಳಿಗಳಾಗಿ ಕಣ್ಣೆನಾಚೆ ಜೋತುಬಿದ್ದ ಕಣ್ಣುಗುಡ್ಡೆಗಳನ್ನು ಹೊತ್ತು ಬಂದ ಧನ್‌ಬೀರ್‌ನಿಗೆ ಶಸ್ತ್ರ ಚಿಕಿತ್ಸೆ ನಡೆಸಿ -ಕಣ್ಣುಗಳಂತೆ ಕಾಣುವ ಹಾಗೆ ಮಾಡಲಾಗಿದೆ. ದೃಷ್ಟಿ ಬರುವ ಯಾವುದೇ ಆಸೆ ಇಲ್ಲದಿದ್ದಾಗ್ಯೂ ಕಾಸ್ಮೆಟಿಕ್ ಕಣ್ಣುಗಳನ್ನು ಅಳವಡಿಸುವ ಯೋಚನೆ ನಡೆಸುತ್ತಿದ್ದಾರೆ. **ನೋವು, ಯಾತನೆ ಹೆಪ್ಪುಗಟ್ಟಿದ ದುಃಖದ ಧನ್‌ಬೀರ್- ಯಾವುದೇ ಭಾವನೆಗಳನ್ನು ವ್ಯಕ್ತಪಡಿಸಲಾರ. ಕಣ್ಣಲ್ಲಿ ನೀರೂ ಬಾರದ ಸ್ಥಿತಿಯಲ್ಲಿ ಆತ ನಿದ್ದರೆ, ಮಗನ ಮೇಲೆ ನಡೆದ ದೌರ್ಜನ್ಯದ ಕುರಿತು ತಂದೆ ಶ್ರೀರಾಮ್ ಯಾದವ್ ಕಣ್ಣೀರಿಡುತ್ತಾ ಬರ್ಬರ ಕಥೆಯನ್ನು ಹೇಳುತ್ತಾನೆ.**

ಕಗಾರಿಯಾ ಜಿಲ್ಲೆಯ ಬಾಲ್ವಾಹಿ ಹಳ್ಳಿಯ ಕೂಲಿಕಾರ ಕುಟುಂಬದ ಶ್ರೀರಾಂ ಯಾದವ್ ಜರ್ಝರಿತನಾಗಿದ್ದಾನೆ. ಬದುಕಿನುದ್ದಕ್ಕೂ ಅವರೆದುರಿಸುವ ಅಸಹಾಯಕತೆ, ನೋವು ಯಾತನೆ ಅವನ ಮುಖದಲ್ಲಿ ಒಡೆದು ಕಾಣುತ್ತದೆ. ಈ ಅಸಹಾಯಕತೆಯನ್ನು ಅಲ್ಲಿಯ ಆಡಳಿತವೂ ಹೇಗೆ ದುರ್ಬಳಿಸಿಕೊಳ್ಳುತ್ತದೆ ಎಂದರೆ- ಜಿಲ್ಲಾ ಪೊಲೀಸ್ ಕೇಂದ್ರದಲ್ಲಿ - (ಪೋಲೀಸ್‌ರಿಗೆ ಬೇಕಾದ) ವ್ಯಕ್ತಿಯೊಬ್ಬನನ್ನು ತೋರಿಸಿ ಆತನೇ ಧನ್ ಬೀರ್‌ನ ಮೇಲೆ ದೌರ್ಜನ್ಯ ಎಸಗಿದ್ದೆಂದು, ಆರೋಪ ಹೊರಿಸಲು ಕೇಳಿದ್ದಾರೆ! ಧನಬೀರ್ ವಾಪಾಸ್ ಹೋಗಲು ಇಷ್ಟಪಡುತ್ತಿಲ್ಲ.


ಕಣ್ಣು ಕೊಡುವವರು ಯಾರು?

ಧನಬೀರ್‌ಗೆ ಕಣ್ಣು ಬರುತ್ತದೋ ಇಲ್ಲವೋ? ಆದರೆ ನ್ಯಾಯ ಕುರುಡೆ? ಜಂಗಲ್‌ರಾಜ್‌ನಲ್ಲಿ ಮಧುರಾಪುರದ ಮುಖಿಯರೆ ರಾಜರಾಗುತ್ತಾರೆ. ಬಡವರನ್ನು ಹಿಂಸಿಸುವ ಈ ಜಾತಿ ರಾಜಕಾರಣಕ್ಕೆ ಕಣ್ಣು ಕೊಡುವವರಾರು?

ನಾವು ನೀವು ನಿಜಕ್ಕು ಬದುಕಿದ್ದರೆ ದಮನಿ ದಮನಿಗಳಲ್ಲಿ ಹರಿವ ನೆತ್ತರಿನಲ್ಲಿ ಪ್ರತಿಭಟನೆಯ ಧ್ವನಿ ಮೊಳಗಲಿ

- ಕೆ.ಎಸ್.ವಿಮಲಾ

ದೇಶಪ್ರೇಮಿ ಸ್ವಾತಂತ್ರ್ಯ ಚಳುವಳಿಯ ಹೋರಾಟಗಾರ ಪಕ್ಷವೇ ಕಮ್ಯುನಿಸ್ಟ್ ಪಕ್ಷ




1942 ರ 'ಕ್ವಿಟ್ ಇಂಡಿಯಾ' ಬ್ರಿಟಿಷರೇ ಭಾರತದಿಂದ ತೊಲಗಿರಿ ಚಳುವಳಿಯ ನಾಯಕತ್ವ ವಹಿಸಿದ್ದವರು ಸಮಾಜವಾದಿಗಳಾಗಿದ್ದರು. ಅವರಲ್ಲಿ ಮುಂದಾಳುಗಳಾದ ಜಯಪ್ರಕಾಶ್ ನಾರಾಯಣ್, ರಾಮ ಮನೋಹರ್ ಲೋಹಿಯಾ ಅಚ್ಯುತ ಪಟವರ್ಧನ್, ಆಚಾರ್ಯ ಕೃಪಲಾನಿ, ಎಂ.ಎನ್.ಜೋಶಿ, ಶ್ರೀಮತಿ ಅರುಣ ಆಸಫ್ ಅಲಿ, ಮೊದಲಾದವರು ಪ್ರಮುಖರಾಗಿದ್ದವರು.

1942 ಹೋರಾಟದ ನಂತರ ಏನು ನಡೆದಿದೆ ಎಂಬುದೇ ಮುಖ್ಯ, ಯಾವುದೇ ಹೋರಾಟದ ದಾಖಲೆಯು ಪರಂಪರೆ ಕಾಂಗ್ರೆಸ್ಸಿನ ಇತಿಹಾಸದಲ್ಲಿದೆಯೇ? ಇರಲಾರದು. ಅವರು ಮಾಡಿದ ದೊಡ್ಡ ಸಾಧನೆಯೆಂದರೆ ಸಂಧಾನ ಮತ್ತು ಮಾತುಕತೆಯ ಮೂಲಕ ದೇಶದ ಜನತೆಯಿಂದ ಎದ್ದು ಬರುತ್ತಿದ್ದ ಹೋರಾಟದ ಅಲೆಗಳನ್ನು ತಡೆಯುವ ಪ್ರಯತ್ನ ಮಾತ್ರ ಮಾಡಿದ್ದರು. ಕಮ್ಯುನಿಸ್ಟರನ್ನು ದೇಶದ್ರೋಹಿಗಳೆಂದು ಹೀಯಾಳಿಸುವ ಕೆಲಸ ಲಂಗುಲಗಾಮಿಲ್ಲದೆ ನಡೆಯಿತು. ಹಾಗಾದರೆ ದೇಶದಲ್ಲಿ ಎಲ್ಲವೂ ಮೌನವಾಗಿತ್ತೆ? ಇಲ್ಲ, ಈ ದೇಶದಲ್ಲಿ 1947 ರ ಅಗಸ್ಟ್‌ವರೆಗೂ ಹೋರಾಟವನ್ನು ಮುಂದುವರಿಸಿದವರು ಯಾರು? ಅವರು ಕಮ್ಯುನಿಸ್ಟರು ಮಾತ್ರವೇ ಆಗಿದ್ದರು.

1945 ಸುಭಾಶ್ಚಂದ್ರ ಭೋಸರ ಅಜಾದ್ ಹಿಂದ್ ಸೇನೆಯ ಯೋಧರ ವಿಚಾರಣೆಯಾಗುತ್ತಿದ್ದಾಗ ಕಲ್ಕತ್ತ, ಮದ್ರಾಸ್, ಮುಂಬಾಯಿ ಬೀದಿಗಳಲ್ಲಿ ದೊಡ್ಡ ದೊಡ್ಡ ಪ್ರದರ್ಶನಗಳನ್ನೇರ್ಪಡಿಸುತ್ತಾ ಧಾಳಿ ದಬ್ಬಾಳಿಕೆ (ಪೊಲೀಸರ) ಎದುರಿಸುತ್ತಾ (ಅಜಾದ್ ಹಿಂದ್ ಸೇನೆಯ) "ಐಎನ್‌ಎ ಯೋಧರ ಬಿಡುಗಡೆಯಾಗಲಿ" ಎಂದು ಚಳುವಳಿ ನಡೆಸಿದವರು. 1946 ರಲ್ಲಿ ರಿನ್‌ಬಂಡಾಯವಾದ ಸಂದರ್ಭ ನಾವಿಕರಿಗೆ ಮೋಸ ಮಾಡಿ ರಾಷ್ಟ್ರೀಯ ಮುಂದಾಳುಗಳ ಸಂಧಾನದ ಧೋರಣೆಯಿಂದ ಹೋರಾಟಗಾರರಲ್ಲಿ ಅನೇಕರಿಗೆ ಶಿಕ್ಷೆಯಾಯಿತು. ಕೆಲವಾರು ಮಂದಿ ಕೆಲಸ ಕಳಕೊಂಡರು. ಹಲವರ ಬಂಧನವಾಯಿತು, ಮುಂಬಾಯಿಯ ಸಂಘಟಿತ ಕಾರ್ಮಿಕ ವರ್ಗ ನಾವಿಕರ ಬೆಂಬಲಕ್ಕೆ ಧಾವಿಸಿ ಬ್ರಿಟೀಷ್ ಸೈನಿಕರ ಗುಂಡೇಟುಗಳನ್ನು ಎದುರಿಸಿ, ಒಂದೇ ದಿನದಲ್ಲಿ ಸುಮಾರು 200 ಕ್ಕೂ ಹೆಚ್ಚು ಮಂದಿ ಹುತಾತ್ಮರಾದರು. ಬಂಗಾಳ, ತ್ರಿಪುರಾ ರೈತರ ಸಮರಧೀರ ಹೋರಾಟಗಳು, ಕೇರಳದ ಪುನಪ್ರವಯಲಾರ್ ಹೋರಾಟ, ಮಲಬಾರಿನ ರೈತರ ಕಯ್ಯೂರು ಹೋರಾಟ, ಎಲ್ಲಕ್ಕೂ ಮುಖ್ಯವಾಗಿ ಕಳಶವಿಟ್ಟಂತಹ ಹೈದ್ರಾಬಾದಿನಲ್ಲಿ ರಜಕಾರರ, ನೈಜಾಮನ ಸೈನಿಕರ ವಿರುದ್ಧದ "ಆಂಧ್ರಮಹಾಸಭಾ" ನಡೆಸಿದ ರೈತರ ಧೀರ ಹೋರಾಟ, ಕೊನೆಯಲ್ಲಿ ತೆಲಂಗಾಣದ ರೈತರು ಭೂಮಿಗಾಗಿ ನಡೆಸಿದ ಸಶಸ್ತ್ರ ಹೋರಾಟ, ಉತ್ತರ ಪ್ರದೇಶದ "ಬಲಿಯಾ" ಮಹಾರಾಷ್ಟ್ರದ ಅಮಳನೇರ್, ಸಕಾರಾ ಮುಂಬಾಯಿಯ ವಾರಿಲಿ ರೈತರ ಹೋರಾಟಗಳು, ಮುಂಬಯಿಯಲ್ಲಿ ನಡೆದ ರೈತ ಕಾರ್ಮಿಕರ ಧೀರೋದಾತ್ತವಾದ ಹೋರಾಟಗಳು, ಪಂಜಾಬಿನಲ್ಲಿ ರೈತರು ದೇಶಪ್ರೇಮಿಗಳು ನಡೆಸಿದ ಹೋರಾಟಗಳು, ಪೆಪ್ಪುವಿನ ರೈತರ ಹೋರಾಟಗಳು, ಕಾಶ್ಮಿರದಲ್ಲಿ ಖಾನ್ ಗಫರ್ ಖಾನ್‌ರ (ಗಡಿನಾಡು ಗಾಂಧಿ) ಕೆಂಪಂಗಿ ದಳದವರ ಬ್ರಿಟೀಷ್ ವಿರೋಧಿ ಹೋರಾಟಗಳು, ಏನಾಗಿದ್ದವು ಎಂದು ತಿಳಿಯದೇ ಅಥವಾ ತಿಳಿಯುವ ಮನಸ್ಸಿಲ್ಲದೆ ಕಮ್ಯುನಿಸ್ಟರನ್ನು ದೇಶದ್ರೋಹಿಗಳೆಂದು ಜರಿಯುವವರನ್ನು ಏನೆಂದು ಕರೆಯಬೇಕು? ಈ ಚಳುವಳಿಗಳು 1942 ರ ನಂತರ ಮುಂದಾಳುಗಳು ನಿರಾಶೆಯಲ್ಲಿದ್ದಾಗ ಈ ದೇಶದಲ್ಲಿ ಕಮ್ಯುನಿಸ್ಟರ ನೇತೃತ್ವದಲ್ಲಿ 1947 ರವರೆಗೆ ಧೀರೋದಾತ್ತ ಹೋರಾಟಗಳು ನಡೆದಿದೆ. ಇದು ಇತಿಹಾಸದ ಭಾಗವಾಗಿದೆ. ಸ್ವಾತಂತ್ರ್ಯ ಹೋರಾಟದ ಗಂಧಗಾಳಿಯ ಕಲ್ಪನೆಯಿಲ್ಲದ ಅಡ್ವಾಣಿ, ಅರುಣ ಶೌರಿಯಂಥವರ ದೃಷ್ಟಿಯಲ್ಲಿ ಇದು ದೇಶದ್ರೋಹವಾಗಿ ಕಂಡರೆ ಆಶ್ಚರ್ಯವಿದೆಯೇ? ಯಾವುದೇ ಹೋರಾಟಗಳು ತನ್ನಿಂದ ತಾನಾಗಿ ಬೆಳೆದು ಬರಲಿಲ್ಲ. ಸ್ವಾತಂತ್ರ್ಯದ ಮಹದಾಶೆಯಿಂದ ಜೀವದ ಹಂಗು ತೊರೆದು ಕಮ್ಯುನಿಸ್ಟರು ಹೋರಾಟಗಳಿಗೆ ನಾಯಕತ್ವ ನೀಡಿದ್ದಾರೆ. ಹೋರಾಡಿದ್ದಾರೆ. ತ್ಯಾಗ ಬಲಿದಾನಗಳನ್ನು ಮಾಡಬೇಕಾಗಿ ಬಂದಾಗ ಹಿಂಜರಿಯದೆ ಎದೆಯೊಡ್ಡಿ ನಿಂತು ಹುತಾತ್ಮರಾಗಿದ್ದಾರೆ. 1920 ರಿಂದ 1947 ರವರೆಗೆ ಏನೆಲ್ಲ ತ್ಯಾಗಗಳನ್ನು ಮಾಡಬೇಕಾಗಿ ಬಂದಾಗಲೂ ಜೈಲು ಲಾಕಪ್ಪು ಚಿತ್ರಹಿಂಸೆಗಳಲ್ಲಿ ಅಂಜದೆ ಅಳುಕದೆ, ಹೋರಾಡಿದ ಪರಂಪರೆಯೂ ಕಮ್ಯುನಿಸ್ಟರಿಗೇ ಇದೆ. ಈ ಹೋರಾಟಗಳಿಂದ ಬ್ರಿಟೀಷರಂತೆ ಈ ದೇಶದ ಭಂಡವಾಳಗಾರರ ರಾಷ್ಟ್ರೀಯ ನಾಯಕತ್ವಕ್ಕೆ ಸ್ವಾತಂತ್ರ್ಯ ಹೋರಾಟಕ್ಕೆ ಕರೆಕೊಡುವ ನೈತಿಕ ಧೈರ್ಯವೂ ಇರಲಿಲ್ಲ.

ಕೊಟ್ಟರೆ ಕಮ್ಯುನಿಸ್ಟರು ಈ ಹೋರಾಟಗಳನ್ನು ಮುಂದುವರಿಸಿ ಹೋರಾಟದ ಅಲೆಗಳು ಭುಗಿಲೇಳಬಹುದು


ದೇವಿಡ್ ಕರ್ಕಡ, ಉಡುಪಿ

ಎಂಬ ಭಾವನೆಯಿಂದ ರಾಷ್ಟ್ರೀಯ ನಾಯಕರು ದೇಶದ ವಿಭಜನೆಗೆ ಒಪ್ಪಿ ಸಂಧಾನದ ಮೂಲಕ ಸ್ವಾತಂತ್ರ್ಯ ಪಡೆದರು. ಇದು ಜನತೆಗೆ, ದೇಶಕ್ಕೆ ಬಗೆದ ದ್ರೋಹವಾಗಿತ್ತು. ಕಾಮನ್‌ವೆಲ್ತ್‌ನ ಒಳಗೆ ಉಳಿಯುವುದು, ಇವೇ ಮೊದಲಾದ ಶರತ್ತುಗಳು. ಪಂಜಾಬಿನ ಗಧರ್ ಪಕ್ಷದ, ಭಗತ್‌ಸಿಂಗ್ ಅನುಯಾಯಿಗಳು, ಬಂಗಾಳದ ಚಿತ್ತಗಾಂಗ್ ಕ್ರಾಂತಿವೀರರಾದ (ಸೂರಜ್‌ಸೇನ) ಸೂರನ್ ಸೇನ್ (ಮಾಸ್ಟರ್‌ದಾ) ಅನಂತಸಿಂಗ್, ಗಣೇಶ ಘೋಷ್, ಪ್ರೀತಿ ವದಾಂದಾರ್, ಕಲ್ಪನಾ ದತ್ ಇವರ ಅನುಯಾಯಿಗಳೆಲ್ಲರೂ ಹೆಚ್ಚಿನವರು. ಒಂದೋ ಕಾಂಗ್ರೆಸಿಗರಾಗಿ, ಇಲ್ಲವೇ ಕ್ರಾಂತಿಕಾರಿಗಳಾಗಿ ಜೈಲಿಗೆ ಹೋಗುವಾಗ ಅಂಡಮಾನ್ "ಕರಿನೀರ" ಶಿಕ್ಷೆಗೆ ಗುರಿಯಾದವರು. ಆಗ ಕೆಲವರು ಕಮ್ಯುನಿಸ್ಟರಾಗಿರಲಿಲ್ಲ. ಆದರೇ ಅವರೆಲ್ಲರೂ ದೀರ್ಘ ಜೈಲು ಶಿಕ್ಷೆಯಲ್ಲಿ ಆಳವಾದ ಅಭ್ಯಾಸದ ನಂತರ, ಸ್ವಾತಂತ್ರ್ಯ ಬಂದ ಬಳಿಕ ಕಮ್ಯುನಿಸ್ಟರಾಗಿ ಜೈಲಿನಿಂದ ಹೊರಬಂದರು. ಯಾರು 1942 ಭಾರತದಿಂದ ತೊಲಗಿರೆಂದು ಚಳುವಳಿಗೆ ಕರೆ ನೀಡಿದರೋ ಅವರಲ್ಲಿ ಶ್ರೀಮತಿ ಅರುಣ ಆಸಫ್ ಆಲಿ, ಅಜಾದ್ ಆಲಿ ಸೇರಿದಂತೆ ಅಜಾದ್ ಹಿಂದ್ ಸೇನೆಯ ಕ್ಯಾಪ್ಟನ್ ಲಕ್ಷ್ಮಿ ಮೊದಲಾದವರೆಲ್ಲ ಕಮ್ಯುನಿಸ್ಟ್ ಪಕ್ಷವನ್ನು ಅಭಿಮಾನದಿಂದ ಸೇರಿದರೆಂದರೆ ಕಮ್ಯುನಿಸ್ಟರು ದೇಶಾಭಿಮಾನಿಗಳಾಗಿದ್ದರೆಂಬುದನ್ನು ಯಾರು ಒಪ್ಪಲಿ ಬಿಡಲಿ ಇತಿಹಾಸ ಇದನ್ನು ನಿರ್ಣಯಿಸಿಯೇ ನಿರ್ಣಯಿಸುತ್ತದೆ. ತ್ಯಾಗ ಹೋರಾಟ ಬಲಿದಾನಗಳಿಂದ ಈ ದೇಶದಲ್ಲಿ ಕಮ್ಯುನಿಸ್ಟ್ ಚಳುವಳಿ ಬೆಳೆದು ಬಂದಿದೆ. 1942 ರಲ್ಲಿ ಪಕ್ಷದ ಪ್ರಧಾನ ಕಾಯದರ್ಶಿಯಾಗಿದ್ದ ಕಾಂ.ಪೂರ್ಣಚಂದ್ರ, ಜೋಶಿಯವರನ್ನು (ಅದುವರೆಗೆ ಸಮಾಜವಾದಿಗಳಂತೆ ಕಮ್ಯುನಿಸ್ಟ್‌ರೂ ಎಲ್ಲರೂ ಸೇರಿ ಕಾಂಗ್ರೆಸ್ಸಿನಲ್ಲಿದ್ದರು) ಕಾಂಗ್ರೆಸ್‌ನಿಂದ ಹೊರಹಾಕಲಾಯಿತು. ಆ ಸಂದರ್ಭದಲ್ಲಿ ಸುಪ್ರಸಿದ್ಧ ನ್ಯಾಯವಾದಿಗಳಾಗಿದ್ದ ಕಾಂ.ಎ.ಎಸ್. ಆರ್.ಛಾರಿಯವರು ಬರೆದ ಲೇಖನದಲ್ಲಿ "ಭಾರತದಲ್ಲಿ ಕಮ್ಯುನಿಸ್ಟ್ ಪಕ್ಷ ಉಳಿಯುವುದೇ? ಎಂಬ ಲೇಖನವನ್ನು ಮುಂಬಾಯಿಯ ಆಂಗ್ಲ ಪತ್ರಿಕೆಯೊಂದರಲ್ಲಿ ಬರೆದಿದ್ದರು. ಇಂದಿಗೆ 61 ವರ್ಷಗಳಲ್ಲಿ ಕಮ್ಯುನಿಸ್ಟ್ ಚಳುವಳಿ ಹಾದು ಬಂದಿದೆ. ಪಶ್ಚಿಮ ಬಂಗಾಳ ಕೇರಳ, ತ್ರಿಪುರಾ ಗಳಲ್ಲಿ ದೊಡ್ಡ ರಾಜಕೀಯ ಶಕ್ತಿಯಾಗಿದೆ. ಈ ಯಾವ ಹಿನ್ನೆಲೆಯನ್ನು ತಿಳಿಯದ ಮಂದಿ ಕಮ್ಯುನಿಸ್ಟರನ್ನು ದೇಶ ದ್ರೋಹಿಗಳೆಂದು ಜರೆಯುತ್ತಾರೆ ಅಷ್ಟೆ.

ದಾಬೋಲ್ ಸುಳಿಯಲ್ಲಿ ಭಾರತ


ನೀರಿನ ಸುಳಿಯಲ್ಲಿ ಸಿಕ್ಕವರು ತಪ್ಪಿಸಿಕೊಂಡು ಬರುವುದು ಬಹಳ ಕಷ್ಟ. ಧಾಬೋಲ್ ವಿದ್ಯುತ್ ಉತ್ಪಾದನಾ ಯೋಜನೆ ಎನ್ರಾನ್‌ಗಳ ಸುಳಿಯಲ್ಲಿ ಸಿಕ್ಕಿರುವ ಭಾರತಕ್ಕೂ ಅಂತಹುದೇ ಸ್ಥಿತಿಯಿದೆ. ವ್ಯತ್ಯಾಸವಿಷ್ಟೆ. ಸುಳಿಯಲ್ಲಿ ಯಾರೂ ತಿಳಿದೂ ತಿಳಿದೂ ಸಿಕ್ಕಿಕೊಳ್ಳುವುದಿಲ್ಲ. ಭಾರತದ ಸರ್ಕಾರಗಳು ತಿಳಿದೂ ತಿಳಿದೂ ಈ ಯೋಜನೆಯ ಸುಳಿಯಲ್ಲಿ ಸಿಕ್ಕವು.

ಎನ್ರಾನ್‌ನ ಬಗ್ಗೆ, ಅದರ ವಿದ್ಯುತ್ ಯೋಜನೆಗಳ ಅನುಭವಗಳ ಬಗ್ಗೆ, ಅದರ ಧಾಬೋಲ್ ಯೋಜನೆಯ ಒಳ ಹುನ್ನಾರಗಳ ಬಗ್ಗೆ ಸಾಕಷ್ಟೇ ಚರ್ಚೆಯಾಗಿತ್ತು. ಮಾಧ್ಯಮಗಳಲ್ಲಿ ಕೇಂದ್ರದ ಸರ್ಕಾರಗಳು ಇದು ಒಳ್ಳೆಯ ಯೋಜನೆ ನಮ್ಮ ವಿದ್ಯುತ್ ಸಮಸ್ಯೆಗಳು ಪರಿಹಾರವಾಗಲು ಇಂತಹ ಹಲವು ಯೋಜನೆಗಳು ಬೇಕು ಎಂದವು. ಈ ಯೋಜನೆಗಳಲ್ಲಿ ಹೂಡಿಕೆ ಮಾಡುವವರಿಗೆ ನಿರ್ಧಿಷ್ಟ ಪ್ರತಿಫಲ ನೀಡುವ ಜಾಮೀನನ್ನು ಸರ್ಕಾರ ನೀಡಿತು.

ಎನ್ರಾನ್ ಎಂಬ ಕಂಪನಿ ಜಗತ್ತಿಗೇ ಚಳ್ಳೆಹಣ್ಣು ತಿನ್ನಿಸುವ ಮೋಸದ ಕಂಪನಿ ಎಂಬುದು ಬೆಳಕಿಗೆ ಬಂತು. ಅಮೇರಿಕದ ಸರ್ಕಾರದ ಜೊತೆ ಸಖ್ಯ ಬೆಳೆಸಿಕೊಂಡಿರುವ ಕಂಪನಿಯೂ ಹೌದು. ಧಾಬೋಲ್‌ನ ವಿದ್ಯುತ್ ಗಗನದ ಬೆಲೆಯಲ್ಲಿ ಲಭ್ಯವಾಗತೊಡಗಿತು. ಎನ್ರಾನ್ ಮುಳುಗಿತು. ಇದರಿಂದ ನಮ್ಮ ದೇಶದ ಹಲವು ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳು ನಷ್ಟ ಅನುಭವಿಸಿದವು.

ಈಗ ಈ ಯೋಜನೆಯಲ್ಲಿ ಇನ್ನುಳಿದ ಪಾಲುದಾರರಾದ ಜಿಇ ಮತ್ತು ಬೆಕ್ಟೆಲ್ 1.2 ಶತಕೋಟಿ ಡಾಲರುಗಳ ಮೊಕದ್ದಮೆಯನ್ನು ಭಾರತ ಸರ್ಕಾರದ ವಿರುದ್ಧ ಹೂಡಿವೆಯಂತೆ. ಧಾಬೋಲ್ ವಿದ್ಯುತ್ ಘಟಕವನ್ನು ಮುಚ್ಚಿರುವುದರಿಂದ ಇಂತಹ ಪರಿಸ್ಥಿತಿ ಉಂಟಾಗಿದೆ.


ಭಾರತ ಸರ್ಕಾರ ಮತ್ತು ಮಹಾರಾಷ್ಟ್ರ ಸರ್ಕಾರ ಈ ವಿದ್ಯುತ್ ಯೋಜನೆ. ಕಾರ್ಯರೂಪದಲ್ಲಿರುವುದನ್ನು ತಡೆದಿವೆ ಎಂದು ಈ ಕಂಪನಿಗಳು ಆಪಾದನೆ ಮಾಡಿವೆ.



ಜಿಇ ಮತ್ತು ಬೆಕ್ಟಲ್ ಕಂಪನಿಗಳ ಕೆಲವು ಆಸ್ತಿಗಳನ್ನು ಭಾರತ ಸರ್ಕಾರ ಮುಟ್ಟುಗೋಲು ಹಾಕಿಕೊಂಡಿದೆ. ಅಮೇರಿಕದ ನ್ಯಾಯ ಮಂಡಳಿಯೊಂದು ಭಾರತ ಮತ್ತು ಅದರ ಏಜೆಂಟರುಗಳು ಇವರ ಹೂಡಿಕೆಗಳನ್ನು ತೆಗೆದುಕೊಂಡಿರುವುದು ಅಂತರಾಷ್ಟ್ರೀಯ ಕಾನೂನಿನ ಉಲ್ಲಂಘನೆ. ಆದ್ದರಿಂದ ಈ ಎರಡು ಕಂಪನಿಗಳಿಗೆ ಭಾರತ ಸರ್ಕಾರ 2857 ದಶಲಕ್ಷ ಡಾಲರುಗಳನ್ನು ನೀಡಬೇಕು ಎಂದು ಅಮೇರಿಕದ ಸರ್ಕಾರಕ್ಕೆ ಹೇಳಿದೆ. ಈ ತೀರ್ಮಾನದ ಪ್ರಕಾರ ಈ ಕಂಪನಿಗಳಿಗೆ ಹಣ ಪಾವತಿಸಿದ ನಂತರ ಅಮೇರಿಕದ ಸರ್ಕಾರ ಭಾರತದ ಸರ್ಕಾರದಿಂದ ಈ ಮೊತ್ತವನ್ನು ಕೇಳಬಹುದು.

ಅಮೇರಿಕದ ಎನ್ರಾನ್ ನಮ್ಮ ದೇಶದಲ್ಲಿ ಬಂದು ಮಾಡಿದ ಅನಾಚಾರಗಳಿಗೆ ಯಾವುದೇ ಪರಿಹಾರವನ್ನು ಭಾರತ ಸರ್ಕಾರ ಕೇಳುವಂತಿಲ್ಲ. ಆದರೆ ಅಮೇರಿಕದ ಸರ್ಕಾರ ಭಾರತದಿಂದ ಇಂತಹ ಪರಿಹಾರ ಕೇಳಬಹುದು. ಇದು ಅಂತರಾಷ್ಟ್ರೀಯ ಕಾನೂನು. ಹೇಗಿದೆ ಈ ನ್ಯಾಯ.

ಈ ಧಾಬೋಲ್‌ನ ದುಃಖಗಳು ಭಾರತಕ್ಕೆ ಒಂದೇ? ಎರಡೆ?



ಎಲ್ಲಿದೆ ಬೆಳವಣಿಗೆ

ಉದ್ಯಮಪತಿಗಳ ಸಂಘಟನೆಗಳು ಸರ್ಕಾರ ಎಲ್ಲವೂ ಉದ್ದಿಮೆಗಳ ಬೆಳವಣಿಗೆ ದರ ಹೆಚ್ಚುವ ಲಕ್ಷಣ ಕಾಣುತ್ತಿದೆ ಎಂದು ಹೇಳುತ್ತಲೇ ಬಂದಿವೆ. ಹಾಗೆ ಬೆಳವಣಿಗೆ ಆಗತೊಡಗಿದ್ದರೆ ಅದು ಒಳ್ಳೆಯ ಸುದ್ದಿಯೇ ಆಗಿರುತ್ತಿತ್ತು. ಅದರೆ ಇದು ಸುಳ್ಳು ಎಂಬುದಕ್ಕೆ ಪುರಾವೆಗಳು ದೊರೆಯುತ್ತಿವೆ.

ಬ್ಯಾಂಕುಗಳಿಂದ ಉದ್ದಿಮೆಗಳು ಪಡೆಯುತ್ತಿರುವ ಸಾಲದ ಪ್ರಮಾಣವನ್ನು ನೋಡಿದರೆ ಈ ಬೆಳವಣಿಗೆ ಸುದ್ದಿಯ ಬಂಡವಾಳ ಗೊತ್ತಾಗಿಬಿಡುತ್ತದೆ. ಬ್ಯಾಂಕುಗಳ ಒಟ್ಟು ಸಾಲದ ಪ್ರಮಾಣ (ಆಹಾರ ಮತ್ತು ಆಹಾರೇತರ ಸಾಲಗಳು) ಹೆಚ್ಚಾಗಿದೆಯಂತೆ. ಅದರೆ ಈ ಹೆಚ್ಚಳ ಕಳೆದ ವರ್ಷಕ್ಕಿಂತ ಕಡಿಮೆಯಾಗಿದೆ, ಒಳ್ಳೆಯ ಮ[illegible] ಬೆಳೆಯಾಗಿರುವುದರಿಂದ ಬೆಳವಣಿಗೆ ಹೆಚ್ಚಾಗುವ ಸಾಧ್ಯತೆ ಇರಬಹುದು. ಆದರೆ ಈ ಉದಾರೀಕರಣ ತಂದಿರುವ ಹಿಂಜರಿತದ ಸ್ಥಿತಿಯಲ್ಲಿ ಬೆಳವಣಿಗೆ ಬಹು ಕಷ್ಟದ ವಿಷಯ. ಆದರೆ ಉದಾರೀಕರಣವಾದಿಗಳಿಗೆ ಹೇಳಿಕೊಳ್ಳಲು ವಿಷಯ ಬೇಕಲ್ಲ.

ಸೋತ ಮೇಲೆ ರಣಕಹಳೆ ಊದುವವರು

ಕೇಂದ್ರದ ಹಣಕಾಸು ಸಚಿವ ಜಸ್ವಂತ್ ಸಿಂಗರು ಭಾರತ ತನ್ನ ಕೃಷಿ ಸಹಾಯಧನಗಳಲ್ಲಿ ಕಡಿತ ಮಾಡುವುದಿಲ್ಲ ಎಂದು ಘೋಷಣೆ ಮಾಡಿದ್ದಾರೆ. ಐಎಂಎಫ್ ವಿಶ್ವಬ್ಯಾಂಕ್‌ಗಳು ಮತ್ತು ಅಮೇರಿಕದ ನೇತೃತ್ವದ ಅಭಿವೃದ್ಧಿ ಹೊಂದಿದ ದೇಶಗಳು ಹೇಳಿದಂತೆಲ್ಲ ದೇಶದ ಆರ್ಥಿಕದ ಉದಾರೀಕರಣ ಮಾಡಿದ ಈ ಸರ್ಕಾರ ಈಗ ಕ್ಯಾನ್‌ಕುನ್‌ನಲ್ಲಿ ಮಾತುಕತೆಗಳು ಮುರಿದು ಬಿದ್ದಿರುವ ಹಿನ್ನೆಲೆಯಲ್ಲಿ ಪೌರುಷದ ಮಾತುಗಳನ್ನಾಡುತ್ತಿರುವುದು ವಿಚಿತ್ರವಾಗಿ ಕಾಣುತ್ತದೆ. ಅಭಿವೃದ್ಧಿ ಹೊಂದಿದ ದೇಶಗಳು ತಮ್ಮ ಕೃಷಿಗೆ 320 ಶತಕೋಟಿ ಡಾಲರುಗಳ ಸಹಾಯಧನ ನೀಡುತ್ತಿವೆ. ನಾವು ನಮ್ಮ ಕೃಷಿಗೆ ನೀಡುತ್ತಿರುವ ಸಹಾಯಧನವನ್ನು ಕಡಿತ ಮಾಡಲು ಸಾಧ್ಯವಿಲ್ಲ ಇದು ಅವರ ಹೇಳಿಕೆ.

ಮೂರನೇ ಜಗತ್ತಿನ ಎಲ್ಲ ದೇಶಗಳನ್ನು ಸಂಘಟಿಸಿ ನೇತೃತ್ವ ನೀಡಿ ಈ ವ್ಯಾಪಾರ ಮಾತುಕತೆಗಳಲ್ಲಿ ಅಭಿವೃದ್ಧಿ ಹೊಂದಿದ ದೇಶಗಳ ಮೇಲೆ ಒತ್ತಡ ಹೇರುವ ಕೆಲಸ ಮಾಡಬೇಕಾಗಿದ್ದ ಭಾರತದ ಸ್ಥಾನವನ್ನೇ ಬಿಟ್ಟುಕೊಟ್ಟಿರುವ ಈ ಸರ್ಕಾರದ ಈ ಮಾತುಗಳು ನಗೆತರಿಸುವಂತಹದ್ದು ಅಲ್ಲದೆ ದೇಶದ ರೈತರ ಜೀವನವನ್ನು ನರಕಗೊಳಿಸಿರುವ ಈ ಸರ್ಕಾರ ಈಗ ಇಂತಹ ಪೌರುಷದ ಮಾತನ್ನಾಡುವುದರ ಅರ್ಥವೇನು

ಇತಿಹಾಸದ ಪುಟಗಳಿಂದ

ಲ್ ಇಂಟಲಿಜೆನ್ಸ್ ಏಜೆನ್ಸಿ(ಸಿಐಎ) ಎಂದರೆ ರಿಕಾದ ಗುಪ್ತಚರ ಸಂಸ್ಥೆ. ಇದರ ಕೆಲಸ ಕೇವಲಗುಪ್ತ ಂತಿಗಳನ್ನು ಸಂಗ್ರಹಿಸುವುದು ಮಾತ್ರವಲ್ಲ, ರನೇ ಜಗತ್ತಿನ ರಾಷ್ಟ್ರಗಳಲ್ಲಿ ಪ್ರಗತಿಪರ ಶಕ್ತಿಗಳು ಅಧಿಕಾರಕ್ಕೆ ಂತೆ ತಡೆಯುವುದು, ಅಧಿಕಾರಕ್ಕೆ ಬಂದರೆ ಕಿತ್ತೊಗೆಯಲು ಅಮಾನವೀಯ ಕೃತ್ಯಗಳನ್ನು ನಡೆಸುತ್ತದೆ. 30 ವರ್ಷಗಳ ೆ ಚಿಲಿಯಲ್ಲಿ ಇಂತಹುದೇ ನಡೆದಿತ್ತು...

ಸೆಪ್ಟೆಂಬರ್ 11 ಅಲೆಂದೆಯವರನ್ನು ಕೊಂದ ಸಿಐಎ ಕುಕೃತ್ಯಕ್ಕೆ 30 ವರ್ಷ



ಸೆಪ್ಟೆಂಬರ್ 11 ಎಂದಾಕ್ಷಣ ಥಟ್ಟನೆ ನೆನಪಿಗೆ ವುದು ಎರಡು ವರುಷಗಳ ಹಿಂದೆ ರಿಕಾದ ವಿಶ್ವವ್ಯಾಪಾರ ಕೇಂದ್ರ(ಟ್ವಿ) ಮತ್ತು ಗಾನ್ ಮೇಲೆ ನಡೆದ ಭಯೋತ್ಪಾದಕ ದಾಳಿ. ೆ ಮುವತ್ತು ವರ್ಷಗಳ ಹಿಂದೆ 1973ರ ಬರ್ 11 ರಂದು ಚಿಲಿ ದೇಶದ ಚುನಾಯಿತ ಕ್ಷ ಸಲ್ವಡೋರ್ ಅಲೆಂದೆಯವರನ್ನು ಸಿಐಎ ತ ಪ್ರತಿಕ್ರಾಂತಿಗಳು ಗುಂಡಿಕ್ಕಿ ಕೊಂದರು.

ಸಿಐಎ ಎಂದರೆ ಅಮೆರಿಕಾದ ಗುಪ್ತಚರ ಸಂಸ್ಥೆ. ರ ಕೆಲಸ ಬೇರೆ ಬೇರೆ ದೇಶಗಳ ಗುಪ್ತಚರ ಹಿತಿಗಳನ್ನು ಸಂಗ್ರಹಿಸುವುದು ಮಾತ್ರವಲ್ಲ, ಮ್ರಾಜ್ಯಶಾಹಿ ವಿರೋಧಿ ಪ್ರಗತಿಪರ ಶಕ್ತಿಗಳನ್ನು, ಗಳನ್ನು ಇಲ್ಲವಾಗಿಸುವ ಕೃತ್ಯವನ್ನು ನಡೆಸುತ್ತದೆ. ಗಳ ಸರ್ಕಾರಗಳನ್ನೇ ಬುಡಮೇಲು ಮಾಡಿ ುಳಿಸುತ್ತದೆ. ಇದಕ್ಕೆ ಅಲ್ಲಿನ ಅಧಿಕಾರರೂಢ ದ ಕೃಪೆ ಇರುತ್ತದೆ.

ತನ್ನ ದೇಶದ ಮೇಲೆ ನಡೆದ ಭಯೋತ್ಪಾದಕ ಯನ್ನು ಪ್ರಬಲ ಪ್ರಚಾರದೊಂದಿಗೆ ಆಚರಿಸುವ ರಿಕಾ, ಚಿಲಿ ದೇಶದ ಸಮಾಜವಾದಿ ಪಕ್ಷದ ಳಿತವನ್ನು ಅಂತ್ಯಗೊಳಿಸಿದ ಬಗೆಯನ್ನು ಮರೆ ಚುತ್ತಿದೆ. ಆದರೆ ಚಿಲಿ ದೇಶದ ಜನತೆ ಅಲ್ಲಿನ ಧಾನಿ ಸಾಂಟಿಯಾಗೋದಲ್ಲಿ ಅಧ್ಯಕ್ಷರ ವಸತಿ, ಮೊನೆಡಾ' ಎದುರು ಬೃಹತ್ ಪ್ರತಿಭಟನೆ ಸಿದರು. 30 ವರ್ಷದ ಹಿಂದೆ ಅಮೆರಿಕಾ ಕೋದನೆಯಲ್ಲಿ ನಡೆದ ಪ್ರತಿಕ್ರಾಂತಿಯನ್ನು ಡಿಸಿದರು.

ಇದೇ ಅಧ್ಯಕ್ಷರ ವಸತಿಯ ಲೆ 1973 ರಲ್ಲಿ ಸೆಪ್ಟೆಂಬರ್ ರಂದು ಚಿಲಿಯ ಮಿಲಿಟರಿ ಾನಗಳು ಧಾಳಿ ನಡೆಸಿದ್ದವು. ಧಾಳಿಗೆ ಅಮೆರಿಕಾದ ಗುಪ್ತಚರ ಸ್ಥೆ (ಸಿಐಎ) ಹಣ ನೀಡಿತ್ತು ದ್ಸ್ರು ದಾಖಲೆಗಳಿಂದ ರಂಗಗೊಂಡಿದೆ. ಅಂದಿನ ಟರಿ ಮುಖ್ಯಸ್ಥ ಜನರಲ್ ಆಗಸ್ಟ್ ಪಿನೊಶೆಟ್ ಗೆ ಆದೇಶ ನೀಡಿದ್ದ. ಇದಕ್ಕೆ ಕುಮ್ಮಕ್ಕು ನೀಡಿದ್ದು ನ ಅಮೆರಿಕಾದ ಅಧ್ಯಕ್ಷ ನಿಕ್ಸನ್‌ರವರ ಿತ. ಅದಕ್ಕಾಗಿ ಕೋಟ್ಯಾಂತರ ಡಾಲರುಗಳನ್ನು ನಂತೆ ಖರ್ಚು ಮಾಡಲಾಗಿತ್ತು.

ಈ ಧಾಳಿಯ ಸಂದರ್ಭಲ್ಲಿ ಅಲೆಂದೆ ಾಗಲಿಲ್ಲ. ಬದಲಾಗಿ ತನ್ನಲ್ಲಿದ್ದ ಎ.ಕೆ.-47 ಂದ ಕೊನೆಯವರೆಗೂ ಹೋರಾಡಿದರು. ಸತ್ತೆಯನ್ನು ಉಳಿಸಲು ಹೆಣಗಾಡಿದರು. ೂ ಪ್ರತಿಕ್ರಾಂತಿಗಳ ಶಕ್ತಿಯೇ ಮೇಲಾಗಿ ನ್ನಪ್ಪಬೇಕಾಯ್ತು.

ಪಿನೊಶೆಟ್ ಅಧ್ಯಕ್ಷನಾದ ನಂತರ ಸಿಐಎ ುಲ್ಲಿರುವ ಎಡ ಚಳುವಳಿಯ ಮುಖಂಡರ, ರ್ಯಕರ್ತರ ಹೆಸರುಗಳನ್ನು ಒದಗಿಸಿತು. ಆ ುಲ್ಲಿದ್ದ ಸಾವಿರಾರು ಜನ ಕಾಣೆಯಾದವರ ೆ ಸೇರಲ್ಪಟ್ಟರು. ಅಂದರೆ ಅವರನ್ನು ಲಾಯಿತೇ ಅಥವಾ ಹೊರದೇಶಗಳಿಗೆ ಾಯಿತೇ ಏನೆಂದು ತಿಳಿಯಲಿಲ್ಲ. ಚಿಲಿಯ ಗುಪ್ತಚರ ಇಲಾಖೆಯ ಪೋಲೀಸರು ಸಾಧಾರಣ 4000 ಪ್ರಗತಿಪರರನ್ನು ಕೊಂದು ಹಾಕಿದರೆ, 70,000 ಕ್ಕೂ ಹೆಚ್ಚು ಜನರನ್ನು ತೀವ್ರ ಹಿಂಸೆಗೆ ಒಳಪಡಿಸಲಾಯಿತು. ಸಾವಿರಾರು ಜನರು ದೇಶವನ್ನೇ ತ್ಯಜಿಸಿದರು.

ಸ್ಯಾಂಟಿಯಾಗೋದಲ್ಲಿನ ಪುಟ್‌ಬಾಲ್ ಕ್ರೀಡಾಂಗಣ ರಣರಂಗವಾಗಿತ್ತು. ಸಾರ್ವಜನಿ ಕರೆದುರೇ ನೂರಾರು ಜನರನ್ನು ಮೆಷಿನ್‌ಗನ್‌ಗಳಿಂದ ಕೊಂದು ಹಾಕಿದ ಹೇಯ ಕೃತ್ಯವನ್ನು ಮರೆಯಲಾಗದು.

1973 ರಿಂದ 1990 ರ ವರೆಗೆ 17ವರ್ಷಗಳ ಕಾಲ ಪಿನೊಶೆಟ್ ಅವರ ಬರ್ಬರ ಸರ್ವಾಧಿಕಾರ ಆಡಳಿತ ಬೆಚ್ಚಿ ಬೀಳಿಸುವಂತದ್ದು. 1990 ರಲ್ಲಿ ಮಾತ್ರವೇ ಪ್ರಜಾಪ್ರಭುತ್ವದ ಪುನರ್‌ಸ್ಥಾಪನೆ ಸಾಧ್ಯವಾಗಿತ್ತು.

ಅಲೆಂದೆ ಕಮ್ಯುನಿಸ್ಟರಾಗಿರಲಿಲ್ಲ. ಆದರೆ ಅಲ್ಲಿನ ಸಮಾಜವಾದಿ ಪಕ್ಷದ ಮುಖಂಡರಾಗಿದ್ದ ಅವರು ಬಡ ಜನರ ಪರವಾಗಿ ಭೂಸುಧಾರಣೆ ಮತ್ತು ಆರ್ಥಿಕ ಸುಧಾರಣೆಗಳನ್ನು ಜಾರಿ ಗೊಳಿಸಿದ್ದರು. ಅಮೆರಿಕಾದ ಬಹುರಾಷ್ಟ್ರೀಯ ಕಂಪನಿಗಳ ಹತೋಟಿಯಲ್ಲಿದ್ದ ಚಿಲಿ ದೇಶದ ಕೈಗಾರಿಕೆಗಳ ಮೇಲೆ ನಿಯಂತ್ರಣ ಸಾಧಿಸಿ, ದೇಶೀಯ ಕೈಗಾರಿಕೆಗಳಿಗೆ ಉತ್ತೇಜನ ನೀಡಿದ್ದರು. ಇದು ಅಮೇರಿಕಾಕ್ಕೆ ಸಹಿಸಲು ಸಾಧ್ಯವಾಗಿಲ್ಲ. ಆದ್ದರಿಂದಲೇ ಅಲೆಂದೆಯವರ ಹತ್ಯೆಗೆ ಅಮೆರಿಕಾದ ಸಹಾಯಹಸ್ತ.

ಭಯೋತ್ಪಾದಕ ಧಾಳಿಯನ್ನು ಪ್ರಬಲ ಪ್ರಚಾರದೊಂದಿಗೆ ಆಚರಿಸುವ ಅಮೆರಿಕಾ, ಚಿಲಿ ದೇಶದ ಸಮಾಜವಾದಿ ಪಕ್ಷದ ಆಡಳಿತವನ್ನು ಅಂತ್ಯಗೊಳಿಸಿದ ಬಗೆಯನ್ನು ಮರೆಮಾಚುತ್ತಿದೆ.

ಸರ್ವಾಧಿಕಾರಿಯಿಂದ ಬಲಪಂಥಿಯರ ಕೈಗೆ ಅಧಿಕಾರ : 1990 ರಲ್ಲಿ ಚಿಲಿಯಲ್ಲಿ ಮಿಲಿಟರಿ ಸರ್ವಾಧಿಕಾರ ಕೊನೆಗೊಂಡು ಪ್ರಜಾಸತ್ತೆ ಸ್ಥಾಪನೆಯಾದರೂ ಹಿಂದೆ ಅಲೆಂದೆ ನೇತೃತ್ವದಲ್ಲಿದ್ದ ಸಮಾಜವಾದಿ ಪಕ್ಷವೇ ನಂತರದಲ್ಲಿ ಬಲಪಂಥೀಯರ ಕೈಗೊಂಬೆಯಾಯಿತು. ಸರ್ವಾಧಿಕಾರಿ ಪಿನೊಶೆಟ್ ಆರಂಭಿಸಿದ, ಅಮೆರಿಕಾ ಪ್ರೇರಿತ ಜಾಗತೀಕರಣ ನೀತಿಯನ್ನೇ ಅದು ಒಪ್ಪಿಕೊಂಡಿತು. ಪ್ರತಿ ಪಾರ್ಲಿಮೆಂಟರಿ ಕ್ಷೇತ್ರದಲ್ಲಿ ಇಬ್ಬರು ಸದಸ್ಯರನ್ನು ಆಯ್ಕೆ ಮಾಡಬೇಕೆಂದು ಕಾನೂನು ಮಾಡುವುದರ ಮೂಲಕ ಬಲಪಂಥೀಯ ಪ್ರತಿನಿಧಿಗಳ ಸಂಖ್ಯೆಯನ್ನು ಹೆಚ್ಚು ಮಾಡಿಕೊಂಡಿತು. ಮಾತ್ರವಲ್ಲ, ಅಲೆಂದೆ ಹತ್ಯೆಗೀಡಾದ ದಿನವನ್ನೇ ಆ ಪಕ್ಷವು ಕಮ್ಯುನಿಸ್ಟ್ ಮತ್ತು ಇತರೆ ಎಡಪಕ್ಷಗಳು, ಪ್ರತಿವರ್ಷ ಸೆಪ್ಟೆಂಬರ್ 11 ರ ಕರಾಳ ದಿನವನ್ನು ಆಚರಿಸುವುದನ್ನೇ ವಿರೋಧಿಸಿತು.

2003 ರ ಸೆಪ್ಟೆಂಬರ್ 11 ರಂದು ಚಿಲಿ ದೇಶದ ಎಡಪಕ್ಷಗಳ ನೇತೃತ್ವದಲ್ಲಿ ಪ್ರತಿಭಟನೆ ನಡೆಯುತ್ತಿದ್ದಾಗ, ಅಮೆರಿಕಾದ ಧ್ವಜವನ್ನು ಸುಟ್ಟ ಪ್ರಕರಣವನ್ನು ಚಿಲಿಯ ಅಧ್ಯಕ್ಷ ಲಾಗೋಸ್ ಖಂಡಿಸಿದ್ದು ಮಾತ್ರವಲ್ಲದೆ ಅಮೆರಿಕಾದ ರಾಯಭಾರಿ ಕಛೇರಿಗೆ ತೆರಳಿ ತಪ್ಪೊಪ್ಪಿಗೆಯನ್ನು ನೀಡಿದ್ದ ಪಿನೊಶೆಟ್ ಆಡಳಿತ ಅವಧಿಯಲ್ಲಿ ಬರ್ಬರ ಕೃತ್ಯ ನಡೆಸಿದ ಅಧಿಕಾರಿಗಳಿಗೆ ಸರಿಯಾದ ಶಿಕ್ಷೆ ನೀಡುವ ಕೆಲಸವೂ ಆಗಿಲ್ಲ.

ಲ್ಯಾಟಿನ್ ಅಮೆರಿಕಾ ದೇಶಗಳಲ್ಲಿ ಸಿಐಎ ಮಧ್ಯಪ್ರವೇಶ ಏಕೆ? ಈ ದೇಶಗಳು ಅಮೆರಿಕನ್ ಸಾಮ್ರಾಜ್ಯಶಾಹಿಯ ಆರ್ಥಿಕ ಮತ್ತು ರಾಜಕೀಯ ಧಾಳಿಗೆ ಆಗಿಂದ್ದಾಗ್ಗೆ ತುತ್ತಾಗುತ್ತಲೇ ಇವೆ. ಗೌತೆಮಾಲಾ, ಕ್ಯೂಬಾ, ನಿಕರಾಗುವಾ, ಚಿಲಿ - ಒಂದೆ ಎರಡೇ? ಎಲ್ಲಾ ರಾಷ್ಟ್ರಗಳ ಮೇಲೂ ಅಮೆರಿಕಾದ ಹದ್ದಿನ ಕಣ್ಣು. ಕಾರಣ ಅಮೆರಿಕಾದ ಸುತ್ತಮುತ್ತಲಿರುವ ಈ ರಾಷ್ಟ್ರಗಳೇನಾದರೂ ಸಮಾಜವಾದಿ ರಾಷ್ಟ್ರಗಳಾಗಿ ಪರಿವರ್ತನೆಗಳಾದಲ್ಲಿ, ಅಲ್ಲಿನ ಶೋಷಣೆ ಸಾಧ್ಯವಾಗುವುದಿಲ್ಲ. ಜನ ಎಚ್ಚೆತ್ತು ಕೊಳ್ಳುತ್ತಾರೆ. ತನ್ನ ಆಕ್ರಮಣ ಶೀಲತೆಗೆ ಕುತ್ತು ಬರುತ್ತದೆ.

ಕ್ಯೂಬಾದ ಕ್ರಾಂತಿಯ ನಂತರ ಅದೆಷ್ಟು ಬಾರಿ ಅಲ್ಲಿನ ವ್ಯವಸ್ಥೆಯನ್ನು ಕಿತ್ತೊಗೆಯಲು ಅಮೆರಿಕಾ ಹೊಂಚು ಹಾಕಿತ್ತು. ಫಿಡೆಲ್ ಕ್ಯಾಸ್ಟ್ರೋ ಅವರನ್ನು ಮುಗಿಸಲು ಪ್ರಯತ್ನ ನಡೆದಿತ್ತು.


ಆದ್ದರಿಂದಲೇ ಕ್ಯೂಬಾದ ಕ್ರಾಂತಿಯ ನಂತರ ಅದೆಷ್ಟು ಬಾರಿ ಅಲ್ಲಿನ ವ್ಯವಸ್ಥೆಯನ್ನು ಕಿತ್ತೊಗೆಯಲು ಅಮೆರಿಕಾ ಹೊಂಚು ಹಾಕಿತ್ತು? ಫಿಡೆಲ್ ಕ್ಯಾಸ್ಟ್ರೋ ಅವರನ್ನು ಮುಗಿಸಲು ಪ್ರಯತ್ನ ನಡೆದಿತ್ತು. ಕ್ಯೂಬಾ ಒಂದು ಪುಟ್ಟ ರಾಷ್ಟ್ರವಾದರೂ ಅಲ್ಲಿ ಸಮಾಜವಾದಿ ವ್ಯವಸ್ಥೆ ಮುಂದುವರಿಯುವುದು ಅಮೆರಿಕಾಕ್ಕೆ ತಡೆಯಲಾಗುವುದಿಲ್ಲ. ಏಕೆಂದರೆ ಸಮಾಜವಾದಿ ರಾಷ್ಟ್ರದ ಸಂದೇಶ ಉಳಿದದೇಶಗಳಿಗೆ, ಅಮೆರಿಕಾದ ಶೋಷಿತ ಜನರಿಗೆ ಮನದಟ್ಟಾದರೆ ಎನ್ನುವ ಭಯ.

ಮೂರನೇ ಜಗತ್ತಿನ ರಾಷ್ಟ್ರದಲ್ಲಿ ಗಣ್ಯ ಸ್ಥಾನವನ್ನು ಪಡೆದಿರುವ ಭಾರತದಲ್ಲೂ ಸಿಐಎ ನ ಕಾರ್ಯಚಟುವಟಿಕೆಗಳನ್ನು ಅಲ್ಲಗಳೆಯುವಂತಿಲ್ಲ. ಅಲ್ಲದೇ, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಶರಣಾಗತಿಯ ನೀತಿಯನ್ನು ತೋರಿಸುತ್ತಿದೆ. ಇಂತಹ ಸಂದರ್ಭದಲ್ಲಿ ಜನತೆ ಎಚ್ಚೆತ್ತು ಸಾಮ್ರಾಜ್ಯಶಾಹಿಯ ಕುಕೃತ್ಯದ ವಿರುದ್ಧ ಹೋರಾಡಬೇಕಿದೆ.

• ಬಿ.ಕೆ. ಶೆಟ್ಟಿ

ರಾಂಪುರ ಕಣ್ಣೀರ ಕಥೆ

ಆ ಕಟುಕರ ಮನಾ ಕರಗಲಿಲ್ಲ



ವರ್ಷಾನು ಮಳೆಯಿಲ್ದೆ ಹೊಲದಲ್ಲಿ ಬೆಳೆಯಿಲ್ದೆ
ಬರಗಾಲ ಬಂತಲ್ಲಾ !
ಊಟಿಲ್ದೆ ವಿಷ ಕುಡಿದು ಏಳೆಂಟು ಜನರು .

ಸತ್ತು ಹೋದರಲ್ಲಾ ! ಆತ್ಮಹತ್ಯೆಯಾದರಲ್ಲ!!
ಕನ್ನಡ ತಾಯಿಯ ಮಡಿಲಯಿಲ್ಲಿ ಕೊಪ್ಪಳ
ಜಿಲ್ಲೆಯೆಂಬುದೈತ
ಜಿಲ್ಲೆ ತುಂಬಾ ಬರಗಾಲ ಬಂದೈತ
ಕುಷ್ಟಗಿ ಎಂಬ ತಾಲೂಕು ತುಂಬಾ
ಹಳ್ಳಿಗಳ ಹೊಂದ್ಯೆತ!
ಆ ಮುಕ್ತಾ ರಾಂಪುರ ಕಥೆಯ ಕೇಳಿದರೆ
ಕಣ್ಣೀರು ಬರತೈತ (ಕಣ್ಣಾಗ) ಕಣ್ಣೀರು ಕೋಡಿಯಾಗಿ
ಹರಿತೈತ

ಹಳ್ಳೀಲಿ ಬಡವರಿಗೆ ದುಡಿಯಲು ಕೆಲಸಿಲ್ದೆ
ಊಟ ಇಲ್ಲದಾಯ್ತು !
ರೈತರ ದನಗಳು ಮೇವು ಕಾಣದೆ
ಕಟುಕರ ಪಾಲಾಯ್ತು
ಬಡವರು - ರೈತ ಮಕ್ಕಳ ಬದುಕುದು ಕಷ್ಟಾಯಿತ
ಕಣ್ಣೀರು ಹಾಕುತ ಹೊಟ್ಟೆಗೆ ತಣ್ಣೀರು
ಕುಡಿದು ಮಲಗೋದ್ಯಾತ! ಉಪವಾಸ ಕುಡಿದು
ಮಲಗೊದ್ಯಾತ

ಈ ಕಷ್ಟ ಸ್ಥಿತಿಯಲ್ಲಿ ರಾಂಪುರವೆಂಬುದು
ಪುಟ್ಟಗ್ರಾಮ ಐತ
ಆ ಪುಟ್ಟ ಗ್ರಾಮದಲ್ಲಿ ದಿಟ್ಟ ಬಡತನ
ತಾಂಡವಾಡತೈತ
ಬಡತನದ ವಕ್ರದೃಷ್ಟಿಗೆ ಬಡವರ ಬದುಕು
ಬರಡಾಯ್ತು
ಬದುಕುವುದೇ ಬ್ಯಾಡೆಂದು ಬಡವರೆಲ್ಲರೂ
ಸಾಯೋ ಸ್ತಿತಿ ಬಂತ! ವಿಷ ಕುಡಿದು ಸಾಯೋ
ಸ್ಥಿತಿ ಬಂತ ರಾಂಪುರದಲ್ಲಿ ರಾಮಪ್ಪನವರದು
ಹತ್ತುಜನ ಸಂಸಾರ
ಆ ಹತ್ತು ಜನರಲ್ಲಿ ಎಂಟು ಜನರು ಅಕ್ಕ ತಮ್ಮರ
ಬರಗಾಲದಲ್ಲಿ ಬೆಳೆಯಿಲ್ಲದೆ ಬಡತನದಿ
ಬದುಕು ನಡಿಸ್ಯಾರ, ಬೆಳೆದ ಬೆಳೆನೂ ಇಲ್ಲ ಬೆಲೆ
ಇಲ್ಲ ಬಿಡಿ
ಬಡತನದಿ ಕೂಳಿಲ್ದೆ ಎಷ್ಟೋ ದಿನವು
ಉಪವಾಸ ಮಲಿಗ್ಯಾರ ಅವರು ಉಪವಾಸ
ಮಲಗ್ಯಾರ

ಕೂಲಿ ಮಾಡುವ ಕೈಗಳಿಗೆ ಯಾರು
ಕೆಲಸ ಕೊಡಲೇ ಇಲ್ಲ
ಕೂಳಿಲ್ಲದೆ ಉಪವಾಸ ಮಲಗಿದರೂ ಕೂಡಾ
ಯಾರೂ ಕೇಳಲಿಲ್ಲ.
ಉಪವಾಸಕ್ಕಿಂತ ಸಾಯೋದೇ ಮೇಲೆಂದು
ಎಂದುಕೊಂಡರಲ್ಲ
ಊಟಕ್ಕೆ ಮೊದಲು ಏಳು ಜನರು
ವಿಷವ ಕುಡಿದರಲ್ಲ ಬೆಳಗಾಗುವುದರೊಳಗೆ ಇಲ್ಲ

ಏಳು ಜನರು ಸತ್ತಂತ ಸುದ್ದಿ ಸುತ್ತ ಹಬ್ಬಿತಲ್ಲ
ಸುದ್ದಿಯ ತಿಳಿದ ಸುತ್ತಲ ಬಡವರು
ಕಣ್ಣೀರ ಹಾಕ್ಯರಲ್ಲ
ಬರಗಾಲದಿಂದ ಬಡವರಿಗೆ ಈ ಗತಿ
ಬರಬಾರದಂದರಲ್ಲ
ಹೊಟ್ಟೆಯೊಳಗಿನ ಸಿಟ್ಟು ರಟ್ಟೇಲಿ ಇಲ್ಲದಾಯ್ತಲ್ಲ
ಸಿಟ್ಟು ಇಲ್ಲದಾಯ್ತಲ್ಲ.

ಸತ್ತವರು ಸುಟ್ಟು ಬೆಂಕಿಯಾದ ಮೇಲೆ
ಮಂತ್ರಿ ಬಂದನಲ್ಲ
ಊಟಿಲ್ದೆ ಬಡವರು ಸತ್ತರೂ ಮಂತ್ರಿಗೆ
ಕನಿಕರ ಬರಲಿಲ್ಲ
ಹಸಿವಿನ ಸಾವಲ್ಲ ರೋಗದಿಂದ
ಸತ್ತಾರ ಅಂದನಲ್ಲ
ಕಾಲಮೇಲೆ ಕಾಲ ಹಾಕಿ ಕ್ಯಾಬಿನೇಟ್‌ನಲ್ಲಿ ಕುಂತು
ಕಥೆಯ ಹೇಳ್ತನಲ್ಲಾ ಆ ಕಟುಕರ ಮನವ ಕರಗಲಿಲ್ಲ

ಈ ಘಟನೆ ನೋಡಿ ರೈತರು ಕೂಲಿಯವರು
ರೊಚ್ಚಿಗೇಳತೀವಿ
ಮಂತ್ರಿಯ ಮಾತನ್ನು ಖಂಡಿಸಿ ನಾವು
ಬೀದಿಗಿಳಿಯತೀವಿ
ಬಡವರ ಸಾವು ಆಗಬಾರದೆಂದು ಸಾರಿ ಹೇಳತೀವಿ
ಹೋರಾಟಕ್ಕೆ ಸಿದ್ಧರಾಗಿ ಕೂಲಿ ದಂಡನು ಸೇರಿ
ಬಾವುಟ ಹಿಡಿತಿವಿ ಕೈಯಲ್ಲಿ ಕೆಂಬಾವುಟ ಹಿಡಿತೀವಿ

• ಬಾಳಪ್ಪ ಎಂ. ಸಂಗಾಳ
ಕುಷ್ಟಗಿ


ಸಿನಿಮಾ

ಚಿತ್ರರಂಗದ ಸೌಹಾರ್ದತೆಗೆ ಎಲ್ಲರೂ ಕೈ ಜೋಡಿಸಬೇಕು

ಉದ್ಯಮದ ಹಲವರಿಂದ ರಾಜ್ ಕುಟುಂಬದ ಮೇಲೆ ಆಪಾದನೆಗಳು ಕೇಳಿ ಬರುತ್ತಿವೆ. ರಾಜ್ ಕುಟುಂಬ ಆತ್ಮಾವಲೋಕನ ಮಾಡಿಕೊಳ್ಳಬೇಕು. ತಪ್ಪುಗಳಾಗಿದ್ದಲ್ಲಿ ತಿದ್ದಿಕೊಳ್ಳಬೇಕು. ಇತರ ನಿರ್ಮಾಪಕರು ಸಹ ಜಗಳವನ್ನು ಬೀದಿಗೆ ತರದೆ ಮಾತುಕತೆಗಳಲ್ಲಿ ಬಗೆಹರಿಸಿಕೊಳ್ಳಬೇಕು. ಇದಕ್ಕೆ ರಾಜ್ ಮಧ್ಯಪ್ರವೇಶ ಮಾಡುವರೇ?

ಇತ್ತೀಚೆಗೆ ಕನ್ನಡ ಚಿತ್ರರಂಗದಲ್ಲಿ ಒಬ್ಬರ ಮೇಲೊಬ್ಬರಿಗೆ ಮಾತಿನ ಸಮರ ನಡೆಯುತ್ತಿದೆ. ಅಹಿತಕರ ಘಟನೆಗಳು ಸಂಭವಿಸುತ್ತಿವೆ. ಒಂದು ಕುಟುಂಬದಂತೆ ಇರಬೇಕಾದ ಚಿತ್ರರಂಗ ಹಲವು ಗುಂಪುಗಳಾಗಿ ಒಡೆದಿದೆ. ಅದರಲ್ಲೂ ಪ್ರತಿಷ್ಠಿತ 'ರಾಜ್ ಕುಟುಂಬ'ದ ಮೇಲೆ ಆಪಾದನೆಗಳ ಸರಮಾಲೆ ಹೆಚ್ಚುತ್ತಿದೆ. ಹಿಂದಿನ ದಶಕಗಳಲ್ಲಿ ರಾಜ್ ಕಡೆಗೆ ಬೆರಳು ತೋರಿಸುವ ಧೈರ್ಯ ಯಾರಿಗೂ ಇರಲಿಲ್ಲ. ತೋರಿಸಿದ್ದೇ ಆದಲ್ಲಿ ಅವರ 'ಅಭಿಮಾನಿ ದೇವರು'ಗಳು ಅವರನ್ನು ನೋಡಿಕೊಳ್ಳುತ್ತಿದ್ದರು! ಆದರೆ ಪರಿಸ್ಥಿತಿ ಈಗ ಬದಲಾಗಿದೆ. ರಾಜಕುಮಾರ್ ವೀರಪ್ಪನ್ ಮುಷ್ಟಿಗೆ ಸಿಲುಕಿಕೊಂಡಾಗ ಕನ್ನಡ ನಾಡಿನ ಜನತೆ ಅವರ ಬೆನ್ನಿಗಿದ್ದರು. ಆದರೆ ಅವರು ಬಿಡುಗಡೆಗೊಂಡ ನಂತರ ವಹಿಸಿದ ಮೌನ ಮತ್ತು ನಿಜಕ್ಕೂ ನಡೆದ್ದದ್ದೇನು ಎಂಬುದನ್ನು ಬಹಿರಂಗಗೊಳಿಸದೇ ಹೋದದ್ದು ಅವರ ಅಭಿಮಾನಿಗಳಿಗೆ ಬೇಸರ ತರಿಸಿದ್ದು ನಿಜ.

ತಮ್ಮ ಆರಾಧ್ಯ ದೈವದ ಮೌನವನ್ನು ಸಹಿಸದ ಅನೇಕ ಅಭಿಮಾನಿಗಳು ತಮ್ಮ ಅಭಿಮಾನವನ್ನು ಕಳಚಿ ಹಾಕಿದರು. ಇದಲ್ಲದೆ ರಾಜ್ ಕೂಡಾ ನಿಧಾನವಾಗಿ 'ತೆರೆಮರೆ'ಗೆ ಸರಿಯುತ್ತಿರುವುದೂ ಇದಕ್ಕೆ ಒಂದು ಕಾರಣವಾಯಿತು. ಇಲ್ಲಿಂದ ಆರಂಭವಾಯಿತು ರಾಜ್ ಕುಟುಂಬದ ಮೇಲೆ ನಿರಂತರ ಧಾಳಿ. ಅವರ 'ದೇವರು'ಗಳಾರು ಅವರ ನೆರವಿಗೆ ಧಾವಿಸಲಿಲ್ಲ. ಈಗ ತಮ್ಮ ಬಗ್ಗೆ ಅವರೇ



ರಾಜ್ ದಂಪತಿಗಳು

ಸಮಜಾಯಿಷಿ ಕೊಡುವ ಪರಿಸ್ಥಿತಿ ಬಂದಿದೆ. ಹಿಂದೆಂದೂ ಇಂತಹ ಪರಿಸ್ಥಿತಿ ಅವರಿಗೆ ಬಂದೊದಗಿರಲಿಲ್ಲ!

ರಾಜ್ ಕುಟುಂಬದ ಮೇಲಿನ ಆಪಾದನೆಗಳಲ್ಲಿ ಹುರುಳಿಲ್ಲದೇ ಇಲ್ಲ. ರಾಜ್ ಕುಟುಂಬ ಚಿತ್ರ ನಿರ್ಮಾಣಕ್ಕೆ ಕೈ ಹಾಕಿ 'ವಜ್ರೇಶ್ವರಿ ಕಂಬೈನ್ಸ್' ಆರಂಭವಾಗಿ, ಪಾರ್ವತಮ್ಮ ರಾಜಕುಮಾರ್‌ರವರು ವ್ಯವಹಾರದ ಚುಕ್ಕಾಣಿ ಹಿಡದ ಮೇಲೆಯೇ ಅಸಮಾಧಾನಗಳ ಹೊಗೆಯಾಡಿದ್ದು! ಕನ್ನಡ ಚಿತ್ರರಂಗದಲ್ಲಿ ಇತರರ ಏಳ್ಗೆಯನ್ನು ರಾಜ್ ಕುಟುಂಬ ಸಹಿಸುವುದಿಲ್ಲ, ಇತರ ನಾಯಕ ನಟರ ಚಿತ್ರಗಳಿಗೆ ಅಡ್ಡಿ ಉಂಟು ಮಾಡುತ್ತಾರೆ ಎಂಬ ಗುಸುಗುಸು ಆರಂಭವಾಯಿತು. ಆದರೆ ಯಾರೂ ಬಾಯಿ ಬಿಟ್ಟು ಮಾತನಾಡುವ ಧೈರ್ಯ ಮಾಡಲಿಲ್ಲ. ಅದಕ್ಕೆ ಕಾರಣವೂ ಇತ್ತು. ಅಂದಿನ ದೊಡ್ಡ ನಿರ್ಮಾಪಕರೆಲ್ಲಾ ರಾಜ್ ಸಿನಿಮಾಗಳಿಂದಲೇ ದುಡ್ಡು ಮಾಡಿದ್ದರು. ಹಾಗಾಗಿ ಅವರು ರಾಜ್‌ಗೆ ವಿಧೇಯರಾಗಿದ್ದರು. ಇದಲ್ಲದೆ ರಾಜ್ ಕೂಡಾ ಸಾಮಾಜಿಕ ಕಳಕಳಿಯ ಚಿತ್ರಗಳಿಂದ ಜನಮಾನಸದ ಮೇಲೆ ಅತ್ಯಂತ ಪ್ರಭಾವ ಬೀರಿದ್ದರು. ಮತ್ತು ಕನ್ನಡಪರ ಚಳುವಳಿಗಳಲ್ಲಿ ಅದರಲ್ಲೂ ಗೋಕಾಕ್ ಚಳುವಳಿಯಲ್ಲಿ ಮುಂಚೂಣಿಯಲ್ಲಿದ್ದರು. ತಮ್ಮ ಸರಳ, ಸಜ್ಜನಿಕೆಯ ನಡವಳಿಕೆಯಿಂದ ಗೌರವಯುತ ಸ್ಥಾನ ಹೊಂದಿ ಕನ್ನಡ ಚಿತ್ರರಂಗದ ಅನಭಿಶಕ್ತ ದೊರೆಯಾಗಿದ್ದರು.

'ರಾಜ್' ಹೆಸರಿನ ಶ್ರೀರಕ್ಷ ತಮಗಿರುವವರೆಗೂ ತಾವು ಏನು ಮಾಡಿದರೂ ನಡೆಯುತ್ತದೆ ಎಂಬ ನಂಬಿಕೆ ಕುಸಿಯುತ್ತಿದೆ. ಅವರ ಕುಟುಂಬದ ದರ್ಪ, ದುಂಡಾವರ್ತನೆಗಳು ಈಗ ಸುದ್ದಿಯಾಗುತ್ತಿವೆ.


ಕುಮಾರಸ್ವಾಮಿ


ಎಸ್.ರಮೇಶ್

ಈಗ ಕನ್ನಡ ಚಿತ್ರರಂಗಕ್ಕೆ ಹಣದಲ್ಲಿ ಗ
ಯಾಗಿರುವ ಮತ್ತು ರಾಜಕೀಯದ
ಪ್ರಭಾವವಿರುವ ಯುವ ನಿರ್ಮಾ
ರುಗಳು ಹೆಜ್ಜೆಯಿಡುತ್ತಿದ್ದಾರೆ. ಇವ
ಯಾರ ದಾಕ್ಷಿಣ್ಯವೂ ಇಲ್ಲ. ಹಾಗ
ತಮ್ಮನ್ನನು ತುಳಿಯುವ ಪ್ರಯತ್ನಗ
ಪ್ರತಿರೋಧ ಒಡ್ಡುತ್ತಿದ್ದಾರೆ.


ಒಬ್ಬಿಬ್ಬರ ಮಾತಾಗಿದ್ದರೆ ತಳ್ಳಿಹಾಕಿಬಿಡಬಹುದಾಗಿತ್ತು. ಆದರೆ ಉದ್ಯಮದ ಹಲವರಿಂದ ರಾಜ್ ಕುಟುಂಬದ ಮೇಲೆ ಆಪಾದನೆಗಳು ಕೇಳಿ ಬರುತ್ತಿವೆ ರಾಜ್ ಕುಟುಂಬ ಆತ್ಮಾವಲೋ ಮಾಡಿಕೊಳ್ಳಬೇಕು. ತಪ್ಪುಗಳಾಗಿದ್ದಲ್ಲಿ ತಿದ್ದಿಕೊಳ್ಳಬೇ ಇತರ ನಿರ್ಮಾಪಕರು ಸಹ ಜಗಳವನ್ನು ಬೀದಿಗೆ ತರದೆ ಮಾತುಕತೆಗಳಲ್ಲಿ ಬಗೆಹರಿಸಿಕೊಳ್ಳಬೇಕು. ಇದಕ್ಕೆ ರಾಜ್ ಮಧ್ಯಪ್ರವೇಶ ಅತ್ಯಗತ್ಯ. ಏಕೆಂದರೆ ರಾಜ್ ಕುಟುಂಬದೆಡೆಗೆ ಬೆರಳು ತೋರಿಸುವವರಿಗ ರಾಜ್ ಬಗ್ಗೆ ಅಪಾರ ಗೌರವವಿದೆ. ಸ್ವತಃ ರಾಜ್‌ರೇ ಸಮಾರಂಭವೊಂದರಲ್ಲಿ ಕನ್ನಡ ಚಿತ್ರರಂಗ ಕುಟುಂಬದಂತೆ ಇದ್ದು, ಸಹೋದರತೆಯಿಂದ ಬಾಳಬೇಕೆಂಬ ಆಶ ವ್ಯಕ್ತಪಡಿಸಿದ್ದರು. ಆದ್ದರಿಂದ ಭಿನ್ನಾಭಿಪ್ರಾ ಗಳನ್ನು ಬಗೆಹರಿಸಿಕೊಳ್ಳಲು, ಸೌಹಾರ್ದ ವಾತಾವರಣಕ್ಕೆ ಎಲ್ಲರೂ ಕೈಜೋಡಿಸಬೇ ಆಗ ಮಾತ್ರ ಕನ್ನಡ ಚಿತ್ರರಂಗ ಏಳ್ಗೆಸಾಧ್ಯ

■ ರಾ



'ದೇವರು' ಎಂಬುದು ಒಂದು ಚಿಕ್ಕಪುಸ್ತಕ. ಕೇವಲ 200 ಪುಟಗಳಿವೆ. ಪಿ.ವಿ.ಕೆ.ಮೂರ್ತಿಯವರು ಪ್ರಕಟಿಸಿದ್ದಾರೆ. ಈ ಪುಸ್ತಕ ಹತ್ತು ಮುದ್ರಣ ಕಂಡಿದೆ. ಇದಕ್ಕೆ ಕಾರಣವೇನು? ಅದಕ್ಕೆ 'ದೇವರು' ಬಗ್ಗೆ ಜನರಿಗಿರುವ ಕುತೂಹಲವೆ ಕಾರಣ. ಆದರೆ ಪುಸ್ತಕವನ್ನು ಓದುವಾಗ ಕೆಲವರಿಗೆ - ಕೆಲವರಿಗಲ್ಲ ಹಲವರಿಗೆ ಹುಬ್ಬು ನೆತ್ತಿಗೇರುತ್ತದೆ. ಆದರೆ ಕುತೂಹಲ ಮಾತ್ರ ಮಾಯವಾಗುವುದಿಲ್ಲ. ಯಾಕೆಂದರೆ 'ದೇವರು' ಅಂತಹ ಕುತೂಹಲದ ನಿಗೂಢ ರಹಸ್ಯದ ಸಂಗತಿ.

ಈ ಪ್ರಪಂಚವನ್ನು ಯಾರು ಸೃಷ್ಟಿಸಿದರು? ಇದು ಕುತೂಹಲ - ಈ ಹೊಳೆ, ಈ ಸಾಗರ, ಈ ಬೆಟ್ಟ, ಈ ಕಣಿವೆ, ಈ ಸೂರ್ಯ ಒಂದೇ ಎರಡೇ. ಇಂತಹವನ್ನು ದೇವರೇ ಸೃಷ್ಟಿಸಿರಬೇಕು. ಇಂತಹದನ್ನು ಸೃಷ್ಟಿಸುವ ದೇವರು ಸರ್ವಶಕ್ತನಾಗಿರಬೇಕು. ಅವನು ಕರುಣಾಮಯಿ. ಅವನಿಗೆ ಶರಣಾದರೆ ಪೂಜೆ, ಪ್ರಾರ್ಥನೆ ಸಲ್ಲಿಸಿದರೆ ನಮ್ಮ ತಪ್ಪನ್ನು ಮನ್ನಿಸಿ ಸುಖಕೊಟ್ಟು ಕಾಪಾಡುತ್ತಾನೆ. ಇದು ಹಿಂದೂಗಳ ನಂಬಿಕೆ ಮಾತ್ರವಲ್ಲ, ಕ್ರಿಶ್ಚಿಯನ್, ಇಸ್ಲಾಂ ಮುಂತಾದ ಎಲ್ಲಾ ಧರ್ಮಗಳ ನಂಬಿಕೆ. ಆದರೆ ಮೂರ್ತಿರಾವ್ ಅವರು ಈ ನಂಬಿಕೆಯನ್ನು ಛಿದ್ರಗೊಳಿಸುತ್ತಾರೆ. ಅವರೆನ್ನುತ್ತಾರೆ, ದೇವರು ಕರುಣಾಳುವಲ್ಲ, ಯಾಕೆಂದರೆ ಜಗತ್ತಿನ ತುಂಬಾ ಎಷ್ಟೊಂದು ಸಂಕಟಗಳು ತುಂಬಿವೆ?



ಬಡವ-ಬಲ್ಲಿದ, ಕುರುಡ- ಕುಂಟ, ಅತಿವೃಷ್ಟಿ - ಅನಾವೃಷ್ಟಿ, ಹಿಟ್ಲರ್, ಡೈಯರ್ ನಂತಹ ಕ್ರೂರಿಗಳು, ತಮ್ಮ ತಮ್ಮ ದೇವರು -ಧರ್ಮದ ಹೆಸರಿನಲ್ಲಿ ಪೈಶಾಚಿಕ ಕೊಲೆ ಇತ್ಯಾದಿಗಳನ್ನು ಕರುಣಾಮಯಿಯಾದ ದೇವರು ಸೃಷ್ಟಿಸಲು ಸಾದ್ಯವಿಲ್ಲ. ಇಂತಹ ಸೃಷ್ಟಿ ಮಾಡಿದ ದೇವರು ಹೇಗೆ ಕರುಣಾಳು ಆಗಲು ಸಾಧ್ಯ?. ಕರುಣಾಳು ಎಂದು ಒಪ್ಪಿದರೆ ಅವನು ಸರ್ವಶಕ್ತನಲ್ಲ. ಯಾಕೆಂದರೆ ಸರ್ವಶಕ್ತನಾಗಿದ್ದರೆ ಆತ ಈ ಎಲ್ಲಾ ಸಂಕಟವನ್ನು ತಡೆಯ ಬಹುದಾಗಿತ್ತು. ಆದರೆ ಅವನಿಗೆ ಆ ಶಕ್ತಿ ಇಲ್ಲ. ಈ ಮಾತನ್ನು ಗೌರೀಶ ಕಾಯ್ಕಿಣಿಯವರು ತಮ್ಮ 'ನಾಸ್ತಿಕ ಕೊಟ್ಟ ದೇವರು' ಪುಸ್ತಕದಲ್ಲಿ ಹೇಳಿದ್ದಾರೆ. ಇಂತಹ ಮಾತನ್ನು ಕೇಳಿದರೆ ದೇವರ ಭಕ್ತರಿಗೆ ಏನು ಅನಿಸಲಿಕ್ಕಿಲ್ಲ?

ಮೂರ್ತಿರಾವ್ ಹೇಳುತ್ತಾರೆ; ದೇವರು ನಿರ್ಗುಣನಾದರೆ ಪ್ರಪಂಚವನ್ನು ಸೃಷ್ಟಿಸುವ ಗುಣ ಬರಲು ಸಾಧ್ಯ ಇಲ್ಲ. ಗುಣವಿಲ್ಲದವನಾದ ದೇವನಿಗೆ ಅಸ್ತಿತ್ವವೇ ಇರುವುದಿಲ್ಲ. ಗುಣವುಳ್ಳವನಾದರೆ ದೇವರಲ್ಲ, ಕೇವಲ ವ್ಯಕ್ತಿ' ಮೂರ್ತಿರಾವ್ ಅವರು 'ದೇವರು ಒಂದ ಕಲ್ಪನೆ ಅಷ್ಟೇ' ಎನ್ನುತ್ತಾರೆ. ಅದನ್ನು ಅವರು ಹೀಗೆ ವಿವರಿಸುತ್ತಾರೆ - ನಾವು ನೋಡಿದ್ದಕ್ಕಿಂತ ಹೊರಗಿನದ್ದನ್ನು ಮನುಷ್ಯ ಊಹಿಸಲಾರ. ಆದ್ದರಿಂದ ನಮ್ಮಂತೇ ಅವನಿಗೆ (ದೇವರಿಗೆ) ಹೆಂಡತಿ, ಮಕ್ಕಳು, ಬಂಧುಗಳು, ವಾಹನ, ಸೇವಕರು, ಇತ್ಯಾದಿ ಇರುತ್ತಾರೆ. ಒಂದು ವೇಳೆ ಮೂರ್ತಿಯಲ್ಲ ಎನ್ನುವವರೂ ದೇವರು ಸಾಮ್ರಾಜ್ಯವನ್ನು ವರ್ಣಿಸುತ್ತಾರೆ. ಕೊನೆಯ ವಿಚಾರಣೆ ಅವನದೆನ್ನುತ್ತಾರೆ.

ಡಿ.ವಿ.ಜಿ.ಯವರು ಸರ್ವಂ ಖಲ್ವದಂ ಬ್ರಹ್ಮ (ಇದೆಲ್ಲವೂ ಬ್ರಹ್ಮಂ), ವೇದಂ ಸರ್ವಂ(ಇದೆಲ್ಲ ದೇವರು)ಎನ್ನುತ್ತಾರೆ. ಅಂದರೆ ಈ ಲೋಕವೆಲ್ಲವೂ ಬ್ರಹ್ಮ ಎಂದು ಹೇಳಿದಂತಾಯಿತು. ಈ ಲೋಕವೇ ಬ್ರಹ್ಮ ಆದಮೇಲೆ ಈ ಲೋಕವನ್ನು ಬ್ರಹ್ಮ ಸೃಷ್ಟಿಸಿದ ಎಂಬುದು ಸುಳ್ಳಾಯಿತು. ಆದ್ದರಿಂದ ಈ ಎರಡು ಮಾತಿಗೆ ಹೊಂದಾಣಿಕೆಯುವುದಿಲ್ಲ.

ಗಣಪತಿಯನ್ನೇ ತೆಗೆದುಕೊಳ್ಳಿ, ಅವನ ರೂಪವೇ ಹಾಸ್ಯಾಸ್ಪದ. ಇರಲಿ. ಆತ ಹುಟ್ಟಿದ್ದು ಹೇಗೆ? ಪಾರ್ವತಿಯ ಮೈಕೆಸರಿನಿಂದ. ಬಾಗಲಲ್ಲಿ ನಿಂತ ಗಣಪತಿಯನ್ನು ಈಶ್ವರ ಎಲ್ಲಿಂದಲೋ ಬಂದವನು ಕುತ್ತಿಗೆ ಇರಿಯುತ್ತಾರೆ. ನಂತರ ಈತ (ಪಾರ್ವತಿಯ) ತನ್ನದೇ ಮಗನೆಂದು ತಿಳಿದು ಆನೆಯ ತಲೆ ಜೋಡಿಸುತ್ತಾನೆ. ಈ ಈಶ್ವರ ದೇವರ ಕತೆ ಹೀಗೇಕೆ? ಇಂತಹ ಅನೇಕ ಘಟನೆಗಳನ್ನು ಮೂರ್ತಿರಾವ್ ಕೊಡುತ್ತಾರೆ.

ಹಾಗಾದರೆ ಇಷ್ಟು ಕುತೂಹಲಕ್ಕೆ ಕಾರಣವಾದ ದೇವರ ಹುಟ್ಟು ಹೇಗಾಯಿತು? "ಶತಮಾನಗಳ ಹಿಂದೆ ಮಾನವನ ಆತ್ಮಪ್ರಜ್ಞೆ ಅರಳಿ ಅವನು ತನ್ನ ಸುತ್ತಲ ಪ್ರಪಂಚವನ್ನು ಕುತೂಹಲದಿಂದ ನೋಡಲಾರಂಭಿಸಿದಾಗ ಆತನಿಗೆ ಕಂಡದ್ದೇನು? ಅಗ್ನಿಪರ್ವತಗಳಿಂದ ಭುಗಿಲೆದ್ದು ಗಗನಕ್ಕೆ ಏರುತ್ತಿರುವ ಜ್ವಾಲೆ; ಕಾದು ಕರಗಿ ಉಲ್ಕೆ; ತನ್ನ ದಾರಿಯಲ್ಲಿ ಸುಟ್ಟು ಹರಿಯುತ್ತಿರುವ ಲಾವಾರಸ; ಮೋಡದ ದಟ್ಟಣೆಯಿಂದ ಇರಿದು ಕಣ್ಣು ಕೋರೈಸುವ ಮಿಂಚು; ಕಾಳ್ಗಿಚ್ಚಿನಿಂದ ಭಸ್ಮವಾಗುತ್ತಿರುವ ಕಾಡು, ಕ್ಷುಬ್ಧವಾದ ಸಮುದ್ರ, ಗುಡುಗು-ಮಿಂಚಿನ... ಈ ಪ್ರಪಂಚದಲ್ಲಿ ನಾನು ಹೇಗೆ ತಾನೆ ಬದುಕಿಯೇನು? ಎಂದು ಅವನು ತಲ್ಲಣಿಸಿರಬೇಕು. ಹಾಗೇ ಸೂರ್ಯೋದಯ, ಸೂರ್ಯಾಸ್ತ, ಬೆಳದಿಂಗಳು, ಸಮುದ್ರ
ಗಾಂಭೀರ್ಯ ಇತ್ಯಾದಿ ಸೌಂದರ್ಯ ಅವ
ಇದೊಂದು ಒಗಟು. ಆ ಒಗಟಿನ ಮ
'ದೇವರು'. ಹೀಗೆ ಭಯ ಆಶ್ಚರ್ಯದಿ
ದೇವರು ಎಂಬ ಕಲ್ಪನೆ ಬಂತು.

ಮನುಕುಲಕ್ಕೆ ಕರುಣಾದ್ರ ಹೃದಯ
ಪ್ರೇಮಸ್ವರೂಪಿಯೂ ಆದ ದೇವರು ಬೇ
ಇರಾನಿನಲ್ಲಾದ ಭೂಕಂಪ ತಡೆಯ ಬ
ದೇವರು, ಹಿಟ್ಲರ್-ಮುಸಲೊ
ಯಂತಹವರನ್ನು ಹದಕ್ಕೆ ತರುವಂತ
ದೇವರು, ನ್ಯೂಕ್ಲಿಯರ್ ಅಸ್ತ್ರವನ್ನು ಬಳಸದ
ದೇವರು, ಜೀವಕೋಟಿಯ ಸಂಕಟವ
ಪರಿಹರಿಸಬಲ್ಲ ದೇವರು. ಅಂಥ ದೇವರ
ಯಾರು ಬೇಡವೆನ್ನುತ್ತಾರೆ. ಕಾಲ್ಪನಿಕವಾದು
ಸತ್ಯ ಎಂದುಕೊಳ್ಳುವ, ಭ್ರಮೆಗೆ ತು
ಬಾರದು. ಒಳ್ಳೆಯತನಕ್ಕೆ - ದೇವರ ಅವ
ಯಿಲ್ಲ. ಮನುಷ್ಯ ಪ್ರಯತ್ನಗಳಲ್ಲಿ ಅ
ಮುಖ್ಯವಾದದ್ದೆಂದರೆ ನಮ್ಮ ಕರ್ಮ
ನೀತಿಯುತವಾಗಿರಬೇಕೆಂದು ಮಾಡ
ಪ್ರಯತ್ನ. ನಮ್ಮ ಆಂತರಿಕ ಸಮತೋ
ಅಷ್ಟೇಕೆ ನಮ್ಮ ಉಳಿವು, ಅಸ್ತಿತ್ವ ಕೂಡಾ ಅ
ಅವಲಂಬಿಸಿದೆ. ನಾವು ಮಾಡುವ ಕೆಲಸ
ನೀತಿಯುತವಾಗಿದ್ದರೆ ಮಾತ್ರ ಬದುಕಿಗೊ
ಸೌಂದರ್ಯ, ಗಾಂಭೀರ್ಯ ಇರು
ಬಹುಶಃ ಈ ನೀತಿ ಜೀವಂತ ಶಕ್ತಿ
ರುವಂತೆ ಮಾಡಿರುವುದೇ ವಿದ್ಯಾಭ
ಮುಖ್ಯ ಕೆಲಸ ಎಂಬುದು ಐನ್‌ಸ್ಟೈನ್
ಮಾತು ವಿನಾ ಬೇರೆ ದೇವರಿಲ್ಲ.

ಹೌದು ಕರುಣಾಮಯಿಯಾದ,
ಸಂಕಟವನ್ನು ಪರಿಹರಿಸಬಲ್ಲ ದೇವರು
'ದೇವರು ಬೇಕು, ಆದರೆ ಅವನಿಲ್ಲ!
ನಮ್ಮ ಕರುಣಾಜನಕ ಐರನಿ"
ಎ.ಎನ್.ಮೂರ್ತಿರಾವ್ ಅವರ ದೇವ

● ಡಾ. ಆರ್. ವಿ.ಭ
ಹೊ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH